

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 8 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 348 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಪುನೀತ್ ರಾಜ್‌ಕುಮಾರ್ ಕನಸು ನನಸು

ಶಕ್ತಿಧಾಮ ವಿದ್ಯಾಶಾಲಾಗೆ ಸಿಎಂ ಶಂಕುಸ್ಥಾಪನೆ; 5 ಕೋಟಿ ನೆರವು

● ಇದೇ ವೇಳೆ ಇನ್‌ಫೋಸಿಸ್ ಬ್ಲಾಕ್ ಕಟ್ಟಡ ಉದ್ಘಾಟನೆ ● ಕೆಂಪಯ್ಯ ಅಂತಃಕರಣಕ್ಕೆ ಒತ್ತಾಸೆಯಾದ ಡಾ.ರಾಜ್‌ಕುಮಾರ್ ದಂಪತಿ ಸ್ಮರಣೆ ● ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ವಿಷಾದ



ಮೈಸೂರಿನ 'ಶಕ್ತಿಧಾಮ' ಸಂಸ್ಥೆ ಆವರಣದಲ್ಲಿ ನಿರ್ಮಿಸಿರುವ ಇನ್‌ಫೋಸಿಸ್ ಫೌಂಡೇಷನ್ ಬ್ಲಾಕ್ ಕಟ್ಟಡದ ಲೋಕಾರ್ಪಣೆ ಹಾಗೂ 'ಶಕ್ತಿಧಾಮ ವಿದ್ಯಾಶಾಲಾ' ಕಟ್ಟಡದ ಶಂಕುಸ್ಥಾಪನೆ ಸಮಾರಂಭವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಸುತ್ತೂರು ಶ್ರೀಗಳು, ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಲ್.ನಾಗೇಂದ್ರ, ಎಸ್.ಎ.ರಾಮದಾಸ್, ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ನಟ ಶಿವರಾಜ್‌ಕುಮಾರ್, ಸಂಸ್ಥೆಯ ಅಧ್ಯಕ್ಷೆ ಗೀತಾ ಶಿವರಾಜ್‌ಕುಮಾರ್, ಶಕ್ತಿಧಾಮದ ಉಪಾಧ್ಯಕ್ಷ ಕೆಂಪಯ್ಯ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್ ಇನ್ನಿತರರಿದ್ದಾರೆ.

ಮೈಸೂರು,ಏ.7(ಎಸ್‌ಬಿಡಿ)–ಮೈಸೂರಿನ 'ಶಕ್ತಿಧಾಮ' –ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರಕ್ಕೆ 5 ಕೋಟಿ ರೂ. ನೆರವು ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಗುರುವಾರ 'ಶಕ್ತಿಧಾಮ'ದ ಆವರಣದಲ್ಲಿ ನಿರ್ಮಿಸಿರುವ ಇನ್‌ಫೋಸಿಸ್ ಫೌಂಡೇಷನ್ ಬ್ಲಾಕ್ ಕಟ್ಟಡದ ಲೋಕಾರ್ಪಣೆ ಹಾಗೂ 'ಶಕ್ತಿಧಾಮ ವಿದ್ಯಾಶಾಲಾ' ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದ ಅವರು, ನಟ ಶಿವರಾಜ್‌ಕುಮಾರ್ ಅವರೊಂದಿಗೆ 'ಶಕ್ತಿಧಾಮ' ಸಂಸ್ಥೆ ಬಗ್ಗೆ ಚರ್ಚಿಸಿದ ವೇಳೆ ಇಂತಹ ಸೇವಾ ಸಂಸ್ಥೆಗಳಿಗೆ ಸರ್ಕಾರದ ನೆರವು ನೀಡಬೇಕೆಂದು ಪ್ರೇರಣೆ ಆಯಿತು. ಶಕ್ತಿಧಾಮದ ಮ್ಯಾನೇಜಿಂಗ್ ಟ್ರಸ್ಟಿ ಜಿ.ಎಸ್.ಜಯದೇವ ಅವರು ಎಷ್ಟು ಅನುದಾನ ನೀಡುತ್ತೀರಿ ಎಂದು ಕೇಳಿದ್ದನ್ನು ಲೆಕ್ಕ ಹಾಕಿದೆ. ಅವರು ಐದು ಬಾರಿ ಕೇಳಿದರು. ಹಾಗಾಗಿ 5 ಕೋಟಿ ರೂ. ಅನುದಾನ ನೀಡುತ್ತೇನೆ ಎಂದು ನಗುತ್ತಾ ಹೇಳಿದರು.

ನಾನು ಆರ್ಥಿಕತೆ ಬಗ್ಗೆ ನಂಬಿಕೆ ಇಟ್ಟಿದ್ದೇನೆ. ಆರ್ಥಿಕತೆ ಅಂದರೆ ಹಣವಲ್ಲ, ಜನ ಎನ್ನುವುದು ನನ್ನ ಭಾವನೆ. ದುಡಿಮೆ ಮಾಡಿದರೆ ತಾನಾಗಿಯೇ ಆರ್ಥಿಕ ಅಭಿವೃದ್ಧಿಯಾಗುತ್ತದೆ. 'ದುಡ್ಡೇ ದೊಡ್ಡಪ್ಪ' ಎನ್ನುವುದು ಹಳೆಯ ಮಾತು. ಈಗೇನಿದ್ದರು 'ದುಡಿಮೆಯೇ ದೊಡ್ಡಪ್ಪ'. ಹಾಗಾಗಿ ದುಡಿಮೆಗೆ ಪ್ರೋತ್ಸಾಹ ನೀಡುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಈ ವರ್ಷ 4 ಲಕ್ಷ ಹೆಣ್ಣು ಮಕ್ಕಳ ಸ್ವಯಂ ಉದ್ಯೋಗಕ್ಕೆ 500 ಕೋಟಿ ರೂ. ಸೇರಿ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿಯೇ ಒಟ್ಟು 43 ಸಾವಿರ ಕೋಟಿ ● 9ನೇ ಪುಟಕ್ಕೆ

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದರೆ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ; ನಿಮಗೂ ಪಕ್ಷ ಉತ್ತಮ ಸ್ಥಾನಮಾನ ಕಲ್ಪಿಸುತ್ತದೆ...

● ಡಿ.ಕೆ.ಶಿವಕುಮಾರ್‌ಗೆ ರಾಹುಲ್ ಗಾಂಧಿ ಕಿವಿಮಾತು ● ಯಾವುದೇ ಕಾರಣಕ್ಕೂ ಪೈಪೋಟಿಗಿಳಿಯಬೇಡಿ; ಮೊದಲು ಪಕ್ಷ ಅಧಿಕಾರಕ್ಕೆ ತನ್ನಿ ● ಇತ್ತೀಚಿನ ರಾಜ್ಯ ಭೇಟಿ ವೇಳೆ ದೆಹಲಿಗೆ ತೆರಳುವಾಗ ಕಾರಲ್ಲಿ ಕೂರಿಸಿಕೊಂಡು ಡಿಕೆಶಿ, ಬಿ.ಕೆ.ಹರಿಪ್ರಸಾದ್‌ಗೆ ಮನದಟ್ಟು



ಬೆಂಗಳೂರು,ಏ.7(ಕೆಎಂಶಿ)–ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದರೆ, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸ್ಪಷ್ಟಪಡಿಸಿದ್ದಾರೆ.

ಇತ್ತೀಚೆಗೆ ಎರಡು ದಿನಗಳ ರಾಜ್ಯ ಪ್ರವಾಸ ಮುಗಿಸಿ, ದೆಹಲಿಗೆ ತೆರಳುವ ಸಂದರ್ಭದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ತಮ್ಮ ಕಾರಿನಲ್ಲಿಯೇ ಜೊತೆ ಕೂರಿಸಿಕೊಂಡು ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ನಾಯಕತ್ವದ ಬಗ್ಗೆ ರಾಹುಲ್ ಸ್ಪಷ್ಟವಾಗಿ ತಿಳಿಸಿದ್ದಾರೆ. ಪರಿಷತ್‌ನ ಪ್ರತಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಕೂಡ ಇವರ ಜೊತೆಯಲ್ಲೇ ಪ್ರಯಾಣ ಬೆಳೆಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವ ಸನಿಹದಲ್ಲಿದೆ. ನೀವು ಮತ್ತು ಸಿದ್ದರಾಮಯ್ಯ ಒಂದಾಗಿ ಹೋರಾಟ ನಡೆಸಿದರೆ ಮಾತ್ರ ಅಧಿಕಾರಕ್ಕೆ ಬರಲು ಸಾಧ್ಯ. ಸಿದ್ದರಾಮಯ್ಯ ಜೊತೆ ಹಾವು ಏಣಿ ಆಟಕ್ಕೆ ಇಳಿಯಬೇಡಿ. ● 6ನೇ ಪುಟಕ್ಕೆ

ನಾನೇ ಮುಖ್ಯಮಂತ್ರಿ ಆಗಿ ನೀರಾವರಿ ಯೋಜನೆಗೆ ಚಾಲನೆ ನೀಡ್ತೇನೆ...!



ಬೆಂಗಳೂರು ಏ.7(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ನಾನೇ ಮುಖ್ಯಮಂತ್ರಿಯಾಗಿ ನೀರಾವರಿ ಯೋಜನೆಗಳಿಗೆ ಚಾಲನೆ ನೀಡುತ್ತೇನೆ ಎಂದು ವಿಧಾನ ಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ.

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವಕ್ಕಾಗಿ ಪೈಪೋಟಿ ನಡೆಯುತ್ತಿರುವ ಕಾಲದಲ್ಲಿ ಸಿದ್ದರಾಮಯ್ಯ ಈ ಹೇಳಿಕೆ ನೀಡಿದ್ದಾರೆ.

ಪಕ್ಷದ ವರಿಷ್ಠ ರಾಹುಲ್‌ಗಾಂಧಿ ಅವರು ರಾಜ್ಯಕ್ಕೆ ಭೇಟಿ ನೀಡಿ, ಹಿಂತಿರುಗಿದ ನಂತರ ಸಿದ್ದರಾಮಯ್ಯ ● 6ನೇ ಪುಟಕ್ಕೆ


ವಕೀಲರಾದ
ಎಂ.ಜಿ.ಸಿದ್ಧರಾಜು
ರವರಿಗೆ
ಹುಟ್ಟು ಹಬ್ಬದ
ಶುಭಾಶಯಗಳು
ಜಿ.ಪಿ ಕನ್ನೇಗೌಡ
ತಾಲ್ಲೂಕು ಪಂಚಾಯಿತಿ ಸದಸ್ಯರು ಬೋಗಾದಿ
ಚಂದ್ರಶೇಖರ್
ಬಿಎಪಿಸಿಎಂಎಸ್ ನಿರ್ದೇಶಕರು
ಮಾಜಿ ಗ್ರಾ.ಪಂ. ಸದಸ್ಯರು
ಕೇಬಲ್ ರವಿ
ಎಂ.ಡಿ. ದುರ್ಗಾಗ್ರೂಪ್ಸ್
ಸವಿತಾ ಸುರೇಶ್
ನಗರ ಪಾಲಿಕೆ ಸದಸ್ಯರು
ಎನ್.ಚಂದ್ರಶೇಖರ್
ನಿರ್ದೇಶಕರು ಜನಹಿತ ವಿವಿದ್ದೋದ್ದೇಶ
ಸಹಕಾರ ಸಂಘ
ಇ.ಪಿ.ರವಿ
ಮಾಜಿ ಗ್ರಾ.ಪಂ.ಉಪಾಧ್ಯಕ್ಷರು,
ಹಾಲಿ ಸದಸ್ಯರು
ಸಂತೋಷ್
ಮಾಲೀಕರು : ವೈಎಸ್ ಪ್ರಾಪರ್ಟೀಸ್
ಎನ್ ರಾಜು
ಪ್ರೆಸ್
ನೇತ್ರಾವತಿ ವೆಂಕಟೇಶ್
ತಾಲ್ಲೂಕು ಪಂಚಾಯಿತಿ ಸದಸ್ಯರು
ಶಂಬೇಗೌಡ
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಎಸ್.ಬಿ. ಶಿವು
ಅಧ್ಯಕ್ಷರು
ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರು
ಮಹದೇವು
ಯುವ ಮುಖಂಡರು
ಮಹೇಶ್
ಸಿವಿಲ್ ಕಂಟ್ರಾಕ್ಟರ್
ಬಿ. ರವಿ
ಮಹದೇಶ್ವರ ಚಿತ್ರಮಂದಿರ
ಮಾಲೀಕರು
ಲೋಕೇಶ್ ಎಂ
ನಿರ್ದೇಶಕರು
ವಿಶ್ವಶಾಂತಿ ಗೃ. ನಿ. ಸಹಕಾರ ಸಂಘ (ನಿ)ಮೈಸೂರು
ಅಂಗಡಿ ನಾಗರಾಜು
ಮಾಜಿ ಗ್ರಾಮ ಪಂಚಾಯಿತಿ
ಸದಸ್ಯರು
ಹೊನ್ನೇಗೌಡ
ಮಾಜಿ ಗ್ರಾಮ ಪಂಚಾಯಿತಿ
ಸದಸ್ಯರು
ಉಮೇಶ್
ಯುವ ಮುಖಂಡರು
ಮಂಜು
ಯುವ ಮುಖಂಡರು
ಸೊಸೈಟಿ ಆನಂದ್
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಮಂಜು (ಟವರ್)
ಯುವ ಮುಖಂಡರು
ಗುರುರಾಜ್ ವಿ
ಯುವ ಮುಖಂಡರು
ಶ್ರೀನಿವಾಸ್
ಸಿವಿಲ್ ಕಂಟ್ರಾಕ್ಟರ್
ಜಿ. ಸ್ವಾಮಿ
ಯುವ ಮುಖಂಡರು
VISMAYA
ADVERTISERS
ಶುಭ ಕೋರುವವರು : ದುರ್ಗಾ ಗ್ರೂಪ್ಸ್

ನಕ್ಕರೆ ಅದೇ ಸ್ವರ್ಗ

ಗಂಡ : "ಸಕ್ಕರೆ ಉಪಯೋಗಿಸಬೇಡ ಕಣೇ. ನನಗೆ ಸಕ್ಕರೆ ಖಾಯಿಲೆ ಇದೆಯಂತೆ"

ಪತ್ನಿ : "ಅದಕ್ಕೇ ಈ ಬಾರಿ ಮನೆ ಸಾಮಾನಿನ ಪಟ್ಟಿಯಲ್ಲಿ ಬೆಲ್ಲ ಬರೆದಿದ್ದೇನೆ!"

ಮೈಸೂರು ಮಿತ್ರ

ಶುಕ್ರವಾರ, 8 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ದುಃಖಿತರಾಗಿದ್ದರೂ ತಮಗಿಂತ ಹೆಚ್ಚು ದುಃಖಿತರಾದವರನ್ನು ನೋಡಿಯಾದರೂ ಬದುಕು ಸಾಗಿಸಬೇಕು. –ನೀತಿಸಾರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಡುಗೆ ಯಾಕೆ ಹಿಂಗೆ ಅಂದ್ರೆ ಕೋಣೆ ಕಿರಿದಾಗಿತ್ತು ಅಂದ್ಲಂತೆ

ನಿಮ್ಮ ಪತ್ರಗಳು

ಮಾಂಸ ಮನುಷ್ಯನ ಆಹಾರವೇ?

ಮಾನ್ಯರೆ,

ಮನುಷ್ಯ ಜನ್ಮವು ಸಾತ್ವಿಕ ಗುಣದಿಂದ ರೂಪುಗೊಂಡಿರುತ್ತದೆ. ಮನುಷ್ಯನು ಸಸ್ಯಾಹಾರಿಯೇ ಹೊರತು ಮಾಂಸಾಹಾರಿಯಲ್ಲ. ಇಂದು ಕೆಲವು ರಾಜಕೀಯ ವ್ಯಕ್ತಿಗಳು ಒಂದು ಪಂಗಡದವರನ್ನು ಓಲೈಸಲು ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ನೀಡುತ್ತಿರುವ ಪರಿ ನೋಡಿದಾಗ ಇವರು ರಾಕ್ಷಸ ಕುಲದವರೆಂದು ಭಾಸವಾಗುತ್ತದೆ. ಆರ್ಯ ಬಂಧುಗಳೇ, ಮನುಷ್ಯನು, ಸತ್ಯ, ಧರ್ಮವನ್ನು ಸ್ವೀಕಾರ ಮಾಡಿ ಬದುಕಬೇಕೇ ವಿನಃ ರಾಕ್ಷಸ ಕುಲದವರಾಗಬಾರದು. ಸನಾತನ ಧರ್ಮ ಅನುಸಾರ ಮಹರ್ಷಿ ಪತಂಜಲಿಯವರು ಹೇಳಿದಂತೆ ಅಷ್ಟಾಂಗ ಯೋಗದಲ್ಲಿ ಬರುವ ಮೊದಲನೆಯ ಯಮ ನಿಯಮವನ್ನು ಪಾಲನೆ ಮಾಡಬೇಕಾಗಿರುವುದು ಪ್ರತಿಯೊಬ್ಬ ಆರ್ಯ ಪುತ್ರರ ಕರ್ತವ್ಯವಾಗಿರುತ್ತದೆ. ಯಮದ ಮೊದಲನೇಯ ತತ್ವವೇ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಅಪರಿಗ್ರಹ, ಅಹಿಂಸೆಯೆಂದರೆ ಯಾವುದೇ ಪ್ರಾಣಿಯನ್ನು ಹಿಂಸಿಸುವುದಾಗಲಿ, ಪ್ರಾಣಿಗಳನ್ನು ಕೊಂದು ಮಾಂಸವನ್ನು ಭಕ್ಷಣೆ ಮಾಡುವುದಾಗಲಿ ಮನುಷ್ಯನ ಧರ್ಮವಲ್ಲ. ಇಂದು ಯಾವುದೇ ಸರ್ಕಾರ ಬಂದರೂ ಪ್ರಾಣಿಗಳ ಬಲಿಯನ್ನು ನಿಷೇಧಿಸಿ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಿಸಬೇಕಾಗಿರುವುದು ಮೊದಲ ಕರ್ತವ್ಯವಾಗಿರುತ್ತದೆ. ಆರ್ಯ ಸಮಾಜ ಸಂಸ್ಥಾಪಕರಾದ ಮಹರ್ಷಿ ದಯಾನಂದ ಸರಸ್ವತಿಯವರು ಯಮ ನಿಯಮಗಳ ಪಾಲನೆ ಮಾಡುವುದನ್ನು ಮಾನವ ಧರ್ಮವೆಂದು ರಚಿಸಿರುವ ಸತ್ಯಾರ್ಥ ಪ್ರಕಾಶವೆಂಬ ಆಧ್ಯಾತ್ಮಿಕ ಗ್ರಂಥದಲ್ಲಿ ಉಲ್ಲೇಖಿಸಿರುತ್ತಾರೆ. ಇನ್ನು ಮುಂದಾದರೂ ರಾಜಕೀಯ ವ್ಯಕ್ತಿಗಳು ಕೊಡುವ ಹೇಳಿಕೆಗಳು ಸತ್ಯ ಧರ್ಮವನ್ನು ಸ್ವೀಕಾರ ಮಾಡುವ ರೀತಿಯಲ್ಲಿರಬೇಕು, ಕೋಮು ಸೌಹಾರ್ದತೆಯ ಲಕ್ಷಣವಾಗಿರಬೇಕು, ಇಂದು ದೇಶವನ್ನು ಧರ್ಮದ ರಕ್ಷಣೆಯನ್ನು ಮಾಡುತ್ತಿರುವ ಕೆಲವು ಸಂಘಟನೆಗಳನ್ನು ಸಮಾಜಘಾತುಕರು ಎಂದು ಹೇಳಿಕೆ ನೀಡಿರುವ ವ್ಯಕ್ತಿಯನ್ನು ದೇಶದ್ರೋಹಿಯೆಂದೇ ಪರಿಗಣಿಸಬಹುದಾಗಿದೆ. ಇಂತಹವರು ಮತ ಭಿಕ್ಷೆಗೋಸ್ಕರ ಸ್ವಾರ್ಥ ಸಾಧನೆಗಾಗಿ ಸಮಯ ಸಾಧಕನ ಕೆಲಸವನ್ನು ಮಾಡುತ್ತಿದ್ದಾರೆ. ಆರ್ಯ ಬಂಧುಗಳೇ ಇನ್ನು ಮುಂದಾದರೂ ಸತ್ಯವನ್ನು ಸ್ವೀಕಾರ ಮಾಡಿ ಮಾನವ ಧರ್ಮವನ್ನು ಸ್ವೀಕರಿಸಿ ರಾಮರಾಜ್ಯದ ಕನಸನ್ನು ನನಸಾಗಿ ಮಾಡೋಣ.

– ಎನ್.ಆರ್. ವಿಜಯಕುಮಾರ್, ವೇದ ಪ್ರಚಾರಕರು, ಹಂಚ್ಯಾ ಬಡಾವಣೆ, ಮಾನಸೀನಗರ, ಮೈಸೂರು.

ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆ ಬಗ್ಗೆ ಗಮನಹರಿಸಿ

ಮಾನ್ಯರೆ,

ಬ್ರಿಟನ್‌ನಲ್ಲಿ ಓಮಿಕ್ರಾನ್ ರೂಪಾಂತರಿ ಎಕ್ಸ್‌ಇ ವೈರಸ್ ಪತ್ತೆಯಾಗಿದ್ದು, ಎಕ್ಸ್‌ಇ ರೂಪಾಂತರಿ ವೈರಸ್ ಓಮಿಕ್ರಾನ್‌ಗಿಂತ 10 ಪಟ್ಟು ವೇಗವಾಗಿ ಹರಡಿ ಸೋಂಕು ಹಬ್ಬಿಸಬಲ್ಲ ಸಾಮರ್ಥ್ಯ ಹೊಂದಿದೆ. ವಿಶ್ವದ ಎಲ್ಲಾ ದೇಶಗಳು ಎಚ್ಚರಿಕೆಯಿಂದ ಇರುವಂತೆ ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಭಾರತ ಕೂಡ ಸಂಭವನೀಯ 4ನೇ ಅಲೆ ಜೂನ್ ಅಥವಾ ಆಗಸ್ಟ್‌ನಲ್ಲಿ ಬರುವ ಬಗ್ಗೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಸರ್ಕಾರ ಎಲ್ಲಾ ನಿರ್ಬಂಧಗಳನ್ನು ಮತ್ತೆ ಮುಂದುವರೆಸಬೇಕು. ಮಾಸ್ಕ್ ದೈಹಿಕ ಅಂತರ ಕಡ್ಡಾಯಗೊಳಿಸಬೇಕು. ಜನರಲ್ಲಿ ಜಾಗೃತಿ ಮೂಡಿಸಬೇಕು. ವೈದ್ಯಕೀಯ ಸೌಕರ್ಯ ಹೆಚ್ಚಿಸಬೇಕು. ಆಸ್ಪತ್ರೆ ವೈದ್ಯರು ಇತರೆ ಸಿಬ್ಬಂದಿ ಜಾಗೃತರಾಗಿರಬೇಕು. ಔಷಧಿಗಳನ್ನು ಸ್ಟಾಕ್ ಇಡಬೇಕು. 4ನೇ ಅಲೆ ತೀವ್ರತೆ ಕಡಿಮೆ ಇರುವ ಹಾಗೆ ನೋಡಿಕೊಳ್ಳಬೇಕು. ಜನರು ಮುನ್ನೆಚ್ಚರಿಕೆ ವಹಿಸಬೇಕು.

– ಜಿ.ನಾಗೇಂದ್ರ ಶರ್ಮ, ಆರೋಗ್ಯ ಸ್ವಯಂ ಸೇವಕರು, ಕುವೆಂಪುನಗರ, ಮೈಸೂರು.

ಅಕ್ರಮ ಮದ್ಯ ಮಾರಾಟಗಾರರ ವಿರುದ್ಧ ಕಾನೂನು ಕ್ರಮಕ್ಕೆ ಮನವಿ

ಮಾನ್ಯರೆ,

ಮಳವಳ್ಳಿ ತಾಲೂಕು ನೆಟ್ಕಲ್ ಗ್ರಾಮ ಅತೀ ಹೆಚ್ಚು ದಲಿತರು, ಹಿಂದುಳಿದ ವರ್ಗದವರು ಇರುವ ಗ್ರಾಮ. ಗ್ರಾಮದ ಬಹುಪಾಲು ಜನ ಕೂಲಿ ಕಾರ್ಮಿಕರಿದ್ದು ಗ್ರಾಮದ ಎಲ್ಲಾ ಅಂಗಡಿಗಳಲ್ಲಿ 2–3 ಅಂಗಡಿ ಹೊರತುಪಡಿಸಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ. ಗ್ರಾಮದ ಬಹಳಷ್ಟು ಜನ ಎಲ್ಲಾ ವಯೋಮಾನದವರು ಕುಡಿತಕ್ಕೆ ದಾಸರಾಗಿದ್ದು, ಕೂಲಿ ಮಾಡಿ ದುಡಿದ ಬಹುಪಾಲು ಹಣವನ್ನು ಕುಡಿತಕ್ಕೆ ಖರ್ಚು ಮಾಡುತ್ತಿದ್ದಾರೆ. ಕುಡಿತದಿಂದ ಗ್ರಾಮದಲ್ಲಿ ಬಹಳಷ್ಟು ಅಮೂಲ್ಯ ಜೀವಗಳನ್ನು ಕಳೆದುಕೊಂಡು ಅವರ ಸಂಸಾರಗಳು ಹಾಳಾಗಿವೆ. ಈ ಅಕ್ರಮ ಮದ್ಯದಿಂದ ಇನ್ನೂ ಎಷ್ಟು ಅಮೂಲ್ಯ ಜೀವಗಳು ಬಲಿಯಾಗಬೇಕು? ಇನ್ನೂ ಎಷ್ಟು ಸಂಸಾರಗಳು ಬೀದಿಗೆ ಬರಬೇಕು? ಅಕ್ರಮ ಮದ್ಯ ಮಾರಾಟ ನಿಲ್ಲಿಸಲು ಅಬಕಾರಿ ಅಧಿಕಾರಿಗಳಿಗೆ, ಆರಕ್ಷಕ ಅಧಿಕಾರಿಗಳಿಗೆ ಹಲವು ಬಾರಿ ದೂರನ್ನು ಲಿಖಿತ ಹಾಗೂ ಮೌಖಿಕವಾಗಿ ನೀಡಿದ್ದರೂ ಪ್ರಯೋಜನವಾಗಿಲ್ಲ. ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ನಿಲ್ಲಲಿಲ್ಲ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗ್ರಾಮಕ್ಕೆ ಭೇಟಿ ನೀಡಿ ಅಕ್ರಮ ಮದ್ಯ ಮಾರಾಟಗಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದರ ಜೊತೆಗೆ ಗ್ರಾಮದ ಜನ ಶಾಂತಿ, ನೆಮ್ಮದಿ, ಆರೋಗ್ಯದಿಂದ ಬಾಳಲು ಸಹಕರಿಸಬೇಕಾಗಿ ಮನವಿ.

–ಎನ್.ಎಸ್. ಶಿವಸ್ವಾಮಿ, ನೆಟ್ಕಲ್, ಮಳವಳ್ಳಿ ತಾ.

ಚಿವುಟಿ, ಸಮಾಧಾನವನ್ನೂ ಮಾಡುವ ಮಾಜಿ ಮುಖ್ಯಮಂತ್ರಿಗಳು

ಮಾನ್ಯರೆ,

ಧರ್ಮದ ವಿಷಯದಲ್ಲಿ ವಾದ ವಿವಾದಗಳಿಗೆ ಅವಕಾಶ ಕೊಡದೆ ಅವುಗಳನ್ನು ಆರಂಭದಲ್ಲಿಯೇ ಚಿವುಟಿ ಹಾಕಬೇಕು ಧರ್ಮ ಸಂಘರ್ಷಕ್ಕೆ ಅವಕಾಶ ನೀಡಬೇಡಿ ಎಂದು ಒಂದು ಕಡೆ ಹೇಳುವ ಕುಮಾರಸ್ವಾಮಿಯವರು, ಇನ್ನೊಂದು ಕಡೆ ಕೇಸರಿ ಶಾಲಿನ ಘನತೆಯನ್ನು ಕಾಪಾಡಿ ಎಂದು ಮತ್ತೊಂದು ಕಡೆ ಹೇಳುತ್ತಾರೆ. ಧಮ9 ಸಂಘರ್ಷಕ್ಕೆ ಅವಕಾಶ ನೀಡಬೇಡಿ ಎಂದು ಮಗದೊಂದು ಕಡೆ ತಮ್ಮ ಹೇಳಿಕೆ ನೀಡುತ್ತಿದ್ದಾರೆ.ನಮ್ಮ ದೇಶದಲ್ಲಿ ಅವರೊಬ್ಬರೇ ನಿಜವಾದ ಜಾತ್ಯಾತೀತವಾದಿಗಳು ಎಂದು ಕೊಂಡಿದ್ದಾರೆಯೇ?

ಮುಸ್ಲಿಂ ಸಮುದಾಯದವರನ್ನು ಓಲೈಸಿ ರಾಜಕೀಯ ಮಾಡುವವುದೇ ನಿಜವಾದ ರಾಜಕೀಯ! ಎಂಬರ್ಥದಲ್ಲಿ ಯಾವಾಗಲೂ ಹೇಳಿಕೆ ನೀಡುತ್ತಿರುವುದು ಎಷ್ಟು ಸರಿ? ಒಂದು ಕಡೆ ಮುಸ್ಲಿಂ ಸಮುದಾಯದ ಹುಡುಗಿಯರು (ಇವರುಕಾಲೇಜು ವಿದ್ಯಾರ್ಥಿನಿಯರು !!) ನಡೆಸುತ್ತಿರುವ ಮೆರವಣಿಗೆಯನ್ನು ಸಮರ್ಥಿಸಿ ಮಾತನಾಡುವ ಅವರು ಅದೇ ದೇಶಭಕ್ತ ಸಂಘಟನೆಯಾದ ಆರ್‌ಎಸ್‌ಎಸ್ ಅನ್ನು ಅದೊಂದು ದೇಶದ್ರೋಹಿ ಸಂಘಟನೆ ಎನ್ನುತ್ತಾರೆ. ಅವರು ಆರ್‌ಎಸ್‌ಎಸ್ ಸಂಘಟನೆಯವರು ಅದಾವ ದೇಶದ್ರೋಹಿ ಕೆಲಸವನ್ನು ಮಾಡಿದ್ದಾರೆ? ಇವರು ಎಲ್ಲಾ ಪುರಾವೆಗಳನ್ನು ತಮ್ಮ ಬಳಿ ಇಟ್ಟುಕೊಂಡು ಹೇಳಿಕೆಗಳನ್ನು ನೀಡುತ್ತಾರೆಯೇ? ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಇಡುವ ಇವರ ಕಾರ್ಯಗಳಿಗೆ ಕರ್ನಾಟಕ ಜನತೆಯ ಧಿಕ್ಕಾರವಿರಲಿ. ಚುನಾವಣೆಗಳು ಹತ್ತಿರ ಬರುತ್ತಿರುವ ಈ ಸಂದರ್ಭದಲ್ಲಿ ಅವರು ಹೇಳಿಕೆಗಳು ಕೋಮುದ್ವೇಷಕ್ಕೆ ಕಾರಣವಾಗುತ್ತದೆ ಎಂದು ಅವರಿಗೆ ತಿಳಿಯುವುದಿಲ್ಲವೆ?

–ಬೇಲೂರು ದ.ಶಂ.ಪ್ರಕಾಶ್, ಮೈಸೂರು



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಸಹಕಾರ ಚಳವಳಿಯ ಬೆಳವಣಿಗೆ–ಮಹತ್ವ

'ಸಂಸ್ಕಾರವಿರದೇ ಸಹಕಾರ ಸಿಗದು, ಸಹಕಾರ ವಿರದೇ ಸಮೃದ್ಧಿ ಇರದು' ಈ ಒಂದು ವಾಕ್ಯ ಮಾನವ ಜೀವನದಲ್ಲಿ ಸಹಕಾರದ ಮಹತ್ವವನ್ನು ತಿಳಿಸುತ್ತದೆ. ಸಹಕಾರ ತತ್ವದ ಅತ್ಯುತ್ತಮ ಉದಾಹರಣೆ ರಾಮಾಯಣದಲ್ಲಿ ಕಾಣಬಹುದು. ಶ್ರೀರಾಮ ಮತ್ತು ಸುಗ್ರೀವ ಪರಸ್ಪರ ಸಹಕಾರದಿಂದ ತಮ್ಮ ಪತ್ನಿಯನ್ನು ಮರಳಿ ಪಡೆಯುತ್ತಾರೆ.

1904ರಲ್ಲಿ ಭಾರತದಲ್ಲಿ ಪ್ರಥಮ ಸಹಕಾರ ಕಾಯ್ದೆ ಜಾರಿಗೆ ಬಂತು. ಆ ನಂತರ ಸಹಕಾರ ಕ್ಷೇತ್ರದಲ್ಲಿ ನಿರಂತರವಾಗಿ ಪರಿವರ್ತನೆಯ ಪ್ರಕ್ರಿಯೆ ಮುಂದುವರಿದಿದೆ. ಸಹಕಾರ ಚಳವಳಿಯು ವಿಭಿನ್ನ ಕ್ಷೇತ್ರಗಳಲ್ಲಿ ದೇಶದ ಆರ್ಥಿಕ ಚಿತ್ರಣವನ್ನು ಬದಲಾಯಿಸುತ್ತಿರುವ ಮಾದರಿ ಚಳವಳಿಯಾಗುತ್ತಿದೆ. ಸಹಕಾರ ಚಳವಳಿಯು ಬಡತನ ನಿರ್ಮೂಲನ, ಆಹಾರ ಭದ್ರತೆ, ಸಾಮಾಜಿಕ ಏಕತೆ, ಉದ್ಯೋಗಾವಕಾಶಗಳ ಸೃಷ್ಟಿಯಂತಹ ಮಹತ್ವದ ಕ್ಷೇತ್ರಗಳಲ್ಲಿ ಪರಿಣಾಮಕಾರಿ ಭೂಮಿಕೆಯನ್ನು ನಿರ್ವಹಿಸುತ್ತಿದೆ. ಭಾರತದ ಗ್ರಾಮೀಣ ಜನರಿಗೆ ಪತ್ತಿನ ಮತ್ತಿತರ ಸಹಕಾರ ಸಂಘಗಳು ಆರ್ಥಿಕ ಬೆಂಬಲ ನೀಡುವ ಮೂಲಕ ಜೀವನ ಮಟ್ಟವನ್ನು ಸುಧಾರಿಸಿದೆ.

ಸಹಕಾರ ಕ್ಷೇತ್ರದ ಅಂಕಿ–ಅಂಶಗಳು: ಭಾರತೀಯ ರಾಷ್ಟ್ರೀಯ ಸಹಕಾರ ಯೂನಿಯನ್ (NCUI) ವರದಿಯಂತೆ 2017ರವರೆಗೆ ದೇಶದಲ್ಲಿ 8,54,355 ಸಹಕಾರ ಸಂಘಗಳಿವೆ. ಇವುಗಳಲ್ಲಿ 1.77 ಲಕ್ಷ (ಶೇ.20) ಪತ್ತಿನ (CREDIT) ಸಹಕಾರ ಸಂಘಗಳು ಹಾಗೂ ಉಳಿದ ಶೇ.80ರಷ್ಟು ವಿಭಿನ್ನ ಮಾದರಿಯ ಆರ್ಥಿಕ ಚಟುವಟಿಕೆಗಳಾದ ಮತ್ಸೋದ್ಯಮ, ಹೈನುಗಾರಿಕೆ, ಆಹಾರ ಸಂಸ್ಕರಣೆ, ಕೈಗಾರಿಕೆ, ಮಾರುಕಟ್ಟೆ, ಗೃಹ ನಿರ್ಮಾಣ, ತೋಟಗಾರಿಕೆಯಂತಹ 55 ಕ್ಷೇತ್ರಗಳಲ್ಲಿ ಕಾರ್ಯನಿರತವಾಗಿದೆ. ಈ ರೀತಿಯಾಗಿ ಸಹಕಾರ ಚಳವಳಿಯು ದೇಶದ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಿದೆ. ದೇಶದಲ್ಲಿ ಸುಮಾರು 290 ಮಿಲಿಯನ್ ರೈತರು ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿದ್ದಾರೆ. ಇವರಲ್ಲಿ ಶೇ.72ರಷ್ಟು ಪತ್ತಿನ ಸಹಕಾರ ಸಂಘಗಳಲ್ಲಿ ಹಾಗೂ ಉಳಿದ ಶೇ.28ರಷ್ಟು ರೈತರು ಇತರ ಮಾದರಿಯ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದಾರೆ. ರೈತರಿಗೆ ಶೇ.55ರಷ್ಟು ರಸಗೊಬ್ಬರವನ್ನು ಸಹಕಾರ ಸಂಘಗಳು ಪೂರೈಸುತ್ತಿವೆ. ರಾಷ್ಟ್ರೀಯ ಡೈರಿ ವಿಕಾಸ ಬೋರ್ಡ್‌ನ 2019–20ನೇ ಸಾಲಿನ ವರದಿಯಂತೆ ದೇಶದಲ್ಲಿ 2 ಲಕ್ಷ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿರುವ 1.7 ಕೋಟಿ ಸದಸ್ಯರಿಂದ ಪ್ರತಿದಿನ 4.80 ಕೋಟಿ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ದೇಶದಲ್ಲಿ ಶೇ.35ರಷ್ಟು ಸಕ್ಕರೆಯನ್ನು 300ಕ್ಕೂ ಹೆಚ್ಚಿರುವ ಸಹಕಾರ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುತ್ತಿವೆ. ಶೇ.50ರಷ್ಟು ಕ್ರೆಡಿಟ್ ಕಾರ್ಡ್‌ಗಳನ್ನು ಸಹಕಾರ ಸಂಘಗಳು ರೈತರಿಗೆ ನೀಡಿವೆ. ದೇಶದಲ್ಲಿರುವ ಸಹಕಾರ ಸಂಘಗಳಲ್ಲಿ ಒಟ್ಟು 40 ಕೋಟಿ ಸದಸ್ಯರಿದ್ದಾರೆ. ಅಂದರೆ ಪ್ರತಿ 3ನೇ ವ್ಯಕ್ತಿ ಒಂದಲ್ಲ ಒಂದು ರೀತಿಯ ಸಹಕಾರ ಚಳವಳಿಯಲ್ಲಿ ಭಾಗಿಯಾಗಿದ್ದಾನೆ. ನಗರ ಪ್ರದೇಶಗಳಲ್ಲೂ ಸಹಕಾರ ಚಳವಳಿ ವಿಸ್ತರಿಸಲಾಗುತ್ತಿದ್ದು, ಶೇ.98ರಷ್ಟು ಗ್ರಾಮಗಳನ್ನು ತನ್ನ ಕಾರ್ಯ ವ್ಯಾಪ್ತಿಗೆ ಸೇರಿಸಿಕೊಂಡಿದೆ. ದೇಶದಲ್ಲಿರುವ 1,540 ಬಹುರಾಜ್ಯ (ಮಲ್ಟಿಸ್ಟೇಟ್)ನ ಬ್ಯಾಂಕ್‌ಗಳಲ್ಲಿ 8.5 ಕೋಟಿ ಖಾತೆದಾರರಿದ್ದಾರೆ. ಈ ಅಂಕಿ–ಅಂಶಗಳು ದೇಶದ ಜನತೆ ಸಹಕಾರ ಸಂಘಗಳ ಮೇಲೆ ಹೊಂದಿರುವ ವಿಶ್ವಾಸವನ್ನು ಸೂಚಿಸುತ್ತದೆ.



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS): ಪ್ಯಾಕ್ಸ್‌ಗಳು ದೇಶದಲ್ಲಿ ಜನಸಾಮಾನ್ಯರ ಅಲ್ಪಾವಧಿಯ ಹಣಕಾಸು ಸಮಸ್ಯೆಗಳನ್ನು ಪರಿಹರಿಸುವಂತಹ ಕಾರ್ಯನಿರ್ವಹಿಸುತ್ತಿವೆ. ಭಾರತೀಯ ರಿಜರ್ವ್ ಬ್ಯಾಂಕ್ 2018ರಲ್ಲಿ ನೀಡಿದ ಮಾಹಿತಿಯಂತೆ ದೇಶದಲ್ಲಿ 95,238 ಪ್ಯಾಕ್ಸ್‌ಗಳಿದ್ದು, 6.39 ಲಕ್ಷ (ಶೇ.98) ಗ್ರಾಮಗಳಲ್ಲಿ 13.2 ಕೋಟಿ ಸದಸ್ಯರನ್ನು ಹೊಂದಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸುದೀರ್ಘ ಅವಧಿಗೆ ವಾಣಿಜ್ಯ ಬ್ಯಾಂಕ್‌ಗಳು ಕೇವಲ ಪ್ರತಿಷ್ಠಿತರು, ಶ್ರೀಮಂತರು, ಉದ್ಯಮಿಗಳಿಗೆ ಸೀಮಿತವಾದ ಹಣಕಾಸು ಸಂಸ್ಥೆಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಜನಸಾಮಾನ್ಯರು ವಾಣಿಜ್ಯ ಬ್ಯಾಂಕ್‌ಗಳಿಗೆ ಹೋಗಲು ಹಿಂಜರಿಯುವಂತಹ ಸ್ಥಿತಿ ಇತ್ತು. ದುರ್ಬಲರು, ಜನಸಾಮಾನ್ಯರಿಗೆ ಅಲ್ಪ ಪ್ರಮಾಣದಲ್ಲಿ ಹಣಕಾಸು ಸೌಲಭ್ಯ ನೀಡಿದರು. ವಸೂಲಾತಿಯನ್ನು ಸೌಜನ್ಯ ರಹಿತವಾಗಿ ಮಾಡುತ್ತಿದ್ದವು. ರಾಬರ್ಟ್ ಫ್ರಾಸ್ಟ್ ಎಂಬ ಅಮೇರಿಕನ್ ಕವಿಯು ವಾಣಿಜ್ಯ ಬ್ಯಾಂಕ್‌ಗಳ ಕಾರ್ಯ ಶೈಲಿಯ ಬಗ್ಗೆ ನೀಡಿದ ವ್ಯಂಗ್ಯೋಕ್ತಿ 'A Bank is a Place where they lend you an unbrella and ask forit back when it begins to Rain' ಬ್ಯಾಂಕ್‌ಗಳಿಗೆ ಜನಸಾಮಾನ್ಯರ ಹಣಕಾಸು ಸಮಸ್ಯೆಗಳಿಗೆ ತೋರಿದ ನಿರ್ಲಕ್ಷ್ಯವನ್ನು ಸಹಕಾರ ಸಂಘಗಳು ಅವಕಾಶವಾಗಿ ಬಳಸಿಕೊಂಡ ಪರಿಣಾಮ ಸಹಕಾರ ಚಳವಳಿ ಇಂದಿನ ದಿನಗಳಲ್ಲಿ ಸರ್ವವ್ಯಾಪಿ, ಸರ್ವಸ್ಪರ್ಶಿಯಾಗಿದೆ. ಆದರೆ, ದೇಶದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಳ್ಳೆಯ ವಾತಾವರಣವಿದ್ದರೂ, ಅವಕಾಶಗಳಿದ್ದರೂ ಪ್ಯಾಕ್ಸ್‌ಗಳು ಇನ್ನೂ ಅನೇಕ ಕ್ಷೇತ್ರಗಳಲ್ಲಿ ಪ್ರವೇಶಿಸಿಲ್ಲ.

PACS ಗಳು ಬಹು ಉದ್ದೇಶಿತ ಸಂಘಗಳಾಗುವ ಬಗ್ಗೆ: ಸ್ವಾತಂತ್ರ್ಯ ಪೂರ್ವದಲ್ಲಿ ನೇಮಕವಾದ ಮೆಹತಾ ಕಮಿಟಿ ಮತ್ತು ಮಣಿಲಾಲ್ ನಾನಾವತಿ ಅಧ್ಯಕ್ಷತೆಯ ಎರಡು ಸಮಿತಿಗಳು ಕೃಷಿಗೆ ಸರ್ಕಾರಗಳು ಆರ್ಥಿಕ ಬೆಂಬಲ ನೀಡಬೇಕು ಮತ್ತು ಪ್ಯಾಕ್ಸ್‌ಗಳು ಕೇವಲ ಪತ್ತಿನ ಸಹಕಾರ ಸಂಘಗಳಾಗಿ ವ್ಯವಹರಿಸುವುದಕ್ಕಿಂತ ಹಣಕಾಸು ಹಾಗೂ ಎಲ್ಲಾ ರೀತಿಯ ಸೇವೆಗಳು ಒಂದೆಡೆ ಲಭ್ಯವಾಗುವಂತಹ ಬಹು ಉದ್ದೇಶಿತ ಸಹಕಾರ ಸಂಘಗಳಾಗಿ ಪರಿ ವರ್ತಿಸಬೇಕೆಂದು ಸೂಚಿಸಿದವು. ಈ ಮೂಲಕ ಸಹಕಾರ ಸಂಘಗಳು ಸಮರ್ಥ, ವಿಶ್ವಾಸಾರ್ಹ, ವ್ಯವಹಾರಿಕ ಸಂಘಗಳಾಗಿ ದೇಶದ ಕೃಷಿಕರು, ಕೃಷಿ ಕಾರ್ಮಿಕರು ಹಾಗೂ ಜನಸಾಮಾನ್ಯರಲ್ಲಿರುವ ಅತೃಪ್ತಿ, ಅಸಹನೆ, ಯಾತನೆಗಳನ್ನು ದೂರ ಗೊಳಿಸಬಹುದೆಂದು ಶಿಫಾರಸು ಮಾಡಿದವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಧಿಕಾರದಲ್ಲಿದ್ದ ಎಲ್ಲಾ ಸರ್ಕಾರಗಳು ಸಹಕಾರ ಕ್ಷೇತ್ರವನ್ನು ಕಡೆಗಣಿಸಿದವು. ಮೊದಲ ಬಾರಿಗೆ ಮೋದಿ ಸರ್ಕಾರವು ಸಹಕಾರ ಕ್ಷೇತ್ರದ ಮಹತ್ವವನ್ನು ಪರಿಗಣಿಸಿ ನೂತನವಾಗಿ ಸಹಕಾರ ಸಚಿವಾಲಯವನ್ನು ಸ್ಥಾಪಿಸಿದೆ. ಸಹಕಾರ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಅಮಿತ್ ಶಾರಿಗೆ ಈ ಖಾತೆಯನ್ನು ನೀಡಲಾಗಿದೆ. ಈ ಬಾರಿಯ ಬಜೆಟ್‌ನಲ್ಲಿ 900 ಕೋಟಿ ಅನುದಾನ ನೀಡಿರುವುದು ಸಹಕಾರ ಕ್ಷೇತ್ರವು ಹೊಸ ಆಸಕ್ತಿಯ ಆದ್ಯತೆಯ ಆರ್ಥಿಕ ಕ್ಷೇತ್ರವಾಗಿ ಪ್ರಗತಿಯತ್ತ ಸಾಗುವುದರ ಸಂಕೇತವಾಗಿದೆ. ಸರ್ಕಾರವೂ PACSಗಳನ್ನು ಪುನಃಶ್ಚೇತನಗೊಳಿಸಿ ಬಹು ಉದ್ದೇಶಿತ ಸಂಘಗಳಾಗಿ ಪರಿವರ್ತಿಸಲು 2022–23ನೇ ಸಾಲಿನ ಕೃಷಿ ಸಂಬಂಧಿ ಬಜೆಟ್ ಯೋಜನೆಗಳಾದ ಕೃಷಿ ಮಾರುಕಟ್ಟೆ, ತೋಟಗಾರಿಕೆ, ಖಾದ್ಯ ತೈಲ ಬೀಜಗಳು, ಪೂರ್ವೋತ್ತರದಲ್ಲಿ ಸಾವಯವ ಕೃಷಿ ಅಭಿವೃದ್ಧಿ ಮೊದಲಾದ ಕಾರ್ಯಕ್ರಮಗಳ ಯೋಜನೆ ರೂಪಿಸಿದೆ. ಈ ಎಲ್ಲಾ ಆರ್ಥಿಕ ಹಾಗೂ ಸೇವಾ ಚಟುವಟಿಕೆಗಳನ್ನು ಸಹಕಾರ ಚಳವಳಿಯ ಮೂಲತತ್ವ ಹಾಗೂ ಆಶಯಗಳಿಗೆ ಪೂರಕವಾಗಿ ನಡೆಸಲಾಗುವುದು. ಸಹಕಾರ ಚಳವಳಿಯು ಸ್ವಸಹಾಯ, ಸ್ವಜವಬ್ದಾರಿ, ಪ್ರಜಾಸತ್ತೆ, ಸಮಾನತೆ, ಪಾಲುದಾರಿಕೆ ಹಾಗೂ ಸಹಭಾಗಿತ್ವದಂತಹ ತತ್ವಗಳ ಆಧಾರ ಹೊಂದಿದೆ.

PACS ಗಳು ಡಿಜಿಟಲೀಕರಣ: ಸಹಕಾರ ಸಂಘಗಳು ಅತ್ಯುತ್ತಮ ಸೇವಾ ಮಾಧ್ಯಮಗಳಾಗಿ, ವ್ಯವಹಾರಿಕವಾಗಿ ಕಾರ್ಯನಿರ್ವಹಿಸಲು ಡಿಜಿಟಲೀಕರಣಗೊಳ್ಳುವುದು ಇಂದಿನ ತುರ್ತು ಅವಶ್ಯಕತೆಯಾಗಿದೆ. 2022–23ರ ಕೇಂದ್ರಿಯ ಬಜೆಟ್‌ನಲ್ಲಿ ನೀಡಿರುವ 350 ಕೋಟಿ ರೂ. ಅನುದಾನದಿಂದ ದೇಶದ ಸುಮಾರು 63,000 PACS ಗಳನ್ನು ಗಣೀಕರಣಗೊಳಿಸಲು ಕೇಂದ್ರ ಸಹಕಾರ ಸಚಿವಾಲಯ ಯೋಜನೆ ರೂಪಿಸುತ್ತಿದೆ. ಆಧುನಿಕ ತಂತ್ರಜ್ಞಾನದ ಯುಗದಲ್ಲಿ PACS ಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಅವಶ್ಯಕತೆಗೆ ತಕ್ಕಂತೆ ಸ್ಪರ್ಧಿಸಲು ವೈವಿಧ್ಯತೆ, ಹೊಸತನ, ಮಾಹಿತಿ ವಿನಿಮಯದಲ್ಲಿ ಸಹಭಾಗಿತ್ವವನ್ನು ಸ್ವೀಕರಿಸಬೇಕಾಗಿದೆ. ಗಣಕೀಕರಣದೊಂದಿಗೆ PACS ಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಗೆ ಡಿಜಿಟಲ್ ಸಾಕ್ಷರತೆಗಾಗಿ ನಿರಂತರ ತರಬೇತಿ, ಕೌಶಲ್ಯಾಭಿವೃದ್ಧಿ ಮಾಡಬೇಕಾಗಿದೆ. ಸಹಕಾರಿ ತತ್ವಗಳು ಅದರ ಮೂಲ ಆಶಯಗಳು ಹಾಗೂ ಸಹಕಾರಿ ಕಾನೂನುಗಳ ಬಗ್ಗೆ ಸದಸ್ಯರಿಗೆ ವಿಶೇಷವಾಗಿ ನಿರ್ದೇಶಕರಿಗೆ ಅರಿವು ಮೂಡಿಸಲು ಮಾಹಿತಿ ತಿಳಿಯಲು ಕಾರ್ಯಾಗಾರಗಳನ್ನು ನಡೆಸಬೇಕಾಗಿದೆ.

ಸಹಕಾರ ಚಳವಳಿಯಲ್ಲಿ ಕರ್ನಾಟಕದ ಮಹತ್ವ: ದೇಶದಲ್ಲಿ ಸಹಕಾರ ತತ್ವಾಧಾರಿತ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘ ಕರ್ನಾಟಕದಲ್ಲಿ ಪ್ರಾರಂಬವಾಯಿತು. 1904ರಲ್ಲಿ ಈಗಿನ ಗದಗ ಜಿಲ್ಲೆಯ ಕಣಹಿನಹಾಳ ಗ್ರಾಮದ ಸಿದ್ಧನಗೌಡ, ಸಣ್ಣರಾಮನಗೌಡ ಪಾಟೀಲರು ಗ್ರಾಮದ ಕೆಲವು ಸಮಾನ ಮನಸ್ಕ ರೈತರನ್ನು ಒಗ್ಗೂಡಿಸಿ ದೇಶದ ಮೊದಲ ಕೃಷಿ ಪತ್ತಿ ಸಹಕಾರ ಸಂಘ ಸ್ಥಾಪಿಸಿದರು.

ಅಂದು ಪಾಟೀಲರು ಸಹಕಾರ ಕ್ಷೇತ್ರಕ್ಕೆ ಹಾಕಿದ್ದ ಬುನಾದಿ ಮೇಲೆ ದೇಶದಲ್ಲಿಂದು ಸಹಕಾರ ಚಳವಳಿ ಶಕ್ತಿಶಾಲಿಯಾಗಿ ವ್ಯಾಪಿಸಿದೆ. ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಕಿರೀಟಕ್ಕೆ ಇನ್ನೊಂದು ಗರಿ ಲಭಿಸಿದೆ.

ಕೇಂದ್ರ ಗೃಹ ಮತ್ತು ಸಹಕಾರ ಖಾತೆ ಸಚಿವರಾದ ಅಮಿತ್ ಶಾ ರವರು ಇತ್ತೀಚೆಗೆ ದೇಶದಲ್ಲೇ ಪ್ರಥಮವೆನಿಸಿದ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಉದ್ಘಾಟಿಸುವ ಮೂಲಕ ಹೈನುಗಾರಿಕೆಗೆ ಉತ್ತೇಜನ ನೀಡಿದ್ದಾರೆ. 'Coming logether is beginning thinking together is progress, working together is sueccss' ಈ ಮೂರು ಸೂತ್ರಗಳು ದೇಶಲ್ಲಿ ಸಹಕಾರ ಚಳವಳಿಯನ್ನು ಯಶಸ್ವಿಯಾಗಿ ಮುಂದುವರಿಸುತ್ತಿವೆ.

ಮೈವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರರಿಗೆ ಎನ್‌ಸಿಸಿ 'ಗೌರವ ಕರ್ನಲ್' ಪದವಿ ಪ್ರದಾನ

ಮೈಸೂರು, ಏ.7(ಎಂಟಿವೈ)– ಮೈಸೂರಿನ ಎನ್‌ಸಿಸಿ ಘಟಕವು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅವರಿಗೆ 'ಗೌರವ ಕರ್ನಲ್' ಪದವಿ ಪ್ರದಾನ ಮಾಡಿ, ಮೈಸೂರು ವಿವಿಯನ್ನು 'ಕರ್ನಲ್ ಕಮಾಂಡೆಂಟ್' ಎಂದು ಪರಿಗಣಿಸಿತು.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಎನ್‌ಸಿಸಿ ಗ್ರೂಪ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಎನ್‌ಸಿಸಿಯ ಗ್ರೂಪ್ ಕಮಾಂಡರ್ ಕರ್ನಲ್ ಆರ್.ಆರ್.ಮೆನನ್ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅವರಿಗೆ 'ಗೌರವ ಕರ್ನಲ್' ಪದವಿ ಪ್ರದಾನ ಮಾಡಿ, ಗೌರವಿಸಿದರು.

ಪದವಿ ಸ್ವೀಕರಿಸಿದ ಬಳಿಕ ಪ್ರೊ.ಜಿ.ಹೇಮಂತಕುಮಾರ್ ಮಾತನಾಡಿ, ಎನ್‌ಸಿಸಿ ವತಿಯಿಂದ ಗೌರವ ಕರ್ನಲ್ ಕಮಾಂಡೆಂಟ್ ಗೌರವ ನೀಡುವ ಮೂಲಕ ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಲಾಗಿದೆ. ಈ ಮೂಲಕ ಸಮಾಜಕ್ಕೆ ಮತ್ತೊಂದು ರೀತಿಯಲ್ಲಿ ಸೇವೆ ಸಲ್ಲಿಸಲು ನನಗೆ ಜವಾಬ್ದಾರಿ ನೀಡಿದಂತಾಗಿದೆ. ನನ್ನ ಜೀವನದಲ್ಲಿ ಇದು ಸ್ಮರಣೀಯ ದಿನ ಎಂದು ಬಣ್ಣಿಸಿದರು.

ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ(ಸೇನೆ, ನೌಕಾಪಡೆ ಮತ್ತು ವಾಯುಸೇನೆ)ಯ ಮೂರು ವಿಭಾಗಗಳು ಸಮಾಜ ಸೇವೆಯೊಂದಿಗೆ ದೇಶ ಸೇವೆಯ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ನೀಡುವ ಸಂಸ್ಥೆಯಾಗಿದ್ದು, ಯುವ ಜನರಲ್ಲಿ ಸೇವಾ ಮನೋಭಾವ ಮೂಡಿಸಲು ಉತ್ತಮ ಸ್ಫೂರ್ತಿ ಕೇಂದ್ರವಾಗಿದೆ. ದೇಶವು ಪ್ರಬಲ ಯುವ ಶಕ್ತಿಯನ್ನು ಹೊಂದಿದೆ. ಯುವ ಜನರು ದೇಶದ ಪ್ರಬಲ ಆಸ್ತಿಯೂ ಆಗಿದೆ. ಈ ಯುವ ಶಕ್ತಿಯನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಮೂಲಕ ದೇಶದ ಪ್ರಗತಿಗೆ ಬಳಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಎನ್‌ಸಿಸಿ, ವಿದ್ಯಾರ್ಥಿಗಳಲ್ಲಿ 'ಏಕತೆ ಮತ್ತು ಶಿಸ್ತು' ಕಲಿಸುತ್ತದೆ. ದೇಶದ ವಿವಿಧ ಭಾಗಗಳಲ್ಲಿರುವ ಯುವಜನರನ್ನು ಒಟ್ಟುಗೂಡಿಸಿ, ರಾಷ್ಟ್ರದ ಶ್ರೇಷ್ಠ ಶಕ್ತಿಯಾಗಿ ರೂಪುಗೊಳ್ಳಲು ಶ್ರಮಿಸುತ್ತಿದೆ. ಕೆಡೆಟ್‌ಗಳಲ್ಲಿರುವ ಶಿಸ್ತಿನಿಂದಾಗಿ ಇಂದು ಎನ್‌ಸಿಸಿ ಘಟಕವು ದೇಶದ ಗಮನ ಸೆಳೆದಿದೆ. ಜ.26ರಂದು ನವದೆಹಲಿಯಲ್ಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಎನ್‌ಸಿಸಿ ಕೆಡೆಟ್‌ಗಳ ಶಿಸ್ತಿನ ನಡೆ ಜನರ ಪ್ರೀತಿಗೆ ಪಾತ್ರವಾಗಿದೆ. ಎನ್‌ಸಿಸಿ ಕೆಡೆಟ್‌ಗಳು ಕಾಲೇಜುಗಳಲ್ಲಿ ಇತರ ವಿದ್ಯಾರ್ಥಿಗಳಿಗೆ ಆದರ್ಶರಾಗಿದ್ದಾರೆ. ಗಣರಾಜ್ಯೋತ್ಸವ ಪರೇಡ್‌ನಲ್ಲಿ (ಆರ್‌ಡಿ) ಭಾಗವಹಿಸುವವರಿಗೆ ವಿಶೇಷ ಸೌಲಭ್ಯವಿದೆ. ಇದನ್ನು ಇತರ ವಿದ್ಯಾರ್ಥಿಗಳಿಗೂ ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರಲ್ಲದೆ, ಈ ವರ್ಷ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ ಕರ್ನಾಟಕ ಮತ್ತು ಗೋವಾ ಬೆಟಾಲಿಯನ್‌ನ ಎನ್‌ಸಿಸಿ ಕೆಡೆಟ್‌ಗಳಿಗೆ ಅಭಿನಂದಿಸುವುದಾಗಿ ಹೇಳಿದರು.



ಎನ್‌ಸಿಸಿ ಮೈಸೂರು ಗ್ರೂಪ್‌ನ ಪ್ರಧಾನ ಕಚೇರಿಯ ಗ್ರೂಪ್ ಕಮಾಂಡರ್ ಕರ್ನಲ್ ಆರ್.ಆರ್.ಮೆನನ್ ಮಾತನಾಡಿ, ಈ ವರ್ಷ ಆರ್‌ಡಿ ಪರೇಡ್‌ನಲ್ಲಿ ಭಾಗವಹಿಸಿದ್ದ ಕರ್ನಾಟಕ ಮತ್ತು ಗೋವಾ ಬೆಟಾಲಿಯನ್‌ನ 54 ಎನ್‌ಸಿಸಿ ಕೆಡೆಟ್‌ಗಳಲ್ಲಿ 19 ಮಂದಿ ಮೈಸೂರಿನವರೇ ಆಗಿದ್ದು ವಿಶೇಷ. ಮೈಸೂರಿಂದ ಹಲವು ಮಂದಿ ಎನ್‌ಸಿಸಿ ಯುವಕ, ಯುವತಿಯರು ದೆಹಲಿಗೆ ತೆರಳಿದ್ದರು. ಆದರೆ ಯುವಕರ ತಂಡದಲ್ಲಿದ್ದ ಕೆಲವರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡಿದ್ದರಿಂದ ಕೆಲವರು ಮಾತ್ರ ಪರೇಡ್‌ನಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. ಆದರೆ ಯುವತಿಯರ ತಂಡದಲ್ಲಿ ಬಹುತೇಕರು ಆರ್‌ಡಿ ಪರೇಡ್‌ನ ವಿವಿಧ ವಿಭಾಗಗಳಲ್ಲಿ ಪಾಲ್ಗೊಂಡು ಗಮನ ಸೆಳೆದರು ಎಂದು ಹರ್ಷ ವ್ಯಕ್ತಪಡಿಸಿದರು.

ಎನ್‌ಸಿಸಿ ಹಳೆಯ ವಿದ್ಯಾರ್ಥಿಗಳ ಸಂಘ ಅಸ್ತಿತ್ವಕ್ಕೆ ಬಂದಿದೆ. ಸಂಘದ ಮೊದಲ ಸದಸ್ಯರಾಗಿ ಪ್ರಧಾನಿ ಮೋದಿ ಮತ್ತು 2ನೇ ಸದಸ್ಯರಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆನ್‌ಲೈನ್ ಮೂಲಕ ಎನ್‌ಸಿಸಿ ಹಳೆ ವಿದ್ಯಾರ್ಥಿಗಳ ಸಂಘಕ್ಕೆ ಹೆಸರು ನೋಂದಾಯಿಸುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು. ಇದೇ ವೇಳೆ ದೆಹಲಿಯ ಆರ್‌ಡಿ ಪರೇಡ್‌ನಲ್ಲಿ ಪಾಲ್ಗೊಂಡಿದ್ದ 19 ಕೆಡೆಟ್‌ಗಳನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಫೈನ್ ಆರ್ಟ್ಸ್ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಭರತನಾಟ್ಯ ನೃತ್ಯವನ್ನೂ ಎನ್‌ಸಿಸಿ ಕೆಡೆಟ್‌ಗಳ ಪ್ರದರ್ಶಿಸಿ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಶಿವಪ್ಪ, ಎನ್‌ಸಿಸಿ ಆಡಳಿತಾಧಿಕಾರಿ ಕರ್ನಲ್ ಶ್ರೀನಿವಾಸ್ ಹಾಗೂ ಇನ್ನಿತರರು ಇದ್ದರು.

ಹಲ್ಲೆ ಪ್ರಕರಣ: ಪೊಲೀಸ್ ಅಧಿಕಾರಿ ವಿರುದ್ಧ ತನಿಖೆಗೆ ಕೋರ್ಟ್ ಆದೇಶ

ಮೈಸೂರು, ಏ.7(ಪಿಎಂ)– ಪೊಲೀಸ್ ಅಧಿಕಾರಿಯೊಬ್ಬರು ತಮ್ಮ ಮೇಲೆ ನಡೆಸಿದ್ದ ಹಲ್ಲೆ ಸಂಬಂಧ ತನಿಖಾಧಿಕಾರಿ ಸಲ್ಲಿಸಿದ್ದ ಅಂತಿಮ 'ಬಿ' ವರದಿ ತಿರಸ್ಕರಿಸಿದ ಕೋರ್ಟ್, ಸದರಿ ಪೊಲೀಸ್ ಅಧಿಕಾರಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶಿಸಿದೆ ಎಂದು ಮೈಸೂರಿನ ಯಾದವಗಿರಿ ನಿವಾಸಿ ಟಿ.ಸಿ.ರಾಜೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2015ರ ಮಾ.8ರಂದು ಅಂದಿನ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಿದ್ದ ಅಭಿನವ ಖರೆ, ತಮ್ಮ ಕಚೇರಿಯಲ್ಲಿ ನನ್ನ ಮೇಲೆ ಹಲ್ಲೆ ನಡೆಸಿದ್ದರು. ನಾನು ಹಣಕಾಸು ವ್ಯವಹಾರ (ಫೈನಾನ್ಸಿಯರ್) ನಡೆಸುವವನಾಗಿದ್ದು, ಮಹಿಳೆಯೊಬ್ಬರಿಂದ 10 ಲಕ್ಷ ರೂ. ಸಾಲ ಪಡೆದು, ಅವರಿಗೆ ಕಾಲಕ್ಕೆ ಸರಿಯಾಗಿ ಬಡ್ಡಿ ಪಾವತಿ ಮಾಡುತ್ತಿದ್ದೆ.

ಆದರೂ ಸಾಲ ಮರು ಪಾವತಿಗೆ ಆಕೆ ಒತ್ತಡ ಹಾಕುತ್ತಿದ್ದರು. ಹಣಕಾಸಿನ ವಿಚಾರದಲ್ಲಿ ತೊಂದರೆ ಉಂಟಾಗಿದ್ದ ಕಾರಣ ಸಾಲ ಮರು ಪಾವತಿ ಸಾಧ್ಯವಾಗಿರಲ್ಲಿಲ್ಲ. ಆ ಮಹಿಳೆ ಮಾತು ಕೇಳಿ ನನ್ನನ್ನು ತಮ್ಮ ಕಚೇರಿಗೆ ಕರೆಯಿಸಿಕೊಂಡ ಅಭಿನವ್ ಖರೆ, ಮಾತಿಗೆ ಮಾತು ಬೆಳೆಸಿ ವಿನಾಕಾರಣ ನನ್ನ ಕೈಮೂಳೆ ಮುರಿಯುವಂತೆ ಹಲ್ಲೆ ನಡೆಸಿದರು.

ಈ ಸಂಬಂಧ ಮೇಲಧಿಕಾರಿಗಳ ಮೊರೆ ಹೋದ ಪರಿಣಾಮ ಅಭಿನವ್ ಖರೆ ವಿರುದ್ಧ ಪ್ರಕರಣ ದಾಖಲಾಯಿತು. ಆದರೆ ತನಿಖಾಧಿಕಾರಿಯವರು 'ಯಾವುದೇ ಹಲ್ಲೆ ನಡೆದಿಲ್ಲ' ಎಂದು ಕೋರ್ಟ್‌ಗೆ 'ಬಿ' ವರದಿ ಸಲ್ಲಿಸಿದರು. ಈ ಸಂಬಂಧ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ, ಸಾಕ್ಷ್ಯಾಧಾರ ಒದಗಿಸಿದ್ದರಿಂದ ಕೋರ್ಟ್ 'ಬಿ' ವರದಿ ತಿರಸ್ಕರಿಸಿದೆ. ಅಲ್ಲದೆ, ಅಭಿನವ ಖರೆ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಚನೆ ನೀಡಿ, ಜುಲೈ 4ಕ್ಕೆ ವಿಚಾರಣೆಗೆ ಆಗಮಿಸುವಂತೆ ಅವರಿಗೆ ಸಮನ್ಸ್ ಜಾರಿ ಮಾಡಿ, ಆದೇಶ ನೀಡಿದೆ. ಮೈಸೂರಿನ ಜೆಎಂಎಫ್‌ಸಿ ಮೂರನೇ ಕೋರ್ಟ್ ಈ ಆದೇಶ ನೀಡಿದೆ ಎಂದು ವಿವರಿಸಿದರು.

ಮಹಾರಾಣಿ ಕೆಂಪನಂಜಮ್ಮಣ್ಣಿ ಜನ್ಮದಿನ: ಸಾಧಕ ಮಹಿಳೆಯರಿಗೆ ಸನ್ಮಾನ

ಮೈಸೂರು, ಏ.7(ಎಂಟಿವೈ)– ವಿಶ್ವ ಮಹಿಳಾ ದಿನ ಹಾಗೂ ರಾಜವಂಶಸ್ಥೆ ಮಹಾರಾಣಿ ಕೆಂಪನಂಜಮ್ಮಣ್ಣಿ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಕರ್ನಾಟಕ ಸೇನಾ ಪಡೆ ವತಿಯಿಂದ ಮಹಿಳಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಸೇನಾ ಪಡೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರ ಗೌರವಿಸಲಾಯಿತು. ಸಂಸ್ಕೃತ ಕ್ಷೇತ್ರ– ಡಾ. ಲೀಲಾ ಕೆ ಪ್ರಕಾಶ್, ಮಹಿಳಾ ಸಂಘಟನೆ ಕ್ಷೇತ್ರದಿಂದ ಎ.ವಿ.ವಿದ್ಯಾ ಅರಸ್, ಸಾಮಾಜಿಕ ಕ್ಷೇತ್ರದಿಂದ ವೈಶಾಲಿ ಹನುಮಂತ್ ಪದಕಿ, ಮಹಿಳಾ ಮತ್ತು ಮಕ್ಕಳ ಕ್ಷೇತ್ರ –ರೇಣುಕಾರಾಜ್, ಸೇವಾ ಕ್ಷೇತ್ರ–ಡಾ.ಪುಷ್ಪ ಎ.ಅಯ್ಯಂಗಾರ್, ಶಿಕ್ಷಣ ಕ್ಷೇತ್ರ–ಡಾ.ಪಿ.ಬಿ.ಇಂದುಕಲಾ ಅರಸ್, ಚುಟುಕು ಸಾಹಿತ್ಯ ಕ್ಷೇತ್ರ–ರತ್ನ ಹಾಲಪ್ಪಗೌಡ, ಕನ್ನಡ ಸಂಘಟನೆ ಕ್ಷೇತ್ರ– ಡಾ.ಜಿ.ಎಸ್.ಪುಷ್ಪಲತಾ ಅವರಿಗೆ 'ಮಹಾರಾಣಿ ಕೆಂಪನಂಜಮ್ಮಣಿ ವಾಣಿವಿಲಾಸ ಸನ್ನಿಧಾನ ಮಹಿಳಾ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಉದ್ಘಾಟಿಸಿ ಮಾತನಾಡಿ, ಮಹಾರಾಣಿ ಕೆಂಪನಂಜಮ್ಮಣಿ ಅಮ್ಮನವರನ್ನು ಪ್ರತಿಯೊಬ್ಬರು ಸ್ಮರಿಸಬೇಕು. ಸಾಕಷ್ಟು ಕೊಡುಗೆ ನೀಡಿ ಸಂಸ್ಥಾನದ ಪ್ರಜೆಗಳ ರಕ್ಷಣೆಗೆ ಶ್ರಮಿಸಿದ್ದಾರೆ. ಅವರ ಆಳ್ವಿಕೆ ಕಾಲದಲ್ಲಿ ಕೊರೊನಾ ಸೋಂಕಿಗಿಂತ ಭೀಕರ ಸಾಂಕ್ರಾಮಿಕ ರೋಗ ಸಿಡುಬು ಆವರಿಸಿತ್ತು. ಆಗಿನ ಜನರು ಸಿಡುಬು ಲಸಿಕೆ ಹಾಕಿಸಿಕೊಳ್ಳಲು ಭಯಪಡುತ್ತಿದ್ದರು. ಆಗ ಕೆಂಪನಂಜಮ್ಮಣ್ಣಿಯವರು ರಾಜಮನೆತನದ ಮಕ್ಕಳಿಗೆ ಮೊದಲು ಲಸಿಕೆ ಹಾಕಿಸಿ ಜನರಲ್ಲಿದ್ದ ಭಯವನ್ನು ಹೋಗಲಾಡಿಸಿದ್ದರು. ನಂತರ ಪ್ರಜೆಗಳಿಗೆಲ್ಲರೂ ಲಸಿಕೆ ಹಾಕಿಸಿಕೊಂಡಿದ್ದರು. ಮೈಸೂರಿನಲ್ಲಿರುವ ಟಿಬಿ ಆಸ್ಪತ್ರೆಯನ್ನು ಇವರ ಕಾಲದಲ್ಲೇ ನಿರ್ಮಿಸಲಾಯಿತು. ಕನ್ನಂಬಾಡಿ ಕಟ್ಟೆಗೆ ಹಣದ ಸಮಸ್ಯೆ ಎದುರಾದಾಗ ತಮ್ಮ ಆಭರಣವನ್ನು ಮಾರಲು ನೀಡಿದ್ದರು ಎಂದು ಸ್ಮರಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಡಿಯು ಮಹಿಳಾ ರಾಜ್ಯಾಧ್ಯಕ್ಷೆ ಡಾ. ಮಂಜುಳಾ ಉಮೇಶ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತರಾದ ಕು.ನಾಜಿಯಾ ಸುಲ್ತಾನ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ವಿ.ಜಯಣ್ಣ, ಸಿ.ಹೆಚ್ ಕೃಷ್ಣಯ್ಯ, ವಿದ್ಯಾಸಾಗರ್ ಕದಂಬ, ವಿಜಯೇಂದ್ರ, ಅಂಬಾ ಅರಸ್, ಪ್ರಜೀಶ್, ದರ್ಶನ್‌ಗೌಡ, ಬಂಗಾರಪ್ಪ, ಗೊರೂರು ಮಲ್ಲೇಶ್, ಪ್ರಭಾಕರ, ಪದ್ಮ, ಲತ, ಜ್ಯೋತಿ, ಇಂದಿರಾ, ರವಿನಾಯಕ, ಗುರುಮಲ್ಲಪ್ಪ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅರ್ಜಿ ಆಹ್ವಾನ

ಮೈಸೂರು, ಏ.7–ಮೈಸೂರಿನ ಸರಸ್ವತಿ ಪುರಂನಲ್ಲಿರುವ ವಿಶ್ವ ಕರ್ಮ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಶ್ವಕರ್ಮ ಜನಾಂಗದ ವಿದ್ಯಾರ್ಥಿಗಳು ಮೇ 25ರೊಳಗೆ ವಿದ್ಯಾರ್ಥಿ ನಿಲಯದ ಕಾರ್ಯಾಲಯದಿಂದ ಅರ್ಜಿ ಪಡೆದು ಸಲ್ಲಿಸಬಹುದು. ಕಳೆದ ವರ್ಷ ವಿದ್ಯಾರ್ಥಿನಿಲಯದಲ್ಲಿದ್ದ ವಿದ್ಯಾರ್ಥಿಗಳೂ ಈ ವರ್ಷದ ಪ್ರವೇಶಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ಮೊ.ಸಂ. 98807 77103 ಅಥವಾ 95914 45325 ಸಂಪರ್ಕಿಸಬಹುದು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 10/MYS/2022
ದಿನಾಂಕ: 04.04.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಹಾಸನ–ಮಂಗಳೂರು ಜಂಕ್ಷನ್: ಕಬಕ ಪುತ್ತೂರು ಸ್ಟೇಷನ್ ಯಾರ್ಡ್‌ನಲ್ಲಿ ಕಿಮೀ139/100–200 ರಲ್ಲಿ ಮಾನವಸಹಿತ ಲೆವೆಲ್ ಕ್ರಾಸಿಂಗ್ ನಂ.105 ರ ಬದಲಾಗಿ 2x9.15 ಮೀ ಪಿಎಸ್‌ಸಿ ಸ್ಲ್ಯಾಬ್ ಇಂದ ಕೆಳ ಸೇತುವೆ ರಸ್ತೆಯ ಉದ್ದೇಶಿತ ನಿರ್ಮಾಣ.	ರೂ. 8,11,97,919/–
2	ಮೈಸೂರಿನಲ್ಲಿ ಪ್ರಸ್ತಾವನೆ ಸಲ್ಲಿಸಲಾದಂತೆ ಹಾವೇರಿಯಲ್ಲಿ ಆರ್‌ಪಿಎಫ್ ಸಿಬ್ಬಂದಿಗಾಗಿ ಆರ್‌ಪಿಎಫ್ ಬ್ಯಾರಕ್‌ನ ಉದ್ದೇಶಿತ ನಿರ್ಮಾಣ. ಮೈಸೂರಿನಲ್ಲಿ ಆರ್‌ಪಿಎಫ್ ಸಿಬ್ಬಂದಿಗಾಗಿ (ಮಹಿಳೆಯರಿಗಾಗಿ) ಆರ್‌ಪಿಎಫ್ ಬ್ಯಾರಕ್ ನಿರ್ಮಾಣ (ಸ್ಥಳ ಬದಲಾವಣೆಗಾಗಿ ಜಿಎಂ/ಎಸ್‌ಡಬ್ಲ್ಯೂಆರ್ / ಯುಬಿಎಲ್ ನಿಂದ ಅನುಮೋದಿಸಲಾಗಿದೆ).	ರೂ. 71,17,732/–
3	ಅರಸೀಕೆರೆ: ಎರಡು ವರ್ಷಗಳ ಅವಧಿಗೆ ಪಿ.ವೇ ಡಿಪೋದಲ್ಲಿ (ಎಸ್ ಎಸ್ ಇ/ಪಿ.ವೇ/ಡಿಪೊ/ಇಎಸ್ ಕೆ) ಪಿ.ವೇ ಸಾಮಗ್ರಿಗಳನ್ನು ಅನ್‌ಲೋಡ್, ಲೀಡಿಂಗ್ ಮತ್ತು ಸ್ಟಾಕಿಂಗ್ ಮಾಡುವುದು.	ರೂ. 13,45,030/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26–04–2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನೀಯರ್/ಕೋ–ಆರ್ಡ್ ಮೈಸೂರು

PUB/17/AAV/PRB/SWR/2022-23

S.W.Railways SWRRLY SWRRLY

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: ಸಿಎಚ್/ಸಿಎಸ್/ಬಿಎಸ್‌ಸಿ/15/2022 ದಿನಾಂಕ: 30.03.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಐಟಂ ವಿವರ	ಅಂದಾಜು ವೆಚ್ಚ
ಶಿವಮೊಗ್ಗ – ತಾಳಗುಪ್ಪ ವಿಭಾಗದ ಕೋಟೆಗಂಗೂರಿನಲ್ಲಿ ಕಿಮೀ. 69/200 ರಿಂದ ಕಿಮೀ. 70/630 ರ ನಡುವಿನ ಉದ್ದೇಶಿತ ಕೋಚಿಂಗ್ ಡಿಪೋ ಯಾರ್ಡ್‌ನಲ್ಲಿ ವಿದ್ಯುತ್ ಉಲ್ಲಂಘನೆಯನ್ನು ಬದಲಾಯಿಸುವುದು / ತೆಗೆದುಹಾಕುವುದು.	Rs. 47,27,113/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.04.2022 ಸಮಯ: 11:00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ (ನಿರ್ಮಾಣ) ಬೆಂಗಳೂರು

S.W.Railways SWRRLY SWRRLY

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ – ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2022ಕ್ಕೆ 42 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 43ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 14, 2022 ರೊಳಗೆ ನೀಡಬೇಕಾಗಿ ಕಳಕಳಿ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879, ಗಿರೀಶ್. ಆರ್: 9945783118

ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಕಛೇರಿ: ಪ್ರಸಾದ್
ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ
08272-223517 / 97314-69871

ಮಂಡ್ಯ ಕಛೇರಿ: ಎಂ.ಕೆ. ಮೋಹನ್‌ರಾಜ್
3ನೇ ಕ್ರಾಸ್, ಅಶೋಕನಗರ, ಮಂಡ್ಯ
8762960325

ಚಾಮರಾಜನಗರ ಕಛೇರಿ: ಸಿದ್ದಲಿಂಗಸ್ವಾಮಿ
ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ
92422-65657

ಹಾಸನ: ಆರ್.ಎನ್.ಸೋಮೇಶ್‌ಗೌಡ
ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 94484-01175

ನಂಜನಗೂಡು: ಎಂ.ಎಸ್.ಸುದರ್ಶನ್
ಇಡಬ್ಲ್ಯೂಎಸ್–12, ಕೆಹೆಚ್‌ಬಿ ಕಾಲೋನಿ, ನಂಜನಗೂಡು.
9972335009

ಟಿ. ನರಸೀಪುರ: ಕುಮಾರ್
ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 99867-19590

ಹುಣಸೂರು: ಕೆ. ಕೃಷ್ಣ (ಕೆ.ಕೆ.)
EWS 204, KHB ಕಾಲೋನಿ, ಹುಣಸೂರು. 94487-20626
ಹುಣಸೂರು: ಹೆಚ್.ಎಸ್.ಮುರಳೀಧರ್
ಬ್ರಾಹ್ಮಣರ ಬೀದಿ, ಹುಣಸೂರು. 94482-22415

ಕೆ.ಆರ್. ನಗರ: ಕೆ.ಟಿ. ರಮೇಶ್
ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. 94480-21368

ಗುಂಡ್ಲುಪೇಟೆ: ಸೋಮಶೇಖರ್
ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 98459-95426

ಶ್ರೀರಂಗಪಟ್ಟಣ: ವಿನಯ್ ಕಾರೇಕುರ
96868-93234

ನಗರಸಭಾ ಕಾರ್ಯಾಲಯ, ಹುಣಸೂರು ಮೈಸೂರು ಜಿಲ್ಲೆ – 571105
CITY MUNICIPAL COUNCIL, HUNSUR MYSORE DIST.,–571105.

ಈ–ಮೇಲ್ : itstaff_ulb_hunsur@yahoo.co.in ಫ್ಯಾಕ್ಸ್ : 08222–252250 ಕಛೇರಿ ಫೋನ್ : 252048
E-mail : itstaff_ulb_hunsur@yahoo.co.in Fax : 08222-252250 office Phone : 252048

ಸಂಖ್ಯೆ:– ಹುನಕಾ/ಕಿಅ/ಪುರಭವನ//01/2022–23 ದಿನಾಂಕ:–06/04/2022

ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಗುತ್ತಿಗೇದಾರರಿಗೆ/ವ್ಯಾಪಾರಸ್ಥರು/ಮಾರಟಗಾರರಿಗೆ ತಿಳಿಯಪಡಿಸುವುದೇನೆಂದರೆ ಹುಣಸೂರು ನಗರಸಭೆಯ ಮೈದಾನದಲ್ಲಿ ಶಿಥಿಲಾವಸ್ಥೆಯಲ್ಲಿರುವ ಪುರಭವನ (ಹಳೆ ನಗರಸಭಾ ಕಛೇರಿ) ಕಟ್ಟಡವನ್ನು ತೆರವು ಮಾಡಿ ನೆಲಸಮಗೊಳಿಸಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಉಪವಿಭಾಗ, ಹುಣಸೂರು ರವರ ಪತ್ರ ಸಂಖ್ಯೆ:– ಸ.ಕಾ.ಇಂ.ಲೋ.ಇ.ಉ.ವಿ./ಹುಣಸೂರು/ಸ.ಇಂ–3/2021–22/588–89 ದಿನಾಂಕ:–04/10/2021 ರ ವರದಿ ಹಾಗೂ ದಿನಾಂಕ:–28/01/2022 ರಂದು ನಡೆದ ಹುಣಸೂರು ನಗರಸಭೆಯ ಸಾಮಾನ್ಯ ಸಭೆಯ ನಡವಳಿಗಳ ವಿಷಯ ಸಂಖ್ಯೆ:–09 ರ ತೀರ್ಮಾನದಂತೆ ದಿನಾಂಕ:– 18/04/2022 ರಂದು ಬೆಳಗ್ಗೆ 11:00 ಗಂಟೆಗೆ ನಗರಸಭಾ ಕಛೇರಿಯಲ್ಲಿ ಪೌರಾಯುಕ್ತರ ಸಮ್ಮುಖದಲ್ಲಿ ಬಹಿರಂಗ ಹರಾಜನ್ನು ಕರೆಯಲಾಗಿದೆ.ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಕ್ರ.ಸಂ.	ಹರಾಜಿನ ವಿವರ	ಮುಂಗಡ ಠೇವಣಿ (ರೂ.)	ಪ್ರಾರಂಭಿಕ ಬಿಡ್ ಮೊತ್ತ (ರೂ.)
1	ಹುಣಸೂರು ನಗರಸಭೆಯ ಮೈದಾನದಲ್ಲಿರುವ ಶಿಥಿಲಗೊಂಡಿರುವ ಪುರಭವನ (ಹಳೆ ನಗರಸಭಾ ಕಛೇರಿ) ಕಟ್ಟಡವನ್ನು ಬಿಡ್‌ದಾರರು ಸಂಪೂರ್ಣವಾಗಿ ತೆರವುಗೊಳಿಸಿ ಅದರಲ್ಲಿ ಸಿಗುವ ಎ.ಸಿ./ಜಿ.ಐ. ಶೀಟ್‌ಗಳು, ಕಬ್ಬಿಣ, ಮರದ ಬಾಗಿಲು/ಕಿಟಕಿಗಳು ಮತ್ತು ಸೈಜ್ ಕಲ್ಲುಗಳು ಇತ್ಯಾದಿ ಉಪಯುಕ್ತ ಸಾಮಗ್ರಿಗಳನ್ನು ತಮ್ಮದಾಗಿಸಿಕೊಂಡು ಅನುಪಯುಕ್ತ ಸಾಮಗ್ರಿಗಳು ಮತ್ತು ಭಗ್ನಾವಶೇಷಗಳನ್ನು ಮೈದಾನದಿಂದ ಹೊರಗೆ ಸೂಕ್ತ ಸ್ಥಳಕ್ಕೆ ಸಾಗಿಸಿ ಕಟ್ಟಡದ ಜಾಗವನ್ನು ಸಮತಟ್ಟ ಮಾಡಿ ಕೊಡುವುದು.	10,000/–	1,37,000/–

ಷರತ್ತುಗಳು:–

1. ಹರಾಜಿನಲ್ಲಿ ಭಾಗವಹಿಸಲು ಬಿಡ್ಡುದಾರರು ತಮ್ಮ ಅರ್ಜಿಯೊಂದಿಗೆ ದಿನಾಂಕ:–16/04/2022 ರ ಸಂಜೆ 4:00 ಗಂಟೆಯೊಳಗೆ ಮುಂಗಡ ಠೇವಣಿ ರೂ.10,000/– ಗಳ ಬ್ಯಾಂಕ್ ಡಿ.ಡಿ.ಯನ್ನು ಪೌರಯುಕ್ತರು, ನಗರಸಭೆ, ಹುಣಸೂರು ರವರ ಹೆಸರಿನಲ್ಲಿ ಪಡೆದು ಕಛೇರಿಗೆ ಸಲ್ಲಿಸಿ ತಮ್ಮ ವ್ಯಾಪಾರ/ಗುತ್ತಿಗೇದಾರರ ನೋಂದಣಿ ಪತ್ರ/ಪ್ಯಾನ್ ಕಾರ್ಡ್/ಆಧಾರ್ ಕಾರ್ಡ್ ದಾಖಲಾತಿಗಳನ್ನು ಹಾಜರುಪಡಿಸಿ ಹೆಸರನ್ನು ನೋಂದಾಯಿಸಿ ಟೋಕನ್ ಪಡೆಯುವುದು. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
2. ಹರಾಜಿನಲ್ಲಿ ಹೆಸರು ನೋಂದಾಯಿಸಿದವರಿಗೆ ಮಾತ್ರ ಬಿಡ್ ಕೂಗಲು ಅವಕಾಶವಿದ್ದು, ಅವರ ಪರವಾಗಿ ಬಿಡ್ ಕೂಗಲು ಯಾವುದೇ ಸಹಾಯಕರಿಗೆ ಅವಕಾಶ ನಿಡಲಾಗುವುದಿಲ್ಲ.
3. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಕನಿಷ್ಠ ರೂ. 1000/– ರ ಗಣಕದಲ್ಲಿ ಬಿಡ್ಡು ಮೊಬಲಗನ್ನು ಏರಿಸತಕ್ಕದ್ದು.
4. ಹರಾಜು ಪ್ರಕ್ರಿಯೆಯನ್ನು ಅಂಗೀಕರಿಸುವ, ಮುಂದೂಡುವ ಅಥವಾ ರದ್ದು ಪಡಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು ನಗರಸಭೆ ಹುಣಸೂರು	ಉಪಾಧ್ಯಕ್ಷರು ನಗರಸಭೆ ಹುಣಸೂರು	ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ ಹುಣಸೂರು	ಪೌರಾಯುಕ್ತರು ನಗರಸಭೆ ಹುಣಸೂರು

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ)., ಮೈಸೂರು

ಸಹಕಾರ ಸಂಕೀರ್ಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು – 570004, ಫೋನ್: 0821– 2447492

ಸಭೆ ಮುಂದೂಡಿರುವ ಬಗ್ಗೆ

ಮೇಲ್ಕಂಡ ಸಂಘದ ಬಾಬ್ತು ಹೆಮ್ಮನಹಳ್ಳಿ–ಹುಯಿಲಾಳು ಲೇಔಟ್‌ನಲ್ಲಿ ನಿವೇಶನಗಳ ಸಂಖ್ಯೆಯನ್ನು ಲಾಟರಿ ಮೂಲಕ ಆಯ್ಕೆ ಮಾಡಲು ದಿನಾಂಕ 10.04.2022 ರ ಭಾನುವಾರ ನಿಗಧಿಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಸದರಿ ಸಭೆಯನ್ನು ದಿನಾಂಕ 23–04–2022 ರ ಶನಿವಾರ ಬೆಳಗ್ಗೆ 11.00 ಘಂಟೆಗೆ ಮುಂದೂಡಲಾಗಿದೆ.

ಸೂಚನೆ: 1. ಸದಸ್ಯರು ಕಡ್ಡಾಯವಾಗಿ ಪಾಸ್‌ಪುಸ್ತಕ ತರಲು ಕೋರಲಾಗಿದೆ.
2. ಸದಸ್ಯರಲ್ಲದವರಿಗೆ ಸಭೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ

ಆಡಳಿತ ಮಂಡಳಿ ಪರವಾಗಿ
ಸಹಿ/– ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: admnchamul@gmail.com

ಐ.ಎಫ್.ಟಿ ಸಂಖ್ಯೆ: ಚಾಮುಲ್/ಆಡಳಿತ/ಇನ್‌ಶ್ಯೂರೆನ್ಸ್ ಟೆಂಡರ್/358–03/2022–2023 ದಿನಾಂಕ 08.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಅಧಿಕಾರಿ / ಸಿಬ್ಬಂದಿಯವರುಗಳಿಗೆ ಮತ್ತು ಅವರ ಅವಲಂಬಿತರಿಗೆ ಐ.ಆರ್.ಡಿ.ಎ ನೊಂದಾಯಿತ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ 2022–2023 ನೇ ಸಾಲಿಗೆ ಆರೋಗ್ಯ ವಿಮೆ ಮಾಡಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ www.eproc.karnataka.gov.in ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

1. ಟೆಂಡರ್ ದಾಸ್ತಾವೇಜು (Access to E-Tender) ಲಭ್ಯತೆ: ದಿನಾಂಕ 08.04.2022 ರಿಂದ
2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ/ಸಮಯ: 16.04.2022, ಸಂಜೆ 4.00 ಘಂಟೆಯವರೆಗೆ.
3. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ/ಸಮಯ 18.04.2022, ಬೆಳಗ್ಗೆ 11.00 ಘಂಟೆಗೆ.
4. ಟೆಂಡರ್ ತೆರೆಯುವ ಸ್ಥಳ : ಆಡಳಿತ ವಿಭಾಗ, ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಳ್ಳಿ ಹೋಬಳಿ, ಚಾಮರಾಜನಗರ–571316.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು(ಆಡಳಿತ)–9606098300 ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು



ಗುರುವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಹಾಗೂ ನಿರ್ದೇಶಕರಾದ ಪಿ.ಸವಿತಾ ಅವರನ್ನು ಎಸ್.ಸೋಮಣ್ಣ, ಪಿ.ರಾಜೇಶ್ವರಿ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಜೆ.ಯೋಗೇಶ್, ಸಿ.ರೇವಣ್ಣ, ಹೆಚ್.ಹರೀಶ್‌ಕುಮಾರ್, ಎಸ್.ಅರವಿಂದ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷೆ ಮಹಾಲಕ್ಷ್ಮಿ, ಸಿ.ಡಿ.ಕುಮಾರ್, ಬಿ.ಕುಮಾರ್, ಸಂತೋಷ್, ರಾಘವ್‌ಗೌಡ, ಪುಟ್ಟಣ್ಣ, ನಂದಕುಮಾರ್ ಅಭಿನಂದಿಸಿದರು.

ನಾಳೆ ವಿದ್ಯುತ್ ವ್ಯತ್ಯಯ

ಬನ್ನೂರು,ಏ.7(ಪ್ರಭು)–ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಬನ್ನೂರು, ಚಾಮನಹಳ್ಳಿ, ಸಂತೇಮಳ, ಚಾಮನಹಳ್ಳಿ ಕೊಪ್ಪಲು, ಹನುಮನಾಳು, ಬೀಡನಹಳ್ಳಿ, ಮಾರೇಗೌಡನಹಳ್ಳಿ, ಬಾಣಗವಾಡಿ, ಯಡಹಳ್ಳಿ, ದಾಸೇಗೌಡನಕೊಪ್ಪಲು ಗ್ರಾಮಗಳಲ್ಲಿ ಏ.9 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಚಾ.ಬೆಟ್ಟದ ಭೂಕುಸಿತ: ದುರಸ್ತಿ ಕಾಮಗಾರಿ ತಿಂಗಳಲ್ಲಿ ಪ್ರಾರಂಭ

ಭಾರತೀಯ ವಿಜ್ಞಾನ ಸಂಸ್ಥೆ ತಜ್ಞರ ವರದಿಯನ್ವಯ 9.75 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿ

ಮೈಸೂರು, ಏ.7(ಆರ್‌ಕೆ)– ಚಾಮುಂಡಿಬೆಟ್ಟದಲ್ಲಿ ಉಂಟಾಗಿದ್ದ ಭೂ ಕುಸಿತವನ್ನು ದುರಸ್ತಿ ಮಾಡಿ ಸಂಚಾರಕ್ಕೆ ಅನುವು ಮಾಡಿಕೊಡಲು ತಿಂಗಳಲ್ಲಿ ಕಾಮಗಾರಿ ಆರಂಭವಾಗಲಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಸ್) ತಜ್ಞರ ವರದಿಯಂತೆ ವೈಜ್ಞಾನಿಕವಾಗಿ ಕಾಮಗಾರಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಕರೆದಿದೆ. ಐಐಎಸ್ ನಿಂದಲೇ ತಾಂತ್ರಿಕ ಸಲಹೆ ಹಾಗೂ 9.75 ಕೋಟಿ ರೂ. ಅಂದಾಜು ವೆಚ್ಚ ತಯಾರಿಸಿದ್ದು, ಯಶಸ್ವಿ ಬಿಡ್ಡುದಾರರಿಗೆ ಕಾರ್ಯಾದೇಶ (ವರ್ಕ್ ಆರ್ಡರ್) ನೀಡಿ ತಿಂಗಳೊಳಗಾಗಿ ಕಾಮಗಾರಿ ಆರಂಭಿಸಲಾಗುವುದು ಎಂದು ಲೋಕೋಪಯೋಗಿ ಅಧಿಕಾರಿಗಳು ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ನಂದಿ ಬಳಿ ರಸ್ತೆಯ ಬಲ ಬದಿಯಲ್ಲಿ ಭಾರೀ ಮಳೆಯಿಂದ ಭೂಕುಸಿತ ಉಂಟಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಆ ಮಾರ್ಗ ಬ್ಯಾರಿಕೇಡ್ ಹಾಕಿ ಸಂಚಾರವನ್ನು ಬಂದ್ ಮಾಡಲಾಗಿತ್ತು.

ಭೂಮಿ ಕುಸಿದಿದ್ದ ಸ್ಥಳದ ಮಣ್ಣನ್ನು ತೆಗೆದು, ತಳಮಟ್ಟದಲ್ಲಿ ಕಾಂಕ್ರೀಟ್ ಬೇಸ್‌ಮೆಂಟ್ ಹಾಕಿ ಅದರ ಮೇಲೆ ಸುಭದ್ರವಾಗಿ ತಡೆಗೋಡೆ ನಿರ್ಮಿಸುವ ಬಗ್ಗೆ ಮೂರು ಬಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವಿನೂತನ ತಂತ್ರಜ್ಞಾನ ಬಳಸಿ ಕಾಮಗಾರಿ ಕೈಗೊಳ್ಳುವ ಬಗ್ಗೆ ತಜ್ಞರು ವರದಿ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. 2019ರಿಂದಲೂ ಚಾಮುಂಡಿಬೆಟ್ಟದ ಹಲವೆಡೆ ಮಳೆಗಾಲದಲ್ಲಿ ಭೂ ಕುಸಿತವಾಗುತ್ತಿತ್ತು. ಅಲ್ಲಿ ಹಲವು ಅಭಿವೃದ್ಧಿ



ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಭಾರೀ ಮಳೆ ಬಿದ್ದ ಕಾರಣ ಕಳೆದ ವರ್ಷವೂ ಭೂ ಕುಸಿತ ಉಂಟಾಗಿತ್ತು. ಇಂತಹ ಘಟನೆ ಮರುಕಳಿಸದಂತೆ ತಡೆಯಲು ಹಾಗೂ ಉಂಟಾಗಿರುವ ಹಾನಿ ಸರಿಪಡಿಸಲು ಸರ್ಕಾರವು ಭಾರತೀಯ ವಿಜ್ಞಾನ ಸಂಸ್ಥೆ ತಜ್ಞರಿಗೆ ಪರಿಶೀಲಿಸಿ, ವರದಿ ಸಲ್ಲಿಸುವಂತೆ ಕೋರಿಕೊಂಡಿತ್ತು. ನಂದಿಗೆ ಹೋಗುವ ರಸ್ತೆಯಲ್ಲಿ ಭೂಕುಸಿದಿದ್ದ ಸ್ಥಳ ಪರಿಶೀಲಿಸಿ ಮಣ್ಣಿನ ಸ್ಯಾಂಪಲ್ ತೆಗೆದು ಲ್ಯಾಬೊರೇಟರಿಯಲ್ಲಿ ಪರೀಕ್ಷೆ ಮಾಡಿದ ನಂತರ ರಿಪೇರಿ ಮಾಡಿ ಯಥಾಸ್ಥಿತಿಗೆ ತರಲು ತಂತ್ರಜ್ಞಾನದ ಕಾಮಗಾರಿ ಕೈಗೊಳ್ಳಲು ತಗಲುವ ಅಂದಾಜು ವೆಚ್ಚ ತಯಾರಿಸಿದ ತಜ್ಞರು ಶಿಫಾರಸ್ಸಿನೊಂದಿಗೆ ಸಮಗ್ರ ವರದಿ ಸಲ್ಲಿಸಿದ್ದರು.

ಅದರಂತೆ ಅರ್ಹ ಗುತ್ತಿಗೆದಾರ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಷರತ್ತುಗಳನ್ವಯ ಯಶಸ್ವಿ ಬಿಡ್ಡುದಾರರಿಗೆ ಕಾಮಗಾರಿ ಒಪ್ಪಿಸಿ ಕಾರ್ಯಾದೇಶ ನೀಡಿದ ನಂತರ ಕೆಲಸ ಆರಂಭಿಸಲು ಲೋಕೋಪಯೋಗಿ ಇಲಾಖೆಯು ತಯಾರಿ ನಡೆಸುತ್ತಿದೆ.

ಮತ್ತೆ ಮಳೆ ಆರಂಭವಾಗುವಷ್ಟರಲ್ಲಿ ಕುಸಿದ ಸ್ಥಳವನ್ನು ಸರಿಪಡಿಸಿ, ಯಥಾಸ್ಥಿತಿ ರಸ್ತೆ ನಿರ್ಮಿಸಿದ ನಂತರ ಆ ಮಾರ್ಗದ ರಸ್ತೆಯನ್ನು ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಷರ ದಾಸೋಹ ಬಿಸಿಯೂಟ ನೌಕರರ ದಿಢೀರ್ ನಿವೃತ್ತಿ ಖಂಡಿಸಿ

ಏ.11, ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಭಾರೀ ಪ್ರತಿಭಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅಕ್ಷರ ದಾಸೋಹ ನೌಕರರು ಸುದ್ದಿಗೋಷ್ಠಿ ನಡೆಸಿದರು.

ಮೈಸೂರು,ಏ.7(ಪಿಎಂ)–ಅಕ್ಷರ ದಾಸೋಹ ಬಿಸಿಯೂಟ ನೌಕರರನ್ನು 60 ವರ್ಷ ವಯೋಮಾನದ ನೆಪವೊಡ್ಡಿ ಕರ್ತವ್ಯದಿಂದ ಬಿಡುಗಡೆ ಮಾಡುತ್ತಿರುವುದನ್ನು ಖಂಡಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಏ.11ರಂದು ರಾಜ್ಯ ಅಕ್ಷರ ದಾಸೋಹ ನೌಕರರ ಸಂಘವು (ಸಿಐಟಿಯು ಸಂಯೋಜಿತ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಭಾರೀ ಪ್ರತಿಭಟನೆ ಹಮ್ಮಿಕೊಂಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಈ ವಿಷಯ ತಿಳಿಸಿದ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜಯರಾಂ, 2001–02ರಲ್ಲಿ ಅಡುಗೆ ಕೆಲಸಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಸರ್ಕಾರದ ಕೈಪಿಡಿಯಲ್ಲಿ ವಿದ್ಯಾಭ್ಯಾಸ ಮತ್ತು ವಯಸ್ಸಿನ ಅರ್ಹತೆ ಮಾತ್ರ ನಿಗದಿ ಮಾಡಲಾಗಿತ್ತು. ಅದರಲ್ಲಿ ನಿವೃತ್ತಿ ವಯಸ್ಸು ನಿಗದಿಯಾಗಿರಲಿಲ್ಲ. ಅಲ್ಲದೆ, ಈವರೆಗೆ 60 ವರ್ಷ ವಯೋಮಿತಿ ದಾಟಿದವರು ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ ಇದೀಗ 60 ವರ್ಷ ವಯೋಮಾನದ ನೆಪವೊಡ್ಡಿ ನಿವೃತ್ತಿ ಹೆಸರಿನಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಿಸಿಯೂಟ ಯೋಜನೆ ಪ್ರಾರಂಭವಾದಾಗಿನಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಮತ್ತು ಶೈಕ್ಷಣಿಕ ಆಸಕ್ತಿ ಮೂಡಿಸುವಲ್ಲಿ ಈ ಮಹಿಳೆಯರ ತಾಯ್ತನದ ಪರಿಶ್ರಮವಿದೆ. ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) 2016ರಿಂದಲೂ ವಯಸ್ಸಿನ ಆಧಾರದಲ್ಲಿ ನಿವೃತ್ತಿ ಸೌಲಭ್ಯ ಕೊಡಬೇಕೆಂದು ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಬಿಸಿಯೂಟ ನೌಕರರ ವೇತನದಲ್ಲಿ 100 ರೂ. ಮತ್ತು ಸರ್ಕಾರ 100 ರೂ. ಭರಿಸಿ, ಎಲ್‌ಐಸಿ ಮೂಲಕ ವಿಶೇಷ ಪಿಂಚಣಿ ಯೋಜನೆ ರೂಪಿಸಲು ಒಪ್ಪಿಗೆ ಸೂಚಿಸಲಾಗಿತ್ತು ಎಂದರು.

ಈ ಸಂಬಂಧ ಇಲಾಖಾಧಿಕಾರಿಗಳು ಮತ್ತು ನಮ್ಮ ಸಂಘಟನೆ ಮುಖಂಡರ ಒಳಗೊಂಡ ಸಮಿತಿಯೊಂದನ್ನು ರಚನೆ ಮಾಡಲಾಗಿತ್ತು. ಆದರೆ ಈ ಎಲ್ಲಾ ಕ್ರಮಗಳು ಜಾರಿಯಾಗುವ ಮೊದಲೇ ಸರ್ಕಾರ ಏಕಾಏಕಿ ಬಿಸಿಯೂಟ ನೌಕರರನ್ನು ನಿವೃತ್ತಿ ಮಾಡುತ್ತಿರುವುದು ಅಮಾನವೀಯ ಎಂದು ಖಂಡಿಸಿದರು.

ಯಾವುದೇ ನಿವೃತ್ತಿ ಸೌಲಭ್ಯವಿಲ್ಲದೆ ರಾಜ್ಯದಲ್ಲಿ ಸುಮಾರು 12 ಸಾವಿರ ನೌಕರರನ್ನು ಸರ್ಕಾರ ತೆಗೆದು ಹಾಕಲು ಮುಂದಾಗಿದೆ. ಸರ್ಕಾರ ಕೂಡಲೇ ಈ ಸಂಬಂಧ ಹೊರಡಿಸಿರುವ ಸುತ್ತೋಲೆಯನ್ನು ಹಿಂದಕ್ಕೆ ಪಡೆಯಬೇಕು. ಏ.11ರಂದು ಪ್ರತಿಭಟನೆ ನಂತರವೂ ಸರ್ಕಾರ ಸ್ಪಂದಿಸದಿದ್ದರೆ ಏ.18ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬೇಡಿಕೆಗಳು: 60 ವರ್ಷ ವಯೋಮಾನದ ಬಿಸಿಯೂಟ ನೌಕರರನ್ನು ಕೆಲಸದಿಂದ ಬಿಡುಗಡೆಗೊಳಿಸುವಾಗ ನಿವೃತ್ತಿ ವೇತನ ಅಥವಾ ಇಡಿಗಂಟು ನೀಡಿ ಬಿಡುಗಡೆ ಮಾಡಬೇಕು. ಸರ್ಕಾರ ನಿವೃತ್ತಿ ವೇತನ ನಿಗದಿ ಮಾಡುವವರೆಗೆ ಕರ್ತವ್ಯದಿಂದ ಬಿಡುಗಡೆ ಮಾಡಿದ ಬಿಸಿಯೂಟ ನೌಕರರಿಗೆ ಇಡಿಗಂಟು 1 ಲಕ್ಷ ರೂ.ಪರಿಹಾರ ನೀಡಬೇಕು. ಮಾರ್ಚ್ ತಿಂಗಳ ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಹೆಚ್ಚಳ ಮಾಡಿದ 1 ಸಾವಿರ ವೇತನವನ್ನು 2022ರ ಜನವರಿಯಿಂದ ಅನ್ವಯಿಸಿ ಜಾರಿಗೊಳಿಸಬೇಕು. ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷೆ ಕೆ.ಮಂಜುಳಾ, ಪ್ರಧಾನ ಕಾರ್ಯದರ್ಶಿ ಎಸ್.ಮಂಗಳಾ, ಅಕ್ಷರ ದಾಸೋಹದ ನೌಕರರಾದ ಲೀಲಾವತಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಸ್ಲಿಂ ವರ್ತಕರು ನಮ್ಮೂರಿಗೆ ಬರುತ್ತಿಲ್ಲ, ನೀವೇ ನಮ್ಮ ಗುಜರಿ ಪದಾರ್ಥ ಕೊಂಡುಕೊಳ್ಳಿ...

ಸಂಸದ ಪ್ರತಾಪ್ ಸಿಂಹರಿಗೆ ದಸಂಸ ಕಾರ್ಯಕರ್ತರ ಆಗ್ರಹ; ಅವರ ಮನೆಗೆ ಮುತ್ತಿಗೆ ಯತ್ನ, ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದ ಪೊಲೀಸರು

ಮೈಸೂರು,ಏ.7(ಪಿಎಂ)–ಮೈಸೂರಿನ ವಿಜಯನಗರದಲ್ಲಿರುವ ಸಂಸದ ಪ್ರತಾಪ್ ಸಿಂಹ ನಿವಾಸಕ್ಕೆ ಗುರುವಾರ ಮುತ್ತಿಗೆ ಹಾಕಲು ಯತ್ನಿಸಿದ ದಲಿತ ಸಂಘರ್ಷ ಸಮಿತಿ (ದಸಂಸ) ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಬಿಜೆಪಿ ನಾಯಕರು, ಹಿಂದೂಪರ ಸಂಘಟನೆಗಳು ಮುಸಲ್ಮಾನ ವರ್ತಕರ ವ್ಯಾಪಾರ ಬಹಿಷ್ಕರಿಸಬೇಕೆಂಬ ಕೋಮು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವ ಮೂಲಕ ಸಮಾಜದ ಸಾಮರಸ್ಯ ಹಾಳು ಮಾಡುತ್ತಿದ್ದಾರೆ. ಇದರಲ್ಲಿ ಪ್ರತಾಪ್ ಸಿಂಹ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಆರೋಪಿಸಿ ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ ನೇತೃತ್ವದಲ್ಲಿ ಸಂಸದರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಲಾಯಿತು.

ಮೈಸೂರಿನ ವಿಜಯನಗರ 4ನೇ ಹಂತದ ಕನ್ನಡ ವೃತ್ತದ ಬಳಿ ಜಮಾಯಿಸಿದ ಕಾರ್ಯಕರ್ತರು, ಗೂಡ್ಸ್ ಆಟೋದಲ್ಲಿ ತಂದಿದ್ದ ಹಳೇ ಪೇಪರ್, ಹಳೇ ಕಬ್ಬಿಣ, ಖಾಲಿ ಬಾಟಲಿಗಳು, ಟೈರ್ ಟ್ಯೂಬ್ ಸೇರಿದಂತೆ ಹಲವು ಸಾಮಗ್ರಿಗಳನ್ನು ತುಂಬಿದ್ದ ಚೀಲಗಳನ್ನು ಹಿಡಿದು, ಸಂಸದರ ವಿರುದ್ಧ ಧಿಕ್ಕಾರ ಕೂಗಿದರು.

ಇವುಗಳನ್ನು ಖರೀದಿಸಲು ನಮ್ಮ ಹಳ್ಳಿಗಳಿಗೆ ಮುಸಲ್ಮಾನ ವರ್ತಕರು ಬರುತ್ತಿದ್ದರು. ಆದರೆ ಕೋಮು ಪ್ರಚೋದನಾಕಾರಿ ಹೇಳಿಕೆಗಳಿಂದ ಅವರೀಗ ನಮ್ಮ ಹಳ್ಳಿಗಳತ್ತ ಬರುತ್ತಿಲ್ಲ. ಹಾಗಾಗಿ ಇವುಗಳನ್ನು ಈಗ ಪ್ರತಾಪ್ ಸಿಂಹ ಅವರೇ ಖರೀದಿಸಬೇಕು. ಅವರ ಮನೆಗೆ ಹೋಗಿ ಕೊಂಡುಕೊಳ್ಳುವಂತೆ ಅವರನ್ನೇ ಕೇಳುತ್ತೇವೆ ಎಂದು ಸಂಸದರ ನಿವಾಸದತ್ತ ತೆರಳಲು ಮುಂದಾದರು.



ಇಲ್ಲಿನ ಕನ್ನಡ ವೃತ್ತದ ಬಳಿ ಇರುವ ಪ್ರತಾಪ್ ಸಿಂಹ ನಿವಾಸದತ್ತ ತೆರಳಲು ಯತ್ನಿಸುತ್ತಿದ್ದಂತೆ ಪೊಲೀಸರು, ಅವರ ಮನವೊಲಿಸಲು ಮುಂದಾದರು. ಆದರೂ ಮುನ್ನುಗ್ಗಲು ಯತ್ನಿಸಿದಾಗ ಕೊನೆಗೆ ಬ್ಯಾರಿಕೇಡ್‌ಗಳನ್ನು ತಡೆಯೊಡ್ಡಿ ಸಂಸದರ ನಿವಾಸದತ್ತ ತೆರಳದಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಭಟನಾಕಾರರು ಜಗ್ಗದೇ ಇದ್ದಾಗ ಕೊನೆಗೆ ಎಲ್ಲರನ್ನೂ ವಶಕ್ಕೆ ಪಡೆದ ಪೊಲೀಸರು, ವ್ಯಾನ್‌ನಲ್ಲಿ ಕೂರಿಸಿಕೊಂಡರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ, ಸಮಾಜದಲ್ಲಿ ಮುಸಲ್ಮಾನ ಸಮುದಾಯವನ್ನು ಗುರಿಯಾಗಿಸಿಕೊಂಡು ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಇತ್ತೀಚೆಗೆ ಹಿಜಾಬ್, ಹಲಾಲ್ ಮಾಂಸ ಮತ್ತು ವ್ಯಾಪಾರದ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿವೆ. ಇದರಲ್ಲಿ ಸಂಸದ ಪ್ರತಾಪ್ ಸಿಂಹ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ದೂರಿದರು.

ನಮ್ಮ ದೇಶ ಸರ್ವ ಜನಾಂಗದ ಶಾಂತಿಯ ತೋಟ. ಇಲ್ಲಿ ಕೋಮು ವಿಷಬೀಜ ಬಿತ್ತುವುದನ್ನು ಸಹಿಸುವುದಿಲ್ಲ. ಈ ದೇಶದ ಪ್ರಜೆಗಳಾದ ಮೇಲೆ ಹಿಂದೂ, ಮುಸಲ್ಮಾನ ಸೇರಿದಂತೆ ಯಾವುದೇ ಧರ್ಮೀಯರಾಗಲೀ, ಎಲ್ಲರೂ ಒಂದೇ. ಇಲ್ಲಿ ಕೋಮು ಪ್ರಚೋದನಾಕಾರಿ ವಾತಾವರಣವನ್ನು ಸೃಷ್ಟಿ ಮಾಡಬಾರದು. ಸಂಸದ ಪ್ರತಾಪ್ ಸಿಂಹ ರಾಜೀನಾಮೆ ಕೊಡಬೇಕು. ಇಂತಹವರ ವಿರುದ್ಧ ಇಡೀ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಮಾಡುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನು ಸಿಎಆರ್ ಮೈದಾನಕ್ಕೆ ಕರೆದೊಯ್ದು, ಕೆಲಕಾಲ ಇರಿಸಿಕೊಂಡು ನಂತರ ಬಿಡುಗಡೆ ಮಾಡಲಾಯಿತು. ಎಸಿಪಿ ಶಿವಶಂಕರ್ ನೇತೃತ್ವದಲ್ಲಿ ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ನೆಲೆ ಹಿನ್ನೆಲೆ ಗೋಪಾಲಕೃಷ್ಣ, ಹಿರಿಯ ರಂಗಕರ್ಮಿ ಕೃಷ್ಣಪ್ರಸಾದ್, ಚೋರನಹಳ್ಳಿ ಮಹದೇವಸ್ವಾಮಿ ಸೇರಿದಂತೆ ಹಲವು ಮಹಿಳೆಯರು, ಯುವಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಾಹನಗಳ ನೋಂದಣಿ ಶುಲ್ಕ ಹೆಚ್ಚಳ

ಬೆಲೆ ಏರಿಕೆಯಿಂದ ತತ್ತರಿಸಿದ ಜನರಿಗೆ ಇನ್ನು ಶಾಕ್



ಮೈಸೂರು,ಏ.7(ಜಿಎ)–ದೇಶಾದ್ಯಂತ ದಿನಸಿ ಪದಾರ್ಥ, ಪೆಟ್ರೋಲ್–ಡೀಸೆಲ್ ಹಾಗೂ ಅಡುಗೆ ಅನಿಲ ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದು, ಇದರ ನಡುವೆಯೇ ಹೊಸ ವಾಹನಗಳ ನೋಂದಣಿ ಮತ್ತು ಹಳೆ ವಾಹನಗಳ ಮರು ನೋಂದಣಿ ಮತ್ತು ಫಿಟ್‌ನೆಸ್ ಸರ್ಟಿಫಿಕೇಟ್ (ಎಫ್‌ಸಿ) ಶುಲ್ಕ ಕೂಡ ಹೆಚ್ಚಳವಾಗಿದ್ದು, ಏ.1ರಿಂದ ಜಾರಿಗೆ ಬಂದಿದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಈ ಸಂಬಂಧ ಅಧಿಸೂಚನೆ ಹೊರಡಿಸಿದ್ದು, ಅದರಂತೆ ಎಲ್ಲಾ ಬಗೆಯ ವಾಹನಗಳ ನೋಂದಣಿ ಮತ್ತು 15 ವರ್ಷ ಮೇಲ್ಪಟ್ಟ ಖಾಸಗಿ ಮತ್ತು ವಾಣಿಜ್ಯ ವಾಹನಗಳ ಸುರಕ್ಷತಾ ಪ್ರಮಾಣಪತ್ರ(ಎಫ್‌ಸಿ) ನವೀಕರಣ ಶುಲ್ಕವನ್ನು ಶೇ.10ರಷ್ಟು ಹೆಚ್ಚಿಸಲಾಗಿದ್ದು, ಇದು ವಾಹನ ಸವಾರರಿಗೆ ಹೊರೆಯಾಗಿದೆ.

ಹೊಸ ವಾಹನಗಳ ನೋಂದಣಿ ಶುಲ್ಕ: ಹೊಸ ವಾಹನಗಳ ನೋಂದಣಿ ಶುಲ್ಕ ಹೆಚ್ಚಳವಾಗಿದ್ದು, ಅದರಂತೆ ದ್ವಿಚಕ್ರ ವಾಹನ ನೋಂದಣಿ 300 ರೂ., ತ್ರಿಚಕ್ರ ವಾಹನ 600 ರೂ., ಲಘು ಮೋಟಾರ್ ವಾಹನಗಳಿಗೆ (ಕಾರು ಅಥವಾ ಜೀಪ್) 600 ರೂ., ಲಘು ಸರಕು ಸಾಗಣೆ, ಪ್ರಯಾಣಿಕರ ವಾಹನಗಳಿಗೆ (ಮ್ಯಾಕ್ಸಿ ಕ್ಯಾಬ್) 1000 ರೂ., ಭಾರೀ ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ನೋಂದಣಿಗೆ 1500 ರೂ. ಹಾಗೂ ಆಮದು ಮಾಡಿ ಕೊಂಡಿರುವ ವಾಹನಗಳಿಗೆ 5 ಸಾವಿರ ರೂ. ನಿಗದಿಪಡಿಸಲಾಗಿದೆ.


ನೋಂದಣಿ ನವೀಕರಣ ಪ್ರಮಾಣಪತ್ರ ವಾಹನಗಳಿಗೆ: ನೋಂದಣಿ ನವೀಕರಣಕ್ಕಾಗಿ ದ್ವಿಚಕ್ರ ವಾಹನ 1000 ರೂ., ತ್ರಿಚಕ್ರ ವಾಹನ 2500 ರೂ., ಲಘು ಮೋಟಾರ್ ವಾಹನಗಳಿಗೆ (ಕಾರು ಅಥವಾ ಜೀಪ್) 5000 ರೂ., ಆಮದು ಮಾಡಿಕೊಂಡಿರುವ ಕಾರಿಗೆ 10,000 ರೂ., ಮತ್ತು ಇತರೇ ವಾಹನಗಳಿಗೆ 6000 ರೂ. ಗಳನ್ನು ನಿಗದಿಪಡಿಸಲಾಗಿದೆ. ನಿಗದಿತ ಸಮಯದಲ್ಲಿ ವಾಹನ ನೋಂದಣಿ ನವೀಕರಣ ಪ್ರಮಾಣಪತ್ರ ಪಡೆಯಲು ದಾಖಲೆಗಳನ್ನು ಸಲ್ಲಿಸಲು ವಿಳಂಬ ಮಾಡಿದರೆ, ಪ್ರತಿ ತಿಂಗಳಿನಂತೆ ದ್ವಿಚಕ್ರ ವಾಹನಕ್ಕೆ 300 ರೂ., ಮತ್ತು ಲಘು ಮೋಟಾರ್ ವಾಹನಗಳಿಗೆ (ಕಾರು ಅಥವಾ ಜೀಪ್) 500 ರೂ., ದಂಡ ಶುಲ್ಕ ವಿಧಿಸಲಾಗುತ್ತದೆ.

15 ವರ್ಷದ ಹಳೆಯ ವಾಹನಗಳಿಗೆ(ಎಫ್‌ಸಿ): 15 ವರ್ಷ ಹಳೆಯ ವಾಹನಗಳ ಶುಲ್ಕ ಕೂಡ ಹೆಚ್ಚಳವಾಗಿದೆ. ದ್ವಿಚಕ್ರ ವಾಹನಕ್ಕೆ 400 ರೂ., ಸ್ವಯಂಚಾಲಿತ ವಾಹನಕ್ಕೆ 500 ರೂ., ತ್ರಿಚಕ್ರ ವಾಹನಕ್ಕೆ 800 ರೂ., ಸ್ವಯಂಚಾಲಿತ ವಾಹನಕ್ಕೆ 1000 ರೂ,. ನಿಗದಿ ಪಡಿಸಲಾಗಿದೆ. ಲಘು ಸರಕು ಸಾಗಣೆ, ಪ್ರಯಾಣಿಕರ ಮತ್ತು ಭಾರೀ ಸರಕು ಸಾಗಣೆ, ಪ್ರಯಾಣಿಕರ ವಾಹನಕ್ಕೆ 800 ರೂ., ಸ್ವಯಂಚಾಲಿತ ವಾಹನಕ್ಕೆ 1300 ರೂ,. ನಿಗದಿಪಡಿಸಲಾಗಿದೆ. ಭಾರೀ ಸರಕುಗಳ ವಾಹನ ಮತ್ತು ಭಾರೀ ಪ್ರಯಾಣಿಕ ವಾಹನಗಳಿಗೆ 1000 ರೂ., ಸ್ವಯಂಚಾಲಿತ ವಾಹನಕ್ಕೆ 1500 ರೂ,. ನಿಗದಿಪಡಿಸಲಾಗಿದೆ.

ಎಫ್‌ಸಿ ನವೀಕರಣ ಶುಲ್ಕ : ದ್ವಿಚಕ್ರ ವಾಹನಕ್ಕೆ 1000 ರೂ., ತ್ರಿಚಕ್ರ ವಾಹನಗಳಿಗೆ 3500 ರೂ., ಕಾರುಗಳಿಗೆ 7500 ರೂ., ಲಘು ಸರಕು ಸಾಗಣೆ, ಪ್ರಯಾಣಿಕರ ಮತ್ತು ಭಾರೀ ಸರಕು ಸಾಗಣೆ, ಪ್ರಯಾಣಿಕರ ವಾಹನಗಳಿಗೆ 10,000 ರೂ., ಮತ್ತು ಭಾರೀ ಸರಕುಗಳ ವಾಹನ ಮತ್ತು ಭಾರೀ ಪ್ರಯಾಣಿಕ ವಾಹನಗಳಿಗೆ 12,000 ರೂ., ನಿಗದಿಪಡಿಸಲಾಗಿದೆ. ವಾಹನಗಳ ಎಫ್‌ಸಿ ಅವಧಿ ಮೀರಿದರೂ ನವೀಕರಣ ಮಾಡಿಕೊಳ್ಳಲು ವಿಳಂಬ ಮಾಡಿದ್ದರೇ, ವಾಹನದ ಎಫ್‌ಸಿ ಅವಧಿ ಮುಕ್ತಾಯವಾದ ದಿನದಿಂದ ಪ್ರತಿದಿನ 50 ರೂ. ಗಳ ದಂಡ ವಿಧಿಸಲಾಗುವುದು ಎಂದು ತಿಳಿಸಲಾಗಿದೆ.

ದ್ವಿತೀಯ ಪಿಯುಸಿ ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ವೇಳಾಪಟ್ಟಿ ಮತ್ತೆ ಪರಿಷ್ಕರಣೆಗೊಂಡಿದೆ. ಇದೀಗ ಅಂತಿಮ ವೇಳಾಪಟ್ಟಿಯನ್ನು ಪಿಯುಸಿ ಬೋರ್ಡ್ ಪ್ರಕಟಿಸಿದೆ. ಈಗಾಗಲೇ ಪಿಯುಸಿ ಬೋರ್ಡ್ ತಾಂತ್ರಿಕ ಕಾರಣ ನೀಡಿ 3–4 ಬಾರಿ ವೇಳಾ ಪಟ್ಟಿಯನ್ನು ಪರಿಷ್ಕರಣೆ ಮಾಡಿದೆ. ಇದೀಗ ಪರಿಷ್ಕೃತ ವೇಳಾಪಟ್ಟಿ ಪ್ರಕಟಗೊಂಡಿದ್ದು, ಏಪ್ರಿಲ್ 22ರಿಂದ ಮೇ 18ರ ವರೆಗೆ ಪರೀಕ್ಷೆಗಳು ನಡೆಯಲಿದೆ.



ವೇಳಾಪಟ್ಟಿ ಹೀಗಿದೆ: ಏಪ್ರಿಲ್ 22– ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ ಏಪ್ರಿಲ್ 23– ಗಣಿತ ಶಾಸ್ತ್ರ ಶಿಕ್ಷಣ ಶಾಸ್ತ್ರ ಏಪ್ರಿಲ್ 25– ಅರ್ಥಶಾಸ್ತ್ರ ಏಪ್ರಿಲ್ 26– ರಸಾ ಯನಶಾಸ್ತ್ರ, ಹಿಂದುಸ್ಥಾನಿ ಸಂಗೀತ, ಮನಃಶಾಸ್ತ್ರ, ಮೂಲ ಗಣಿತ, ಏಪ್ರಿಲ್ 27– ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಏಪ್ರಿಲ್ 28– ಕನ್ನಡ, ಅರೇಬಿಕ್, ಮೇ 4– ಭೂಗೋಳಶಾಸ್ತ್ರ, ಜೀವಶಾಸ್ತ್ರ, ಮೇ 5– ಮಾಹಿತಿ ತಂತ್ರಜ್ಞಾನ, ರಿಟೈಲ್, ಆಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಅಂಡ್ ವೆಲ್ ನೆಸ್, ಮೇ 6– ಇಂಗ್ಲಿಷ್, ಮೇ 10– ಇತಿಹಾಸ, ಭೌತಶಾಸ್ತ್ರ, ಮೇ 12– ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಮೇ 14– ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ, ಮೇ 17– ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ, ಮೇ 18– ಹಿಂದಿ

ದ್ವಿತೀಯ ಪಿಯು ಪರೀಕ್ಷೆಗೂ ಸಮವಸ್ತ್ರ ಕಡ್ಡಾಯ

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಆಗಮಿಸುವ ಎಲ್ಲ ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿ ಪರೀಕ್ಷೆ ಬರೆಯಬೇಕು ಎಂದು ಪಿಯುಸಿ ಬೋರ್ಡ್ ಸಮವಸ್ತ್ರ ಕಡ್ಡಾಯ ಗೊಳಿಸಿದೆ. ಈ ಹಿಂದೆ ರಾಜ್ಯದಲ್ಲಿ ಹಿಜಾಬ್ ವಿವಾದ ಬಳಿಕ ಶಾಲಾ–ಕಾಲೇಜ್‌ಗಳಲ್ಲಿ ಸಮವಸ್ತ್ರ ಕಡ್ಡಾಯ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಆ ಬಳಿಕ ಇದೀಗ ದ್ವಿತೀಯ ಪಿಯುಸಿ ಎಕ್ಸಾಂಗೆ ಹಿಜಾಬ್ ನಿಷೇಧದ ಬಗ್ಗೆ ಪಿಯುಸಿ ಬೋರ್ಡ್ ಅಧಿಕೃತ ಆದೇಶ ಹೊರಡಿಸಿದೆ. ಸರ್ಕಾರಿ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ನಿಗಧಿ ಪಡಿಸಿದ ಸಮವಸ್ತ್ರ ಧರಿಸಬೇಕು. ಖಾಸಗಿ ಕಾಲೇಜುಗಳು ಕಾಲೇಜ್ ಆಡಳಿತ ಮಂಡಳಿ ನಿರ್ಧರಿಸಿದ ಸಮವಸ್ತ್ರ ಧರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಒಂದನೇ ಪುಟದಿಂದ

ಉತ್ತಮ ಸ್ಥಾನಮಾನ ಕಲ್ಪಿಸುತ್ತದೆ...


ಇದರಿಂದ ಪಕ್ಷಕ್ಕೆ ಧಕ್ಕೆ ಆಗುತ್ತದೆಯೇ ಹೊರತು ನಿಮಗೆ ರಾಜಕೀಯವಾಗಿ ಲಾಭವಾಗುವುದಿಲ್ಲ. ಸಿದ್ದರಾಮಯ್ಯ ಕಾಂಗ್ರೆಸ್ ಓಟ್ ಬ್ಯಾಂಕ್ ಆಗಿದ್ದಾರೆ. ಅವರ ವ್ಯಕ್ತಿತ್ವ ಮತ್ತು ಓಟ್ ಬ್ಯಾಂಕ್‌ಗೆ ಸಾಮ್ಯವಿದೆ. ಸಿದ್ದರಾಮಯ್ಯ ಅವರ ಆಡಳಿತಾತ್ಮಕ ಅನುಭವ ಹಾಗೂ ಅವರ ವರ್ಚಸ್ಸನ್ನು ನಾವು ಕಡೆಗಣಿಸಲು ಸಾಧ್ಯವಿಲ್ಲ. ಅವರು ನಮ್ಮ ಪಕ್ಷಕ್ಕೆ ಒಂದು ಶಕ್ತಿ ಇದ್ದಂತೆ. ಸಿದ್ದರಾಮಯ್ಯ ಅವರನ್ನು ಕಡೆಗಾಣಿಸಿ ಚುನಾವಣೆ ಎದುರಿಸಿದರೆ, ಯಾವುದೇ ಲಾಭವಾಗುವುದಿಲ್ಲ. ಸಿದ್ದರಾಮಯ್ಯ ವಿರುದ್ಧ ಪೈಪೋಟಿಗೆ ಇಳಿಯಬೇಡಿ. ಅವರನ್ನು ಜೊತೆಯಲ್ಲಿ ಇರಿಸಿಕೊಂಡು ಪಕ್ಷ ಸಂಘಟಿಸಿ, ಅಧಿಕಾರಕ್ಕೆ ಬನ್ನಿ. ಕಳೆದ ಎರಡು ದಿನಗಳ ಪ್ರವಾಸದ ಸಂದರ್ಭದಲ್ಲಿ ನಾನು ಎಲ್ಲವನ್ನು ಗಮನಿಸಿದ್ದೇನೆ. ನಿಮಗೆ ಒಳ್ಳೆಯ ಭವಿಷ್ಯವಿದೆ. ಮುಂದಿನ ದಿನಗಳಲ್ಲಿ ನಿಮಗೂ ಪಕ್ಷ ಉತ್ತಮ ಸ್ಥಾನಮಾನ ಕಲ್ಪಿಸುತ್ತದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ನಿಮ್ಮೊಬ್ಬರಿಂದಲೇ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯವಿಲ್ಲ. ಸಿಎಲ್‌ಪಿ ನಾಯಕರನ್ನು ಜೊತೆಯಲ್ಲಿ ಇಟ್ಟುಕೊಂಡು ಹೋರಾಟ ಮಾಡಿದರೆ ಅಧಿಕಾರಕ್ಕೆ ಬಂದೇ ಬರುತ್ತೇವೆ. ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರನ್ನು ಅಲಕ್ಷ್ಯ ಮಾಡಲು ಸಾಧ್ಯವಿಲ್ಲ. ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕಾದ ಪರಿಸ್ಥಿತಿ ಎದುರಾಗುತ್ತದೆ. ನೀವು ಇದನ್ನು ಗಮನದಲ್ಲಿಟ್ಟುಕೊಂಡು ಹೋರಾಟ ನಡೆಸಿ ಎಂದು ಕಿವಿಮಾತು ಹೇಳಿದ್ದಾರೆ.

ನಿಮ್ಮಲ್ಲಿನ ಸಮನ್ವಯದ ಕೊರತೆ ಮತ್ತು ಪೈಪೋಟಿಯಿಂದ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಗೆ ಅನುಮತಿ ನೀಡಲು ಸಾಧ್ಯವಾಗಲಿಲ್ಲ ಎಂದು ಸ್ಪಷ್ಟವಾಗಿ ನುಡಿದಿದ್ದಾರೆ.

ನೀರಾವರಿ ಯೋಜನೆಗೆ ಚಾಲನೆ ನೀಡ್ತೇನೆ...!

ಅವರು, ಇಂತಹ ಹೇಳಿಕೆ ನೀಡಿರುವುದು ಪಕ್ಷದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ತಮ್ಮ ಸ್ವಕ್ಷೇತ್ರ ಬಾದಾಮಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡ ಸಿದ್ದರಾಮಯ್ಯ, ನೀರಾವರಿ ಯೋಜನೆಯೊಂದರ ಅನುಷ್ಠಾನವಾಗದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ ಈ ಮಾತುಗಳನ್ನಾಡಿದ್ದಾರೆ. ಕ್ಷೇತ್ರದ ಸಿಂಧೂರು ಕೆರೆಗೆ ನೀರು ಹರಿಸುವುದು ಮತ್ತು ಬ್ಯಾರೇಜ್ ನಿರ್ಮಿಸುವ ಕೆಲಸ ಹಲವು ದಿನಗಳಿಂದ ನೆನೆಗುದಿಗೆ ಬಿದ್ದಿದ್ದು ಇದನ್ನು ಈಡೇರಿಸುವಲ್ಲಿ ಬೃಹತ್ ನೀರಾವರಿ ಸಚಿವ ಗೋವಿಂದ ಕಾರಜೋಳ್ ವಿಫಲರಾಗಿದ್ದಾರೆ. ಅವರಿಗೆ ಎಷ್ಟೋ ಬಾರಿ ಯೋಜನೆ ಬಗ್ಗೆ ಮಾಹಿತಿ ನೀಡಿದ್ದರೂ, ಫಲಪ್ರದವಾಗಿಲ್ಲ. ಅವರು ಮಾಡುವುದಾದರೆ ಮಾಡಲಿ,ಇಲ್ಲದಿದ್ದರೆ ಬಿಡಲಿ, ಇನ್ನೊಂದೇ ವರ್ಷ. ವಿಧಾನಸಭೆ ಚುನಾವಣೆ ನಡೆದು ನಾನೇ ಅಧಿಕಾರಕ್ಕೆ ಬಂದಿರುತ್ತೇನೆ. ಯಾವ ಅನುಮಾನವೂ ಬೇಡ. ಈ ಯೋಜನೆಗಳನ್ನು ನಾನೇ ಪೂರೈಸಿಕೊಡುತ್ತೇನೆ ಎಂದು ಈ ಸಭೆಯಲ್ಲಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.04.2022 ಶುಕ್ರವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಸಪ್ತಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ :** ಕ್ಷಯರೋಗದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಕ್ರಿಕೆಟ್ ಟೂರ್ನಮೆಂಟ್, ಉದ್ಘಾಟನೆ : ಚಲನಚಿತ್ರ ನಟ ಶ್ರೀನಗರ ಕಿಟ್ಟಿ, ಅಧ್ಯಕ್ಷತೆ : ವಿಭಾಗೀಯ ಸಹ ನಿರ್ದೇಶಕ ಡಾ. ಎಂ.ಆರ್. ಉದಯ್ ಕುಮಾರ್, ಸ್ಥಳ: ಜೆ.ಕೆ. ಮೈದಾನ, ರೈಲ್ವೆ ಸ್ಟೇಷನ್ ಮುಂಭಾಗ, ಬೆಳಗ್ಗೆ 9ರಿಂದ.

■ **ಬಿಜೆಪಿ ಮೈಸೂರು ನಗರ (ಜಿಲ್ಲಾ) ಹಿಂದುಳಿದ ವರ್ಗಗಳ ಮೋರ್ಚಾ:** ಹಿಂದುಳಿದ ವರ್ಗಗಳ ಮೋರ್ಚಾ ಸಭೆ, ಉಪಸ್ಥಿತರು: ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಸ್ಥಳ: ಬಿಜೆಪಿ ಕಚೇರಿ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಔಷಧ ವಿಜ್ಞಾನಗಳು ಕುರಿತು ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ: ಬೆಂಗಳೂರಿನ ಸ್ಟೀರ್‌ಲೈಫ್‌ನ ಪ್ರಧಾನ ವ್ಯವಸ್ಥಾಪಕ ಡಾ.ವಿಜಯ್ ಕುಲಕರ್ಣಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ :** ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಉಪಸ್ಥಿತರು: ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಅಧ್ಯಕ್ಷತೆ : ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು : ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ವಸಂತನಗರ, ಬೆಳಗ್ಗೆ 11ಕ್ಕೆ.

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಸಿರಿದೇವಿ ಸಾಂಸ್ಕೃತಿಕ ಸಂಘ ಇವರಿಂದ ಭಜನೆ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಸಂಜೆ 5.15ಕ್ಕೆ ವಿದ್ವಾನ್ ಜಿ. ರಾಘವ ಅವರಿಂದ ಸ್ಯಾಕ್ಸೋಫೋನ್, ಯೋಗಶ್ರೀ–ಪಿಟೀಲು, ಎಂ.ವಿ. ಅಜಯ್ ಕುಮಾರ್–ತವಿಲ್, ಸಂಜೆ 6.15ಕ್ಕೆ ವಿದ್ವಾನ್ ಟಿ.ವಿ. ರಾಮಪ್ರಸಾದ್ ಅವರಿಂದ ಗಾಯನ, ವೈಭವರಮಣಿ–ಪಿಟೀಲು, ಸಿ. ಚೆಲುವರಾಜು–ಮೃದಂಗ, ಸಿ.ಎ. ರಘುನಂದನ್‌ರಾವ್–ಘಟಂ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಮೈಸೂರು.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ದಶಶ್ಯಾಮಲಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ:** ಮೊದಲನೇ ಹಂತದ ವಿಶ್ವವಿದ್ಯಾನಿಲಯ ಬಡಾವಣೆಯ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಿದ್ದರಾಮಯ್ಯ ವೃತ್ತ ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಹೈ–ಮಾಸ್ಟ್ ದೀಪದ ಉದ್ಘಾಟನೆ: ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಬಸ್ ಶೆಲ್ಟರ್ ಉದ್ಘಾಟನೆ: ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಅಮೃತ ಮಹೋತ್ಸವ ವೇದಿಕೆ ಉದ್ಘಾಟನೆ: ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೃಷ್ಣಮಲ್ಲೇಗೌಡ, ಸ್ಥಳ: ವಿಶ್ವವಿದ್ಯಾನಿಲಯ ಬಡಾವಣೆ (ಲಿಂಗಾಂಬುದಿಪಾಳ್ಯ), ಸಂಜೆ 5ಕ್ಕೆ.

■ **ಗಾನಭಾರತೀ:** ಪ್ರೊ.ಕೆ. ಶಂಕರ್ ಸಂಸ್ಮರಣಾ ಸಂಗೀತ ಕಾರ್ಯಕ್ರಮ, ವಿದ್ವಾನ್ ಎಸ್.ರಮಣಿ ಶಂಕರ್ ಅವರಿಂದ ಹಾಡುಗಾರಿಕೆ, ವಿದುಷಿ ಅದಿತಿ ಕೃಷ್ಣಪ್ರಸಾದ್–ಪಿಟೀಲು, ವಿದ್ವಾನ್ ರಾಧೇಶ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ'–ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಂ.ಎ.ಶೋಭಾ ಮತ್ತು ಕೆ.ಪಿ.ರೇವತಿ, ವ್ಯಾಖ್ಯಾನ– ಡಾ.ಲತಾ ಮೈಸೂರು, 7.15 ದುಡಿಮೆಯ ಹಿರಿಮೆ–ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ಭಾಗವಹಿಸುವ ತಜ್ಞರು–ಡಾ.ಚೈತನ್ಯ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಟಿ.ಎಂ.ತ್ಯಾಗರಾಜನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 2.50 ಸಿರಿಗನ್ನಡಂಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 3.00 ಬಾಂಬೆ ಸಹೋದರಿಯರು–ಹಾಡುಗಾರಿಕೆ, 4.00 ಮಹಿಳಾರಂಗ–ಜೀವನ್ಮುಖಿ, ಪ್ರಸ್ತುತಿ–ಎಂ.ಎಸ್.ಭಾರತಿ, 6.50 ಕೃಷಿರಂಗ–ಕಿಸಾನ್‌ವಾಣಿ–ಹವಾಮಾನ ಆಧಾರಿತ ಕೃಷಿ ತಂತ್ರಜ್ಞಾನಗಳು ಕುರಿತು ಡಾ.ಕೆ.ವಿ.ಕೇಶವಯ್ಯ ಅವರೊಂದಿಗೆ ಸಂದರ್ಶನ, 9.00 ಕನ್ನಡ ಭಾರತಿ, 10.30 ಸವಿನೆನಪು

ರಂಗಾಯಣದ ಪರ್ವ 'ರಂಗ ಪಯಣ' ಆರಂಭ

● ಶುಭ ಹಾರೈಕೆಯೊಂದಿಗೆ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಚಾಲನೆ ● ಮೂರು ಹಂತದಲ್ಲಿ ಹೊರ ಜಿಲ್ಲೆ, ರಾಜ್ಯಗಳಲ್ಲಿ 'ಪರ್ವ' ಪ್ರದರ್ಶನ

ಮೈಸೂರು, ಏ.7(ಆರ್‌ಕೆಬಿ)– ಮೈಸೂರು ರಂಗಾಯಣದ 'ಪರ್ವ' ರಂಗ ಪಯಣಕ್ಕೆ ಖ್ಯಾತ ಹಿರಿಯ ಕಾದಂಬರಿಕಾರ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಡಾ.ಎಸ್.ಎಲ್.ಭೈರಪ್ಪ ಗುರುವಾರ ರಂಗಾಯಣ ಆವರಣದಲ್ಲಿ ಚಾಲನೆ ನೀಡಿದರು. ಕಲಾವಿದರು ಮತ್ತು ತಂತ್ರಜ್ಞರನ್ನು ಒಳಗೊಂಡ 35 ಜನರ ಕಿರಿಯ ರೆಪರ್ಟರಿ ತಂಡ ಒಂದು ಬಸ್ ಹಾಗೂ ಎರಡು ಟ್ರಕ್‌ಗಳಲ್ಲಿ ನಾಟಕದ ಪರಿಕರಗಳೊಂದಿಗೆ ಪ್ರಯಾಣ ಬೆಳೆಸಿತು.

ರಂಗ ಪಯಣದ ಮೊದಲ ಹಂತದಲ್ಲಿ ಏ.9ರಂದು ದಾವಣಗೆರೆ, 12 ಮತ್ತು 13ರಂದು ಧಾರವಾಡ, 16 ಮತ್ತು 17ರಂದು ಬೆಳಗಾವಿ, 20ರಂದು ವಿಜಯಪುರ ಹಾಗೂ ಏ.22ರಂದು ಕಲಬುರ್ಗಿಯಲ್ಲಿ 'ಪರ್ವ' ನಾಟಕ ಪ್ರದರ್ಶನ ನಡೆಯಲಿದೆ.

ರಂಗ ಪಯಣಕ್ಕೆ ಹಸಿರು ಬಾವುಟ ಬೀಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಡಾ.ಭೈರಪ್ಪ, ರಂಗಾಯಣ ತಂಡದ ಎಲ್ಲಾ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಹಾರೈಸಿದರು. ಮೈಸೂರು ಮತ್ತು ಬೆಂಗಳೂರಿನ ರಂಗ ಪ್ರೇಮಿಗಳು 'ಪರ್ವ' ನಾಟಕವನ್ನು ನೋಡಿ ಪ್ರಶಂಸಿಸಿದ್ದಾರೆ. ರಂಗಾಯಣವು ಈಗ ನಾಟಕವನ್ನು ರಾಜ್ಯದ ಎಲ್ಲಾ ಭಾಗಗಳಿಗೆ ಕೊಂಡೊಯ್ಯುತ್ತಿದೆ ಇದು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, 2020ರಲ್ಲಿ ಪರ್ವದ ಯೋಜನೆ ರೂಪಿಸಲಾಯಿತು. ಸರ್ಕಾರದೊಂದಿಗೆ




ಮಾತುಕತೆ ನಡೆಸಿದ ಬಳಿಕ ಪರ್ವ ನಾಟಕದ ಸಿದ್ಧತೆಗೆ ಸರ್ಕಾರ 50 ಲಕ್ಷ ರೂ. ಬಿಡುಗಡೆ ಮಾಡಿತ್ತು. ನಂತರ ರಂಗ ಪಯಣಕ್ಕೂ ಸರ್ಕಾರ ಹಣ ಬಿಡುಗಡೆ ಮಾಡಿದೆ. ನಾವೀಗ 3 ಹಂತದಲ್ಲಿ ಈ ಯೋಜನೆ ಹಮ್ಮಿಕೊಂಡಿದ್ದೇವೆ. ಮೊದಲ ಹಂತದಲ್ಲಿ ದಾವಣಗೆರೆ, ಧಾರವಾಡ, ಬೆಳಗಾವಿ, ವಿಜಯಪುರ, ಕಲಬುರ್ಗಿ, 2ನೇ ಹಂತದಲ್ಲಿ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಂಗಳೂರು, ಉಡುಪಿ, ಮೂಡಬಿದಿರೆ, ಬೆಂಗಳೂರು, 3ನೇ ಹಂತದಲ್ಲಿ ಹೊರ ರಾಜ್ಯಗಳಲ್ಲಿ ಅಂದರೆ ನಾಗಪುರ್, ಛತ್ತೀಸ್‌ಘಡ್, ಚಂಡೀಗಢ, ದೆಹಲಿ ಮತ್ತು ಭೂಪಾಲ್‌ನಲ್ಲಿ ಪ್ರದರ್ಶನ ನೀಡಲಿದೆ. ಅನೇಕ ಸವಾಲುಗಳ ಮಧ್ಯೆ ಈ ಪರ್ವ ಕಟ್ಟಿದ್ದೇವೆ. ಪರ್ವದ ಈ ತಂಡ ಎಲ್ಲಾ ಕಿರಿಯ ರೆಪರ್ಟರಿ ಕಲಾವಿದರನ್ನು ಒಳಗೊಂಡಿದೆ ಎಂದರು.

ರಂಗ ಪಯಣದ ವೇಳೆ ಎಲ್ಲಾ ಕಡೆ ನಾಟಕ ಸಿದ್ಧತೆಗಾಗಿ ಒಂದು ದಿನ ಮೀಸಲಿಟ್ಟಿದ್ದೇವೆ. ನಾಟಕ ಪ್ರದರ್ಶನ ಬೇರೆ ದಿನ ನಡೆಯಲಿದೆ. ಹೋದ ತಕ್ಷಣ ನಾಟಕ ಮಾಡುವುದಿಲ್ಲ. ಕಲಾವಿದರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡೇ ನಾಟಕ ಪ್ರದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.

'ಪರ್ವ' ಪ್ರದರ್ಶನ ಎಲ್ಲೆಲ್ಲಿ?

- ಏ.9ರಂದು ಸಂಜೆ 4ಕ್ಕೆ ದಾವಣಗೆರೆಯ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರ.
- ಏ.11 ಮತ್ತು 12ರಂದು ಬೆಳಗ್ಗೆ 10.30ಕ್ಕೆ ಧಾರವಾಡದ ಸೃಜನ ರಂಗಮಂದಿರ.
- ಏ.16 ಮತ್ತು 17ರಂದು ಮಧ್ಯಾಹ್ನ 3.30ಕ್ಕೆ ಬೆಳಗಾವಿ ಟಿಳಕಚೌಕದ ಲೋಕಮಾನ್ಯ ರಂಗಮಂದಿರ.
- ಏ.20ರಂದು ಮಧ್ಯಾಹ್ನ 3.30ಕ್ಕೆ ವಿಜಯಪುರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ.
- ಏ.23ರಂದು ಸಂಜೆ 4ಕ್ಕೆ ಕಲಬುರ್ಗಿಯ ರಂಗಾಯಣದ ಡಾ.ಎಸ್.ಎಂ.ಪಂಡಿತ್ ರಂಗಮಂದಿರ.



ಎಸ್.ಎಲ್.ಭೈರಪ್ಪನವರ ಕಾದಂಬರಿ ವಿಶ್ವದ ಅನೇಕ ಭಾಷೆಗಳಿಗೆ ಅನುವಾದ ಆಗುತ್ತಿದೆ. ಈಗಾಗಲೇ ಮ್ಯಾಂಡ್ರಿನ್ ಮತ್ತು ರಷ್ಯನ್ ಭಾಷೆಯಲ್ಲಿ ಅನುವಾದವಾಗಿದೆ. ಹಿರಿಯ ಕಾದಂಬರಿಕಾರ ಎಸ್.ಎಲ್.ಭೈರಪ್ಪನವರು ರಂಗ ಪಯಣಕ್ಕೆ ಚಾಲನೆ ನೀಡಿ ಶುಭ ಕೋರಿದ್ದಾರೆ. ಭಾರತೀಯ ರಂಗಭೂಮಿಯಲ್ಲಿ 'ಪರ್ವ' ಒಂದು ಮೈಲಿಗಲ್ಲಾಗಲಿದೆ ಎಂಬ ವಿಶ್ವಾಸವಿದೆ.

- ಅಡ್ಡಂಡ ಸಿ.ಕಾರ್ಯಪ್ಪ,
ನಿರ್ದೇಶಕ, ಮೈಸೂರು ರಂಗಾಯಣ



'ರಂಗ ಪಯಣ'ಕ್ಕೆ ಖುಷಿ ಹಾಗೂ ಉತ್ಸಾಹದಿಂದ ಹೊರಟಿದ್ದೇವೆ. ಪರ್ವವನ್ನು ರಂಗದ ಮೇಲೆ ತರಲು ಸತತ ಒಂದೂವರೆ ವರ್ಷದಿಂದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ನೇತೃತ್ವದಲ್ಲಿ ಎಲ್ಲರೂ ತುಂಬಾ ಶ್ರಮಿಸಿದ್ದಾರೆ.

- ಚಾಂದಿನಿ,
'ಪರ್ವ'ದ ಗಾಂಧಾರಿ ಪಾತ್ರಧಾರಿ



ಸಾಹಿತ್ಯ ಕ್ಷೇತ್ರದ ಮಹಾ ಶ್ರೇಷ್ಠ ಕಾದಂಬರಿ ಎನಿಸಿರುವ 'ಪರ್ವ' ಪಯಣ ಆರಂಭಿಸಿದ್ದೇವೆ. ಈ ಥರದ ಕಾದಂಬರಿ ಇಟ್ಟುಕೊಂಡು ನಾಟಕ ಮಾಡುತ್ತಿರುವಾಗ ಆಸಕ್ತಿ ಜಾಸ್ತಿಯಾಯಿತು. ನಾಟಕ ಇಲ್ಲಿ ಯಶಸ್ವಿಯಾಗಿದೆ. ರಂಗ ಪಯಣದಲ್ಲಿ ಸಹಜವಾಗಿ ಭಯ, ಆತಂಕ ಇದ್ದರೂ ಎಲ್ಲೆಡೆ ಯಶಸ್ವಿಯಾಗಿ ನಾಟಕ ಪ್ರದರ್ಶನ ನೀಡಿ ಯಶಸ್ವಿಯಾಗಿ ಹಿಂದಿರುಗುತ್ತೇವೆ.

- ನಂದಕುಮಾರ್,
'ಪರ್ವ'ದ ದುರ್ಯೋಧನ ಪಾತ್ರದಾರಿ




ರಂಗಾಯಣದ ಬೃಹತ್ ರಂಗಪ್ರಯೋಗ 'ಪರ್ವ'. ಮೈಸೂರು, ಬೆಂಗಳೂರಿನಲ್ಲಿ ಜನಮೆಚ್ಚುಗೆ ಪಡೆದ ಬಳಿಕ ಈಗ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಮೂರು ಹಂತದಲ್ಲಿ ಪ್ರದರ್ಶನಕ್ಕೆ ಸಿದ್ಧತೆ ಮಾಡಿ ಕೊಂಡು ಹೊರಟಿದ್ದಾರೆ. ಯಶಸ್ವಿಯಾಗುತ್ತಾರೆಂಬ ವಿಶ್ವಾಸವಿದೆ.

-ನಿರ್ಮಲಾ ಮಠಪತಿ,
ಉಪನಿರ್ದೇಶಕಿ, ರಂಗಾಯಣ

ಮುಸ್ಲಿಮರ ಓಟಿಗಾಗಿ ಕುಮಾರಸ್ವಾಮಿ, ಸಿದ್ದರಾಮಯ್ಯ ಪರಸ್ಪರ ಪೈಪೋಟಿ

ಸಚಿವ ಡಾ.ಅಶ್ವಥ್ ನಾರಾಯಣ್ ತಿರುಗೇಟು

ಮೈಸೂರು, ಏ.7(ಆರ್‌ಕೆಬಿ)– ಹಿಜಾಬ್, ಹಲಾಲ್, ಅಜಾನ್ ನಿಷೇಧ ವಿಚಾರದಲ್ಲಿ ಮೌನ ವಹಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೌನ ಮುರಿಯಬೇಕು ಎಂಬ ಹೇಳಿಕೆ ನೀಡಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವಥ್‌ನಾರಾಯಣ್ ಖಡಕ್ಕಾಗಿ ತಿರುಗೇಟು ನೀಡಿದ್ದಾರೆ.



ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದಲ್ಲಿ ಗುರುವಾರ ಬೃಹತ್ ಉದ್ಯೋಗ ಮೇಳದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಮುಖ್ಯಮಂತ್ರಿಗಳು ಮೌನಿಯಾಗಿಲ್ಲ. ಉತ್ತಮ ವಾಗ್ಮಿಗಳು, ಅವರು ಸರಿಯಾಗಿ ಕೆಲಸ ಮಾಡ್ತಿದ್ದಾರೆ. ಯಾವ ವಿಚಾರಕ್ಕೆ ಏನು ಹೇಳಬೇಕೋ ಅದನ್ನು ಹೇಳುತ್ತಾರೆ ಎಂದು ತಿರುಗೇಟು ನೀಡಿದರು. ನಮಗೆ ಮುಸ್ಲಿಮರ ಓಟು ಹೆಚ್ಚು ಸಿಗಬೇಕು ಎಂದು ಸಿದ್ದರಾಮಯ್ಯ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಮುಸ್ಲಿಮರ ಓಲೈಕೆ ಮಾಡಲು ಪರಸ್ಪರ ಪೈಪೋಟಿಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು.

ಬೆಲೆ ಏರಿಕೆ ವಿಚಾರವನ್ನು ಬೇರೆ ಕಡೆಗೆ ತಿರುಗಿಸಲು ಭಾವನಾತ್ಮಕ ವಿಚಾರ ಹರಿಯಬಿಟ್ಟಿದ್ದಾರೆಂಬ ಆರೋಪ ಇದೆಯಲ್ಲಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಗೆ ಇನ್ನೂ ಅಂತಹ ಸ್ಥಿತಿ ಬಂದಿಲ್ಲ. ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮ ತೈಲ ಬೆಲೆ ಏರಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ವಿಶ್ವದಲ್ಲೇ ಗಮನ ಸೆಳೆಯುವ ಕೆಲಸ ಮಾಡುತ್ತಿದ್ದಾರೆ. ಬೆಲೆ ಏರಿಕೆಯನ್ನು ಹಂತ ಹಂತವಾಗಿ ಕಡಿಮೆ ಮಾಡುತ್ತೇವೆ ಎಂದು ತಿಳಿಸಿದರು.

ಸಮಾಜದ ಸ್ಥಿತಿಗತಿ ವೈದ್ಯರ ಸೇವೆಯನ್ನು ಅವಲಂಬಿಸಿದೆ

ಎಂಎಲ್‌ಸಿ ಸಿ.ಎನ್. ಮಂಜೇಗೌಡ ಅಭಿಮತ



ಮೈಸೂರು, ಏ.7– ಶೈಕ್ಷಣಿಕ, ಆರ್ಥಿಕ ವ್ಯವಸ್ಥೆ ಸೇರಿದಂತೆ ಸಮಾಜದ ಸ್ಥಿತಿಗತಿಗಳು ವೈದ್ಯರ ಸೇವೆ ಮೇಲೆ ಅವಲಂಬಿತವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು. ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ವಿಶ್ವ ವೈದ್ಯರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೋಗಿಗಳ ಸೇವೆಯಲ್ಲಿ ಮೈಮರೆಯುವ ವೈದ್ಯರು ತಮ್ಮ ಆರೋಗ್ಯದ ಬಗ್ಗೆಯೂ ಸ್ವಯಂ ಕಾಳಜಿ ವಹಿಸಿ ಜಾಗರೂಕತೆಯಿಂದ ಇರಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸುಯೋಗ ಆಸ್ಪತ್ರೆಯ ಅಧ್ಯಕ್ಷ ಡಾ. ಎಸ್. ಪಿ.ಯೋಗಣ್ಣ, ಇಡೀ ಗ್ರಹಗಳಲ್ಲಿ ಭೂಗ್ರಹ ಒಂದೇ ಮಾನವರಿಗೆ ವಾಸಿಸಲು ಯೋಗ್ಯವಾದ ಜೀವಚೈತನ್ಯವುಳ್ಳ ಗ್ರಹವಾಗಿದ್ದು, ಇದರ ರಕ್ಷಣೆ ಪ್ರತಿಯೊಬ್ಬರ ಹೊಣೆ ಎಂದರು. ಅತಿಯಾದ ತಾಪಮಾನದಿಂದ ಭೂ ಗ್ರಹಕ್ಕೆ ಅಪಾಯ ಬಂದಿರುವುದರಿಂದ ಹಸಿರೀಕರಣದಿಂದ ಭೂಮಿಯನ್ನು ರಕ್ಷಿಸಬೇಕು. ಈ ವರ್ಷದ ವಿಶ್ವ ಆರೋಗ್ಯ ಸಂಸ್ಥೆಯ ಘೋಷಣಾ ವಾಕ್ಯ 'ನಮ್ಮ ಗ್ರಹ ನಮ್ಮ ಆರೋಗ್ಯ' ಎಂಬುದನ್ನು ತಿಳಿಸಿ ಪ್ರತಿಯೊಬ್ಬರೂ ಪರಿಸರ ರಕ್ಷಣೆಗೆ ಕಟಿಬದ್ಧರಾಗ ಬೇಕೆಂದು ಪ್ರಮಾಣ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ಸುಯೋಗ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಸುಯೋಗ್ ಯೋಗಣ್ಣ, ವೈದ್ಯಕೀಯ ಅಧೀಕ್ಷಕ ಡಾ.ಪೊನ್ನಪ್ಪ ಹಾಗೂ ವಕೀಲ ತಮ್ಮಣ್ಣಗೌಡ ಉಪಸ್ಥಿತರಿದ್ದರು.


ಸಿಎಫ್‌ಟಿಆರ್‌ಐಗೆ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಭೇಟಿ; ಪರಿಶೀಲನೆ

ಆಹಾರ ಪದಾರ್ಥಗಳ ಸಾಮಾನ್ಯ ಸಂಸ್ಕರಣಾ ಘಟಕ ಸ್ಥಾಪನೆಗೆ ಚಿಂತನೆ

ಮೈಸೂರು, ಏ.7(ಎಂಕೆ)– ರೈತರ ಅನುಕೂಲಕ್ಕಾಗಿ ಜಿಲ್ಲಾ ವ್ಯಾಪ್ತಿಯಲ್ಲಿ 'ಆಹಾರ ಪದಾರ್ಥಗಳ ಸಾಮಾನ್ಯ ಸಂಸ್ಕರಣಾ ಘಟಕ' ಸ್ಥಾಪನೆ ಕುರಿತು ಸರ್ಕಾರ ಆಲೋಚಿಸುವುದರ ಜೊತೆಗೆ ಸಿಎಫ್‌ಟಿಆರ್‌ಐನ ಫಿನಿಶಿಂಗ್ ಸ್ಕೂಲ್ ಸ್ಥಾಪನೆಗೆ ಸಂಪೂರ್ಣ ನೆರವು ನೀಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಮೈಸೂರಿನ ಸಿಎಫ್‌ಟಿಆರ್‌ಐ(ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ)ಗೆ ಗುರುವಾರ ಭೇಟಿ ನೀಡಿದ ಸಚಿವರು, ಆಹಾರ ತಂತ್ರಜ್ಞಾನ ಮತ್ತು ಸಂಶೋಧನೆಗೆ ಸಂಬಂಧಿಸಿದ 40ಕ್ಕೂ ಹೆಚ್ಚು ತಂತ್ರಜ್ಞಾನ ಮಾದರಿಗಳು ಮತ್ತು ನೂತನ ಯಂತ್ರೋಪಕರಣಗಳು, ಆಹಾರ ವಿಭಾಗ, ಇಂಜಿನಿಯರಿಂಗ್ ವಿಭಾಗ ಮತ್ತು ಪ್ರಯೋಗಾಲಯ ವೀಕ್ಷಣೆ ಮಾಡಿದರು.

ಇದಕ್ಕೂ ಮುನ್ನ ವಿಜ್ಞಾನಿಗಳೊಂದಿಗೆ ಸಭೆ ನಡೆಸಿ ಸಿಎಫ್‌ಟಿಆರ್‌ಐನ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದು ಮಾತನಾಡಿದ ಅವರು, ಆಹಾರ ಪದ್ಧತಿ ಈಗ ಸಂಪೂರ್ಣವಾಗಿ ಬದಲಾಗಿದ್ದು, ಗುಣಮಟ್ಟದ ಆಹಾರ ಪೂರೈಕೆ ಮಾಡುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ರೈತರು ಬೆಳೆಯುವ ಬೆಳೆಗಳ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ತಂತ್ರಜ್ಞಾನ



ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ ಸಿಎಫ್‌ಟಿಆರ್‌ಐ ತನ್ನ ಕಾರ್ಯಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವಸಹಾಯ ಸಂಘಗಳ ಸದಸ್ಯರು ತಯಾರಿಸುವ ಉತ್ಪನ್ನಗಳಿಗೆ ಆಕರ್ಷಕ ಪ್ಯಾಕಿಂಗ್ ಮತ್ತು ಒಳ್ಳೆಯ ಮಾರುಕಟ್ಟೆ ಸೌಲಭ್ಯ ಎರಡೂ ಬೇಕು. ಇದಕ್ಕೆ ಪೂರಕವಾಗಿ ಸಿ.ಎಫ್.ಟಿ.ಆರ್.ಐ ಕೆಲಸ ಮಾಡಬೇಕು. ಇದರಿಂದ ಸ್ವಸಹಾಯ ಸಂಘಗಳ ಆರ್ಥಿಕ ಚಟುವಟಿಕೆಗಳು ಗರಿಷ್ಠ ಮಟ್ಟದಲ್ಲಿ ನಡೆಯುವಂತೆ ಮಾಡಬಹುದು ಎಂದು ಅವರು ಹೇಳಿದರು.

ಸಾಮಾನ್ಯ ಸಂಸ್ಕರಣಾ ಘಟಕ: ಸಿಎಫ್‌ಟಿಆರ್‌ಐನ ಮಾಂಸ ಮತ್ತು ಮೀನು ತಂತ್ರಜ್ಞಾನ ವಿಭಾಗದ ವಿಜ್ಞಾನಿ ಹೆಚ್.ಎಸ್.ಸತೀಶ್ ಮಾತನಾಡಿ, ರೈತರು ತಾವು ಬೆಳೆದ ಆಹಾರ ಪದಾರ್ಥಗಳ ಗುಣಮಟ್ಟವನ್ನು ತಾವೇ ಪರೀಕ್ಷೆ ಮಾಡಲು ಅನುಕೂಲವಾಗುವಂತೆ ಆಯಾ ಜಿಲ್ಲೆ ವ್ಯಾಪ್ತಿಯಲ್ಲಿ 'ಸಾಮಾನ್ಯ ಸಂಸ್ಕರಣಾ ಘಟಕ' ಸ್ಥಾಪಿಸುವ ಅಗತ್ಯವಿದೆ ಎಂದಿದ್ದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಇದರ ಬಗ್ಗೆ ಆಲೋಚಿಸಲಾಗುವುದು ಎಂದು ಹೇಳಿದರು.

ನಂತರ ಐಟಿ–ಬಿಟಿ ಇಲಾಖೆಯಿಂದ ಸಂಸ್ಥೆಯ ಆವರಣದಲ್ಲಿ ಸ್ಥಾಪಿಸಿರುವ ಇನ್ಕ್ಯುಬೇಷನ್ ಕೇಂದ್ರಕ್ಕೂ ಭೇಟಿ ನೀಡಿ ವೀಕ್ಷಣೆ ಮಾಡಿದರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ವಿಜ್ಞಾನಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು, ಏ.7–ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಶ್ರೀ ಗುರು ರಾಘವೇಂದ್ರ ಕಂಪ್ಯೂಟರ್ ಟ್ರೈನಿಂಗ್ ಸೆಂಟರ್‌ನಲ್ಲಿ ನಿರುದ್ಯೋಗಿ ಅಭ್ಯರ್ಥಿಗಳು ಮತ್ತು ಅಂಗವಿಕಲರಿಗೆ ಉಚಿತ ಕಂಪ್ಯೂಟರ್ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ 77602 40575 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ಕೋರಿದೆ.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಏ.7–ಮೈಸೂರಿನ ವಿವಿ ಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಆದಿಪಂಪ ರಸ್ತೆಯ ಫುಟ್‌ಪಾತ್ ಮೇಲೆ ಅಪರಿಚಿತ ವ್ಯಕ್ತಿ ಮೃತಪಟ್ಟಿರುವುದಾಗಿ ವರದಿಯಾಗಿದೆ. ಸುಮಾರು 50 ರಿಂದ 55 ವರ್ಷದ ವ್ಯಕ್ತಿ ಏ.6ರಂದು ಮೃತಪಟ್ಟಿದ್ದು, ಈತನ ಬಗ್ಗೆ ತಿಳಿದವರು ಅಥವಾ ವಾರಸುದಾರರು ವಿವಿ ಪುರಂ ಠಾಣೆ ದೂರವಾಣಿ ಸಂಖ್ಯೆ 0821–2418314 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಅಲ್‌ಖೈದಾ ಮುಖ್ಯಸ್ಥನ ವೀಡಿಯೋ ಬಿಡುಗಡೆ ಮಾಡಿದ್ದೇ ಆರ್‌ಎಸ್‌ಎಸ್: ಸಿದ್ದರಾಮಯ್ಯ

ವಿಪಕ್ಷ ನಾಯಕನ ಮೇಲೆರಗಿದ ಬಿಜೆಪಿ ನಾಯಕರು; ಕಾಂಗ್ರೆಸ್ ಮುಖಂಡರಿಂದ ಸಿದ್ಧರಾಮಯ್ಯ ಸಮರ್ಥನೆ

ಬೆಂಗಳೂರು, ಏ.7–ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ 'ಅಲ್ಲಾಹು ಅಕ್ಬರ್' ಘೋಷಣೆ ಕೂಗಿದ ಮುಸ್ಲಿಂ ವಿದ್ಯಾರ್ಥಿನಿಯನ್ನು ಹೊಗಳಿ ಅಲ್‌ಖೈದಾ ಉಗ್ರವಾದಿ ಸಂಘಟನೆಯ ಮುಖ್ಯಸ್ಥ ಜವಾಹಿರಿ ವೀಡಿಯೋವನ್ನು ಆರ್‌ಎಸ್‌ಎಸ್‌ನವರೇ ಬಿಡುಗಡೆ ಮಾಡಿದ್ದಾರೆ ಎಂದು ಬುಧವಾರ ವಿಪಕ್ಷ ನಾಯಕ ಸಿದ್ದರಾಮಯ್ಯ ನೀಡಿದ ಹೇಳಿಕೆ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ವಾಕ್ಸಮರಕ್ಕೆ ನಾಂದಿ ಹಾಡಿದೆ.



ಈ ಕುರಿತು ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ, ಈಗ ಅಲ್‌ಖೈದಾ ಉಗ್ರ ಸಂಘಟನೆಯನ್ನು ದೇಶದ್ರೋಹಿ ಎನ್ನಬೇಕೇ? ಅಥವಾ ಸಿದ್ದರಾಮಯ್ಯನವರನ್ನು ದೇಶದ್ರೋಹಿ ಎನ್ನಬೇಕೇ ಎನ್ನುವುದನ್ನು ರಾಜ್ಯದ ಜನತೆ ತೀರ್ಮಾನಿಸುತ್ತಾರೆ ಎಂದರು.

ಈಶ್ವರಪ್ಪನವರ ಹೇಳಿಕೆ ಬಗ್ಗೆ ಬಾದಾಮಿಯಲ್ಲಿ ಸುದ್ದಿಗಾರರು ಪ್ರತಿಕ್ರಿಯೆ ಕೇಳಿದಾಗ ಗರಂ ಆದ ಸಿದ್ದರಾಮಯ್ಯ, ನಾನು ಈಶ್ವರಪ್ಪನವರ ಬಗ್ಗೆ ಮಾತಾಡಲ್ಲ ಅಂತ ಹೇಳಿದ್ದೀನಿ. ಮತ್ತೆ ಯಾಕೆ ಅವರ ಬಗ್ಗೆ ಕೇಳ್ತೀರಿ? ಎಂದು ಸಿಟ್ಟಾದರು.

ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗಿದ್ದರು ಎಂದು ಹೇಳುವುದೇ ಗೌರವ ತರುವಂತಹ ವಿಷಯವಲ್ಲ ಎಂಬಂತಾಗಿದೆ. ಅಲ್‌ಖೈದಾ ಮುಖ್ಯಸ್ಥ ಮಾತನಾಡಿರುವ ವೀಡಿಯೋ ಇದೆ. ಅದನ್ನು ಸಿದ್ದರಾಮಯ್ಯನವರು ನೋಡಿ ಮಾತನಾಡಬೇಕಿತ್ತು. ಈ ಸಂಬಂಧ ಅವರು ನೀಡಿರುವ ಹೇಳಿಕೆಯು ಈ ವಯಸ್ಸಿನಲ್ಲಿ ಅವರು 'ಅರಳೋ–ಮರುಳೋ' ಎನ್ನುವ ಸ್ಥಿತಿಗೆ ಬಂದಿದ್ದಾರೆ ಎಂದು ರಾಜ್ಯದ ಜನರು ಹೇಳುತ್ತಿದ್ದಾರೆಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಕ್ರಿಯಿಸಿದ್ದಾರೆ.

ಇನ್ನು ಕಾಂಗ್ರೆಸ್ ಮುಖಂಡರು ಸಿದ್ದರಾಮಯ್ಯನವರ ಬೆಂಬಲಕ್ಕೆ ನಿಂತಿದ್ದಾರೆ. ಮಾಜಿ ಸಚಿವ ರಾಮಲಿಂಗ ರೆಡ್ಡಿ ಮಾಧ್ಯಮದೊಂದಿಗೆ ಮಾತನಾಡುತ್ತಾ, ಅಲ್‌ಖೈದಾ ಬೇರೆ ಅಲ್ಲ, ಆರ್‌ಎಸ್‌ಎಸ್ ಬೇರೆಯಲ್ಲ ಎಂದರು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಕುತಂತ್ರ ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಕೋಮು ದ್ವೇಷ ಹರಡುತ್ತಿದ್ದಾರೆ ಎಂದರು. ಅಲ್‌ಖೈದಾ ಮುಖ್ಯಸ್ಥನ ವೀಡಿಯೋ ಆರ್‌ಎಸ್‌ಎಸ್‌ನವರು ಬಿಡುಗಡೆ ಮಾಡಿದ್ದಾರೆ ಎಂದಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಳಿ ಸಮರ್ಪಕವಾದ ಮಾಹಿತಿ ಇರುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿಯವರು ಸೋಲಿನ ಭೀತಿಯಿಂದ ಕಟ್ಟು ಕತೆಗಳನ್ನು ಕಟ್ಟುತ್ತಿದ್ದಾರೆ. ಪ್ರತೀ ವಾರ ಒಂದೊಂದು ವಿಷಯವನ್ನು ತೆಗೆದುಕೊಂಡು ರಾಜ್ಯದಲ್ಲಿ ಅಶಾಂತಿ ವಾತಾವರಣ ನಿರ್ಮಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಇಂತಹ ವಿವಾದಗಳನ್ನು ಸಾಮರಸ್ಯದಿಂದ ಬಗೆಹರಿಸಬೇಕು. ಆದರೆ ಬಿಜೆಪಿ ಅತಿರೇಕ ವರ್ತನೆ ತೋರುತ್ತಿದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿಯ ಈ ವರ್ತನೆ ಅವರಿಗೇ ತಿರುಗುಬಾಣವಾಗಲಿದೆ ಎಂದಿರುವ ಅವರು, ಹಿಜಾಬ್, ಹಲಾಲ್ ಮುಂತಾದ ವಿವಾದಗಳಿಂದ ಉದ್ಯಮಿಗಳು ರಾಜ್ಯಕ್ಕೆ ಬರಲು ಹಿಂಜರಿಯುತ್ತಿದ್ದಾರೆ. ಬಿಜೆಪಿಯ ಈ ಅತಿರೇಕ ವರ್ತನೆಯಿಂದ ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆಗೆ ಧಕ್ಕೆಯಾಗುತ್ತಿದೆ. ಗೃಹ ಸಚಿವರೇ ಕೋಮು ದ್ವೇಷಕ್ಕೆ ಪ್ರಚೋದನೆ ನೀಡುವಂತಹ ಹೇಳಿಕೆಯನ್ನು ನೀಡಿರುವುದು ಬಿಜೆಪಿಗೆ ತಿರುಗುಬಾಣವಾಗಲಿದೆ ಎಂದರು.



ಮೇಲುಕೋಟೆ ಚೆಲುವನಿಗೆ ದೀವಟಿಗೆ ಸಲಾಂ ವಿವಾದ

ದೇವಾಲಯದ ಆಡಳಿತ ಮಂಡಳಿ ವರದಿ ಕೇಳಿದ ಜಿಲ್ಲಾಡಳಿತ



ಮಂಡ್ಯ,ಏ.7(ಮೋಹನ್‌ರಾಜ್)– ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ದೀವಟಿಗೆ ಸಲಾಂ ವಿವಾದ ವಿಚಾರಕ್ಕೆ ಸಂಬಂಧಿಸಿದಂತೆ ದೇವಾಲಯದ ಆಡಳಿತ ಮಂಡಳಿ ಬಳಿ ಜಿಲ್ಲಾಡಳಿತ ವರದಿ ಕೇಳಿದೆ.

ಈ ಬಗ್ಗೆ ಪಾಂಡವಪುರ ಉಪವಿಭಾಗಾಧಿಕಾರಿ, ಮೇಲುಕೋಟೆ ಚಲುವನಾರಾಯಣಸ್ವಾಮಿ ದೇಗುಲದ ಆಡಳಿತಾಧಿಕಾರಿ ಹಾಗೂ ದೇವಾಲಯದ ಕಾರ್ಯನಿರ್ವಹಣಾಧಿಕಾರಿಗೆ ಪತ್ರ ಬರೆದಿರುವ ಜಿಲ್ಲಾಧಿಕಾರಿ ಎಸ್.ಅಶ್ವತಿ, ದೀವಟಿಗೆ ಸಲಾಂ ಎಂಬ ಹೆಸರಿನಲ್ಲಿ ದೇಗುಲದಲ್ಲಿ ನಡೆಯುತ್ತಿದ್ದ ಆರತಿ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದಾರೆ.

ಸಲಾಂ ಎಂಬ ಹೆಸರನ್ನ ಬದಲಾಯಿಸುವಂತೆ ಜಿಲ್ಲಾ ಧಾರ್ಮಿಕ ಪರಿಷತ್ ಮನವಿ ಸಲ್ಲಿಸಿತ್ತು. ಆ ಮನವಿಯನ್ನು ಪರಿಶೀಲಿಸಿ ಸ್ಪಷ್ಟವಾದ ಅಭಿಪ್ರಾಯ ತಿಳಿಸುವಂತೆ ಸೂಚನೆ ನೀಡಿದ್ದು, ಅದರಂತೆ ಒಕ್ಕೊರಲಾಗಿ ಸಂಜೆ ವೇಳೆ ನಡೆಯುತ್ತಿದ್ದ ದೀವಟಿಗೆ ಸಲಾಂ ಕೈ ಬಿಡುವಂತೆ ಸದ್ಯಕ್ಕೆ ಅಭಿಪ್ರಾಯ ವ್ಯಕ್ತಪಡಿಸಿರುವ ಸ್ಥಾನಿಕ ಅರ್ಚಕರು, ಮುಸ್ಲಿಂ ದಾಳಿಕೋರರಿಂದ ಸಂಧ್ಯಾರತಿ ಬದಲಿಗೆ ದೀವಟಿಗೆ ಸಲಾಂ ಎಂಬ ಪದ ಬಂದಿದೆ. ಸಲಾಂ ಪದ ತೆಗೆದು ಸಂಧ್ಯಾರತಿ ಎಂದು ಹೆಸರಿಡುವಂತೆ ಸ್ಥಾನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಈಗಾಗಲೇ ಇಓ ಹಾಗೂ ಎಸಿಯವರಿಗೆ ಲಿಖಿತ ರೂಪದಲ್ಲಿ ಅಭಿಪ್ರಾಯ ತಿಳಿಸಿರುವುದಾಗಿ ಸ್ಥಾನಿಕ ಅರ್ಚಕ ಶ್ರೀನಿವಾಸನ್ ತಿಳಿಸಿದ್ದಾರೆ.

ಮೇಲುಕೋಟೆ ಸ್ಥಾನಿಕ ಅರ್ಚಕರ ಮನವಿ: ಮುಸ್ಲಿಂರ ವ್ಯಾಪಾರ, ಹಲಾಲ್ ಕಟ್ ಮಾಂಸ ನಿಷೇಧ ಆಯ್ತು. ಈಗ ಮುಸ್ಲಿಮರು ಕೆತ್ತಿದ ವಿಗ್ರಹ ಖರೀದಿಸದಂತೆ ಅಭಿಯಾನ ಆರಂಭವಾಗಿದ್ದು, ಮುಸ್ಲಿಮರು ಕೆತ್ತಿದ ವಿಗ್ರಹಗಳ ಪ್ರತಿಷ್ಠಾಪಿಸದಂತೆ ಮೇಲುಕೋಟೆ ಚೆಲುನಾರಾಯಣಸ್ವಾಮಿ ದೇಗುಲದ 4ನೇ ಸ್ಥಾನಿಕ ಶ್ರೀನಿವಾಸನ್ ಗುರೂಜಿ ಹೊಸ ವಿವಾದ ಸೃಷ್ಟಿಸಿದ್ದಾರೆ.

ಮುಸ್ಲಿಮರು ವಿಗ್ರಹ ಕೆತ್ತನೆ ಮಾಡುವುದು ಸರಿಯಲ್ಲ. ಶಾಸ್ತ್ರ ತಿಳಿದಿರುವ ವಿಶ್ವಕರ್ಮ ಸಮುದಾಯದವರು ಮೂರ್ತಿ ಕೆತ್ತನೆ ಮಾಡುತ್ತಾರೆ. ಪುರೋಹಿತರು, ಆಗಮಿಕರು ವಿಗ್ರಹ ಪ್ರತಿಷ್ಠಾಪಿಸುತ್ತಾರೆ. ಧರ್ಮ, ಶಾಸ್ತ್ರದ ಮೇಲೆ ನಂಬಿಕೆ ಪ್ರೀತಿ ಇರುವವರು ಮಾತ್ರ ಈ ಕೆಲಸ ಮಾಡಬೇಕು. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ಪದ್ಧತಿ. ಕೆತ್ತನೆ ಕೆಲಸ ಕಲಿತ ಮಾತ್ರಕ್ಕೆ ಅನ್ಯಧರ್ಮೀಯರು ವಿಗ್ರಹ ಕೆತ್ತನೆ ಮಾಡೋದು ನಿಷಿದ್ಧ. ವಿಶ್ವಕರ್ಮ ಸಮುದಾಯದವರಿಂದಲೇ ಹಿಂದೂ ದೇವರ ವಿಗ್ರಹ ಖರೀದಿಗೆ ಮನವಿ ಮಾಡಿದ್ದಾರೆ.

ಏಪ್ರಿಲ್ 15 ರಿಂದ ಇಡೀ ರಾಜ್ಯ ಪ್ರವಾಸ ಕೈಗೊಂಡು ಜಾಗ್ರತೆ ಮೂಡಿಸಲು ನಿರ್ಧರಿಸಿದ್ದು, ಗ್ರಾಮದ ಯಜಮಾನರು, ಎಲ್ಲಾ ಜನಾಂಗದ ಮುಖಂಡರಿಗೆ ಮುಸ್ಲಿಮರಿಂದ ವಿಗ್ರಹ ಖರೀದಿಸದಂತೆ ಮನವಿ ಮಾಡಿದ್ದು, ವಿಗ್ರಹದ ಜೊತೆ ಅನ್ಯಧರ್ಮೀಯರ ಬಳಿ ಪೂಜಾ ಸಾಮಗ್ರಿಗಳನ್ನು ಖರೀದಿಸದಂತೆ ಜಾಗೃತಿ ಮೂಡಿಸಲಾಗುವುದು. ಹಿಂದೂಗಳ ಹಣ, ವ್ಯಾಪಾರ ಹಿಂದೂಗಳ ಜೊತೆ ನಡೆಯುವಂತೆ ಮನವಿ ಮಾಡಿದ್ದಾರೆ.

ಅಲ್ಪಸಂಖ್ಯಾತರ ಮತ ಪಡೆಯಲು ಕಾಂಗ್ರೆಸ್–ಜೆಡಿಎಸ್‌ನಲ್ಲಿ ಪೈಪೋಟಿ

ಮಂಡ್ಯ,ಏ.7(ಮೋಹನ್‌ರಾಜ್)– ರಾಜ್ಯದಲ್ಲಿ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮತ ಪಡೆಯಲು ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವೆ ತೀವ್ರ ಪೈಪೋಟಿ ನಡೆಯುತ್ತಿದ್ದು, ಅದಕ್ಕಾಗಿ ಎರಡೂ ಪಕ್ಷಗಳು ಜಿದ್ದಿಗೆ ಬಿದ್ದವರಂತೆ ಆ ಸಮುದಾಯವನ್ನು ಓಲೈಕೆ ಮಾಡಿಕೊಳ್ಳಲು ಮುಂದಾಗಿವೆ ಎಂದು ಉನ್ನತ ಶಿಕ್ಷಣ, ಐಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಅಶ್ವಥ್ ನಾರಾಯಣ ವ್ಯಂಗ್ಯವಾಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನಿನಲ್ಲಿ ಏನು ಅವಕಾಶ ಇದೆ. ಅದು ಇರುತ್ತೆ, ಯಾವುದಕ್ಕೆ ಅವಕಾಶ ಇಲ್ಲವೋ ಅದು ಇಲ್ಲ. ನಮ್ಮ ಸಮಾಜ ಎಲ್ಲ ಸಮಾಜದ ಜೊತೆ ಬಾಳಿ ಬದುಕಿದ ಸಮಾಜವಾಗಿದ್ದು, ಧರ್ಮಕ್ಕಿಂತ ಮಿಗಿಲಾಗಿ ನಾವು ಭಾರತೀಯರು. ನಾವು ವಿಶ್ವ ಮಾನವರು, ಹಾಗಂತ ನಮ್ಮನ್ನ ಕಡೆಗಣಿಸಬೇಡಿ.



ನಮ್ಮನ್ನು ಅಸಹಾಯಕರು ಎಂದು ತಿಳಿದುಕೊಳ್ಳಬೇಡಿ. ನಾವು ಎಲ್ಲರನ್ನು ಪ್ರೀತಿಸಿ, ಗೌರವಿಸುತ್ತೇವೆ ಎಂದರು.

ನಾವು ಯಾವುದೇ ಕಾರಣಕ್ಕೂ ದ್ವೇಷ, ಅಸೂಯೆ, ವೈಮನಸ್ಸು ಇಟ್ಟುಕೊಂಡವರಲ್ಲ. ನಾವು ವಿಶ್ವದ ಜೊತೆ ಸ್ಪರ್ಧೆ ಮಾಡುತ್ತಿದ್ದು, ದ್ವೇಷದಲ್ಲಿ ಏನಿದೆ? ನಾವು ಕಾನೂನು ಪ್ರಕಾರ ಎಲ್ಲಾ ವಿಚಾರವನ್ನು ಹೇಳುತ್ತಿದ್ದೇವೆ. ಕಾನೂನು ಬಿಟ್ಟರೆ, ನಮಗೆ ಯಾವುದೇ ದ್ವೇಷ ಇಲ್ಲ. ಅಲ್ಪಸಂಖ್ಯಾತರು ನಮ್ಮ ಅಣ್ಣ–ತಮ್ಮಂದಿರು ಇದ್ದಹಾಗೆ. ನಾವು ಅವರನ್ನು ಪ್ರೀತಿಸುತ್ತೇವೆ. ಗೌರವಿಸುತ್ತೇವೆ ಎಂದು ಹೇಳಿದರು.

ದೇಶದಲ್ಲಿ ಪ್ರತಿಯೊಬ್ಬರೂ ಕಾನೂನು ಪಾಲನೆ ಮಾಡಬೇಕು, ಗೌರವಿಸಬೇಕು. 75 ವರ್ಷ ಆಗಿದೆ ಸ್ವಾತಂತ್ರ್ಯ ಬಂದು. ಪಾಠ ಕಲಿಯಲಿಲ್ಲ ಅಂದರೆ ಹೇಗೆ? ಓಲಿಸಿಕೊಳ್ಳುವಂತಹವರ ಸಹವಾಸ ಮಾಡಬೇಡಿ. ಎಲ್ಲರೂ ಜೊತೆ ಇರೋಣ, ಒಟ್ಟಿಗೆ ಬಾಳೋಣ ಎಂದು ಹೇಳಿದರು.

ಇವತ್ತು ಅಲ್‌ಖೈದಾ ಅಂತಹವರ ಹೇಳಿಕೆಗೆ ಸೊಪ್ಪು ಹಾಕಬೇಡಿ. ಅದನ್ನೆಲ್ಲ ಸಂಪೂರ್ಣವಾಗಿ ಕಡೆಗಣಿಸಿ, ಖಂಡಿಸಿ. ಇದನ್ನೆಲ್ಲ ಮೊದಲು ಅಲ್ಪಸಂಖ್ಯಾತರು ಖಂಡಿಸಬೇಕಿತ್ತು. ಆದರೆ ಮೊದಲು ಸಿದ್ದರಾಮಯ್ಯ ಅವರೇ ಖಂಡಿಸಿಲ್ಲ. ಕಾಂಗ್ರೆಸ್ ನಾಯಕರು ಖಂಡಿಸಬೇಕು. ಆದರೆ ಅವರು ಆ ಕೆಲಸವನ್ನು ಮಾಡಿಲ್ಲ ಎಂದು ಟೀಕಿಸಿದರು.

ರಾಜ್ಯದಲ್ಲಿ ಕೋಮು ಸಂಘರ್ಷಕ್ಕೆ ಬಿಜೆಪಿ ಕಾರಣ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಅವರು ಗೊಂದಲಕ್ಕೆ ಸಿಲುಕಿದ್ದಾರೆ. ಏನು ಹೇಳಬೇಕು ಅಂತಾನೇ ಗೊತ್ತಾಗಲ್ಲ ಪಾಪ. ಸ್ಪಷ್ಟತೆ ಸಿದ್ದರಾಮಯ್ಯ ಅವರನ್ನ ಕಾಡುತ್ತಿದೆ. ಯಾವ ರೀತಿ ನಿಲುವು ತೆಗೆದುಕೊಳ್ಳಬೇಕೆಂಬ ಗೊಂದಲ ಕಾಂಗ್ರೆಸ್‌ನಲ್ಲಿದೆ. ಆದರೆ ಬಿಜೆಪಿ ಮಾತ್ರ ಕಾನೂನನ್ನು ಪಾಲನೆ ಮಾಡುವ ಕೆಲಸವನ್ನು ಮಾಡುತ್ತಿದೆ ಎಂದರು.

ಬಲಮುರಿ ದೇವಸ್ಥಾನದ ಹುಂಡಿ ಹಣ ಕಳವು



ಶ್ರೀರಂಗಪಟ್ಟಣ,ಏ.7(ವಿನಯ್ ಕಾರೇಕುರ)– ಬುಧವಾರ ರಾತ್ರಿ ಬೆಳಗೂಳ ಗ್ರಾಮದ ಬಳಿಯ ಬಲಮುರಿ ಪ್ರವಾಸಿ ತಾಣದಲ್ಲಿರುವ ಅಗಸ್ತೇಶ್ವರ ಮತ್ತು ಪಾರ್ವತಿ ದೇವಸ್ಥಾನದ ಹುಂಡಿಯನ್ನು ಒಡೆದು ಹಣ ಕಳ್ಳತನ ಮಾಡಿರುವ ಘಟನೆ ನಡೆದಿದೆ.

ಕಳ್ಳತನ ಕುರಿತು ಬಲಮುರಿ ಅಭಿವೃದ್ಧಿ ಸಮಿತಿ ಸದಸ್ಯ ಚೆಲವರಾಜು ಕೆ.ಆರ್.ಸಾಗರ ಪೊಲೀಸ್ ಠಾಣೆ ದೂರು ನೀಡಿದ್ದು, ಸುಮಾರು 20 ರಿಂದ 25 ಸಾವಿರ ನಗದು ಕಳ್ಳತನವಾಗಿದೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಶಿವರಾತ್ರಿ ಮತ್ತು ಯುಗಾದಿಯಲ್ಲಿ ಹೆಚ್ಚಿನ ಭಕ್ತಾದಿಗಳು ಬಂದು ದೇವರ ದರ್ಶನ ಕೂಡ ಮಾಡಿದ್ದರು.

ಧನಾತ್ಮಕ ಭಾವನೆಯಿಂದ ವೈದ್ಯಕೀಯ ವೃತ್ತಿಯಲ್ಲಿ ಯಶಸ್ಸು ಸಾಧ್ಯ

ನಾಗಮಂಗಲ, ಏ.7– ಧನಾತ್ಮಕ ಮನೋಭಾವನೆಯಿಂದ ಮಾತ್ರ ವೈದ್ಯಕೀಯ ರಂಗದಲ್ಲಿ ಹೆಸರು ಮತ್ತು ಯಶಸ್ಸು ಪಡೆಯಲು ಸಾಧ್ಯವೆಂದು ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಜಿ. ಶಿವರಾಮು ಅಭಿಪ್ರಾಯಪಟ್ಟರು.

ಅವರು ಪ್ರಸಕ್ತ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವುದು ಗಮನಾರ್ಹ. ವಿದ್ಯಾರ್ಥಿಗಳು ಯಾವುದೇ ಮೀಸಲಾತಿ ನಿಯಮದಲ್ಲಿ ಪ್ರವೇಶ ಪಡೆದಿದ್ದರೂ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲಾಗುವುದು.ವಿದ್ಯಾಸಂಸ್ಥೆಯಲ್ಲಿ ಯಾವುದೇ ತಾರತಮ್ಯವಿರುವುದಿಲ್ಲ. ಅಲ್ಲದೇ ಈ ಕಾಲೇಜಿನಲ್ಲಿ ಸುಭದ್ರತೆಯಿದೆ ಎಂದು ಹೇಳಿದರು.

ವೈದ್ಯಕೀಯ ಕಾಲೇಜಿನ ಕುಲಸಚಿವರು, ಹಣಕಾಸು ಅಧಿಕಾರಿ ಬಿ.ಕೆ.ಉಮೇಶ್ ಮಾತನಾಡಿ, ಆದಿಚುಂಚನಗಿರಿ ವೈದ್ಯಕೀಯ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದವರು ಇಂದು ದೇಶ–ವಿದೇಶಗಳಲ್ಲಿ ಇಂದಿಗೂ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಂಗರಚನಾ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಶಾರದ ಮೆಣಸಿನಕಾಯಿ, ಸಮುದಾಯ ವೈದ್ಯಕೀಯ ಶಾಸ್ತ್ರ ವಿಭಾಗದ ಡಾ ಬಸವರಾಜ್, ಎಂ.ಹಿಂಗಲಗೇರಿ, ಡಾ. ಅಲಿಯಾ ನಸ್ರುತ್, ಚಂದನ್ ರಾಜ್ ಮುಂತಾದವರಿದ್ದರು.

ನಾಳೆಯಿಂದ ತಲಕಾವೇರಿ, ಭಾಗಮಂಡಲದಲ್ಲಿ ವಾರ್ಷಿಕ ಪೂಜಾ ಕಾರ್ಯಕ್ರಮ



ಮಡಿಕೇರಿ, ಏ.7– ಮಡಿಕೇರಿ ತಾಲೂಕು, ಭಾಗಮಂಡಲದಲ್ಲಿರುವ ಶ್ರೀ ಭಗಂಡೇಶ್ವರ ಮತ್ತು ತಲಕಾವೇರಿ ದೇವಾಲಯಗಳಲ್ಲಿ 2022ನೇ ಸಾಲಿನ "ವಾರ್ಷಿಕೋತ್ಸವ"ವು ಏಪ್ರಿಲ್ 09, 10 ಮತ್ತು 11 ರಂದು ಉಚ್ಚಿಲ ನೀಲೇಶ್ವರ ಪದ್ಮನಾಭ ತಂತ್ರಿಯವರ ನೇತೃತ್ವದಲ್ಲಿ ನಡೆಯಲಿದೆ.

ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಏಪ್ರಿಲ್ 9 ರಂದು ಭಗಂಡೇಶ್ವರ ದೇವರಿಗೆ ಬೆಳಗ್ಗೆ 6 ಗಂಟೆಯಿಂದ 7.30 ಗಂಟೆಯವರೆಗೆ ಗಣಪತಿ ಹೋಮ. ಬೆಳಗ್ಗೆ 8 ರಿಂದ 9 ಗಂಟೆಯವರೆಗೆ ಏಕದಶ ರುದ್ರಾಭಿಷೇಕ. ಬೆಳಗ್ಗೆ 9 ಗಂಟೆಯಿಂದ 10.30ರ ವರೆಗೆ ನವಕ ಮತ್ತು 108 ಕಳಶಾಭಿಷೇಕ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ. ಪ್ರಸಾದ ವಿನಿಯೋಗ ಮತ್ತು ಅನ್ನಸಂತರ್ಪಣೆ.

ಏಪ್ರಿಲ್ 10 ರಂದು ಸುಬ್ರಹ್ಮಣ್ಯ ದೇವರಿಗೆ ಬೆಳಗ್ಗೆ 6 ಗಂಟೆಯಿಂದ 7.30 ಗಂಟೆಯವರೆಗೆ ಗಣಪತಿ ಹೋಮ. ಬೆಳಗ್ಗೆ 8 ರಿಂದ 9 ಗಂಟೆಯವರೆಗೆ ದಾರಾಭಿಷೇಕ ಮತ್ತು ಕ್ಷೀರಾಭಿಷೇಕ. ಬೆಳಗ್ಗೆ 9 ಗಂಟೆಯಿಂದ 10.30ರ ವರೆಗೆ ನವಕ ಮತ್ತು 108 ಕಳಶಾಭಿಷೇಕ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿತರಣೆ.

ಏಪ್ರಿಲ್ 11 ರಂದು ಮಹಾವಿಷ್ಣು ದೇವರಿಗೆ ಬೆಳಗ್ಗೆ 6 ಗಂಟೆಯಿಂದ 7.30 ಗಂಟೆಯವರೆಗೆ ಗಣಪತಿ ಹೋಮ. ಬೆಳಗ್ಗೆ 8 ರಿಂದ 9 ಗಂಟೆಯವರೆಗೆ ಪವಮಾನಾಭಿಷೇಕ. ಬೆಳಗ್ಗೆ 9 ಗಂಟೆಯಿಂದ 10.30 ರವರೆಗೆ ನವಕ ಮತ್ತು 108 ಕಳಶಾಭಿಷೇಕ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ವಿತರಣೆ.

ಏಪ್ರಿಲ್ 10 ರಂದು ಶ್ರೀ ತಲಕಾವೇರಿ ದೇವಾಲಯದಲ್ಲಿ ಬೆಳಗ್ಗೆ 9 ಗಂಟೆಯಿಂದ ಗಣಪತಿ ಹೋಮ, ಕಳಶಾಭಿಷೇಕ, ಪಂಚಗವ್ಯ, 108 ಕಳಶಾಭಿಷೇಕ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ನಡೆಯಲಿದೆ ಎಂದು ಶ್ರೀ ಭಗಂಡೇಶ್ವರ– ತಲಕಾವೇರಿ ಮತ್ತು ಸಮೂಹ ದೇವಾಲಯದ ಕಾರ್ಯನಿರ್ವಹಕ ಅಧಿಕಾರಿ ಅವರು ತಿಳಿಸಿದ್ದಾರೆ.

ಏ.23 ರಂದು ಫೀ.ಮಾ. ಕೆ.ಎಂ.ಕಾರ್ಯಪ್ಪ ಕೊಡವ ಕೇರಿಯ ಮಹಾಸಭೆ

ಮಡಿಕೇರಿ, ಏ.7– ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕೊಡವ ಕೇರಿಯ 15ನೇ ವರ್ಷದ ಮಹಾಸಭೆ ಏ.23 ರಂದು ನಡೆಯಲಿದೆ.

ಅಂದು ಬೆಳಗ್ಗೆ 10.30 ಗಂಟೆಗೆ ನಗರದ ಕೊಡವ ಸಮಾಜದಲ್ಲಿ ಕಾರ್ಯಪ್ಪ ಕೊಡವ ಕೇರಿಯ ಅಧ್ಯಕ್ಷ ಬೋಡಂಡ ಮುತ್ತಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಹಕಾರಿ ಮಾಜಿ ಹೆಚ್ಚುವರಿ ರಿಜಿಸ್ಟ್ರಾರ್ ಹಾಗೂ ಕೆಎಟಿ ನಿವೃತ್ತ ಸದಸ್ಯ ಕಲ್ಲುಮಾಡಂಡ ಜಿಮ್ಮಿ ಮಾದಯ್ಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪಳಂಗಂಡ ಎ. ಭಾಗೀರಥಿ ಭಾಗವಹಿಸಲಿದ್ದಾರೆ.

ಸನ್ಮಾನ: ಸ್ಕ್ವಾಲೀ ಅಜ್ಜಮಾಡ ಬಿ. ದೇವಯ್ಯ, ಅವರ ಪ್ರತಿಮೆ ಅನಾವರಣಗೊಳಿಸಲು ಕಾರಣಕರ್ತರಾದ, ಕೊಡವ ಮಕ್ಕಡ ಕೂಟದ ವತಿಯಿಂದ 54 ಪುಸ್ತಕಗಳನ್ನು ಪ್ರಕಟಿಸಿರುವ ಮತ್ತು ವಿವಿಧ ಸಂಘ ಸಂಸ್ಥೆಗಳ ಮೂಲಕ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಹಾಗೂ ನಟ ಬೊಳ್ಳಜಿರ ಬಿ.ಅಯ್ಯಪ್ಪ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಗುವುದೆಂದು ಅಧ್ಯಕ್ಷ ಮುತ್ತಪ್ಪ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿ.ಪೇಟೆಯಲ್ಲಿ ನಾಳೆ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ



ವಿರಾಜಪೇಟೆ, ಏ.7– ಜಾನಪದ ಕಲಾ ಪ್ರಕಾರಗಳ ಪ್ರದರ್ಶನ ಏ.9 ರಂದು ಅಪರಾಹ್ನ 2 ಗಂಟೆಯಿಂದ 6 ಗಂಟೆವರೆಗೆ ವಿರಾಜಪೇಟೆ ಸೆರಿನಿಟಿ ಹಾಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಾನಪದ ಪರಿಷತ್ತು ತಾಲೂಕು ಅಧ್ಯಕ್ಷ ಟೋಮಿ ತೋಮಸ್ [ನಾಕನ್ನಡಿಗ] ತಿಳಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಏ.9 ರಂದು ಮಧ್ಯಾಹ್ನ 1 ರಿಂದ 2 ಗಂಟೆವರೆಗೆ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸಂಜೆ 6 ಗಂಟೆಯಿಂದ ಬೆಂಗಳೂರು ಕೈವಲ್ಯ ಕಲಾಕೇಂದ್ರದವರ ಅಭಿನಯದಲ್ಲಿ ಸುಧಾ ಆಡುಕಳರವರ ರಚನೆಯ "ಮಾಧವಿ" ಎಂಬ ಸಾಮಾಜಿಕ ನಾಟಕ ನಡೆಯಲಿದೆ ಎಂದರು. ಕಲಾ ಪ್ರದರ್ಶನದಲ್ಲಿ ಪ್ರಾಚೀನ ಜಾನಪದ ಹಾಗೂ ಶುದ್ಧವಾದ ಜಾನಪದ ಗೀತೆಗಳು, ಕಂಸಾಲೆ ಪದ, ಜಾನಪದ ನೃತ್ಯ, ಚಂಡೆವಾದ್ಯ, ಡೊಳ್ಳು ಕುಣಿತ ಹಾಗೂ ಇತರ ಕಾರ್ಯಕ್ರಮಗಳು ನಡೆಯುವುದಾಗಿ ಹೇಳಿದರು. ಗೋಷ್ಠಿಯಲ್ಲಿ ಜಾನಪದ ಪರಿಷತ್ತು ತಾಲೂಕು ಖಜಾಂಚಿ ವಕೀಲ ಡಿ.ಸಿ.ದ್ರುವ ಕುಮಾರ್, ನಿರ್ದೇಶಕರಾದ ಸ್ವರ್ಣ ಸಂಗೀತ ಶಾಲಾ ವ್ಯವಸ್ಥಾಪಕ ದಿಲಿಕುಮಾರ್, ಎಂ.ಕೆ. ದೇಚಮ್ಮ, ವಕೀಲ ಟಿ.ಹೆಚ್.ಪ್ರದೀಪ್, ಟಿ.ಡಿ.ಮೋಹನ್ ಉಪಸ್ಥಿತರಿದ್ದರು.


ಇಂದು 'ಕರ್ನಾಟಕ ಹಕ್ಕಿ ಹಬ್ಬ'ಕ್ಕೆ ಚಾಲನೆ

ಮಡಿಕೇರಿ, ಏ.7– ಅರಣ್ಯ ಇಲಾಖೆ ಹಾಗೂ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಸಹಯೋಗದಲ್ಲಿ ಏಪ್ರಿಲ್ 8 ರಿಂದ 10 ರವರೆಗೆ ನಡೆಯುವ 'ಕರ್ನಾಟಕ ಹಕ್ಕಿ ಹಬ್ಬ' 8ನೇ ಆವೃತ್ತಿ ಉದ್ಘಾಟನಾ ಕಾರ್ಯಕ್ರಮವು ಏಪ್ರಿಲ್ 8 ರಂದು ಸಂಜೆ 4.30 ಗಂಟೆಗೆ ನಗರದ ಕ್ರಿಸ್ಟಲ್ ಕೋರ್ಟ್‌ನಲ್ಲಿ ನಡೆಯಲಿದೆ.

ಅರಣ್ಯ, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರಾದ ಉಮೇಶ್ ವಿಶ್ವನಾಥ ಕತ್ತಿ, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ಎಸ್.ರವಿಕುಶಾಲಪ್ಪ, ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಆಯನೂರು ಮಂಜುನಾಥ್, ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಮದನ್ ಗೋಪಾಲ್, ನಗರಸಭೆ ಅಧ್ಯಕ್ಷ ಎನ್.ಪಿ.ಅನಿತಾ ಇತರರು ಪಾಲ್ಗೊಳ್ಳಲಿದ್ದಾರೆ.

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಾದ ವಿಜಯ್ ಕುಮಾರ್ ಗೋಗಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅಭಿವೃದ್ಧಿ) ರಾಜೀವ್ ರಂಜನ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಮನೋಜ್ ಕುಮಾರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ ಮುಖ್ಯಸ್ಥರು) ಆರ್.ಕೆ.ಸಿಂಗ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ ಹಾಗೂ ಹವಾಮಾನ ಬದಲಾವಣೆ) ಮಧು ಶರ್ಮಾ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪರಿಸರ) ವಿಜಯ ಮೋಹನ್ ರಾಜ್ ವಿ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿ.ಪಂ. ಸಿಇಒ ಭನ್ವರ್ ಸಿಂಗ್ ಮೀನಾ, ಇತರರು ಪಾಲ್ಗೊಳ್ಳಲಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ



ಮಡಿಕೇರಿ, ಏ.7– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಯೊಂದು ಸಂಪೂರ್ಣ ಹೊತ್ತಿ ಉರಿದ ಘಟನೆ ಕೊಡ್ಲಿಪೇಟೆಯಲ್ಲಿ ನಡೆದಿದೆ. ಕೊಡ್ಲಿಪೇಟೆ ಕಿರಿಕೊಡ್ಲಿ ಗ್ರಾಮ ನಿವಾಸಿ ಹಸೈನಾರ್ ಎಂಬವರ ಮನೆ ಸಂಪೂರ್ಣ ಬೆಂಕಿಗೆ ಆಹುತಿಯಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಬುಧವಾರ ಮಧ್ಯರಾತ್ರಿ ಈ ಘಟನೆ ನಡೆದಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಬೆಂಕಿ ಹರಡುತ್ತಿದ್ದ ಸಂದರ್ಭ ಸುತ್ತಮುತ್ತ ನಿವಾಸಿಗಳು ನೀರು ಹಾಕಿ ಬೆಂಕಿ ನಂದಿಸಲು ಪ್ರಯತ್ನಿಸಿದರೂ ಕೂಡ ಅದು ಸಾಧ್ಯವಾಗಲಿಲ್ಲ. ಬಳಿಕ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸುವಲ್ಲಿ ಸಫಲರಾದರು. ಬೆಂಕಿಯ ತೀವ್ರತೆಗೆ ಗೃಹ ಬಳಕೆ ವಸ್ತುಗಳು ಬೆಂಕಿಯಲ್ಲಿ ಸುಟ್ಟು ಕರಕಲಾಗಿದೆ. ಘಟನೆ ಕುರಿತು ಕೊಡ್ಲಿಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ ಅಭಿವೃದ್ಧಿಗೆ ಕ್ರಮ

ಅರಣ್ಯ ಸಚಿವ ಉಮೇಶ್ ಕತ್ತಿ ಭರವಸೆ

ಹುಲಿ ಸಂರಕ್ಷಣೆಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿದೆ. ಎಲ್ಲಾ ಸಂರಕ್ಷಿತಾರಣ್ಯಗಳಲ್ಲಿ ಒಟ್ಟು 6,800 ಆನೆಗಳು, 560 ಹುಲಿಗಳು, 400 ಚಿರತೆಗಳಿವೆ. ರಾಜ್ಯ ಅರಣ್ಯ, ಪ್ರಾಣಿ ಸಂಕುಲದಿಂದ ಸಮೃದ್ಧವಾಗಿದೆ.

"ಮಲೆಮಹದೇಶ್ವರ ವನ್ಯಧಾಮದಲ್ಲಿರುವ ಚಂಗಡಿ ಗ್ರಾಮವನ್ನು ಮುಂದಿನ 6 ತಿಂಗಳಲ್ಲಿ ಹನೂರು ತಾಲೂಕಿನ ಡಿ.ಎಂ.ಸಮುದ್ರದ ಬಳಿಯಿರುವ ಮೀಸಲು ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದ್ದು ಅನುದಾನದ ಕೊರತೆಯಿಂದ ವಿಳಂಬವಾಗಿತ್ತು. ಇದಕ್ಕೆ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

– ಉಮೇಶ್ ವಿ.ಕತ್ತಿ, ಅರಣ್ಯ ಸಚಿವರು.



ಗುಂಡ್ಲುಪೇಟೆ, ಏ.7– ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಲಾಗುವುದು ಎಂದು ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಉಮೇಶ್ ವಿ.ಕತ್ತಿ ಭರವಸೆ ನೀಡಿದರು.

ತಾಲೂಕಿನ ಬಂಡಿಪುರದಲ್ಲಿ ಹುಲಿ ಸಂರಕ್ಷಿತಾರಣ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಡೀಪುರ ಅರಣ್ಯದಲ್ಲಿ ಅಭಿವೃದ್ಧಿ ಕೆಲಸಗಳಾದ ಚೆಕ್ ಡ್ಯಾಂ ನಿರ್ಮಾಣ, ಲಾಂಟಾನ ತೆರವು ಸೇರಿದಂತೆ ಇತರೆ ಕಾರ್ಯಗಳು ಪ್ರಗತಿಯಲ್ಲಿವೆ. ಇವುಗಳನ್ನು ಪರಿಶೀಲಿಸಿದ್ದೇನೆ. ಕೊರೊನಾ ಇದ್ದ ಕಾರಣ ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತಾರಣ್ಯದ ಬೂದಿಪಡಗದಲ್ಲಿ ಆನೆ ಶಿಬಿರ ನಿರ್ಮಾಣಕ್ಕೆ ಸಾಧ್ಯವಾಗಲಿಲ್ಲ. ಆನೆ ಶಿಬಿರ ಬಜೆಟ್‌ನಲ್ಲಿ ಘೋಷಣೆ ಆಗಿರುವುದರಿಂದ ಮುಂದಿನ ದಿನಗಳಲ್ಲಿ ಸ್ಥಾಪನೆಯಾಗಲಿದೆ ಎಂದು ಸಚಿವರು ತಿಳಿಸಿದರು.

ನಾನು ಆಹಾರ ಇಲಾಖೆ ಸಚಿವನಾದ ನಂತರ ಆದಾಯ ತೆರಿಗೆ ಪಾವತಿಸುವ ಹಾಗೂ ಸರ್ಕಾರಿ ನೌಕರರು ಸೇರಿದಂತೆ 13 ಲಕ್ಷ ಅಕ್ರಮ ಪಡಿತರ ಕಾರ್ಡ್ ರದ್ದು ಮಾಡಲಾಗಿದೆ. ಅಕ್ರಮವಾಗಿ ಪಡಿತರ ಕಾರ್ಡ್ ಪಡೆದಿದ್ದ 22 ಸಾವಿರ ಸರ್ಕಾರಿ ನೌಕರರ ಮೇಲೆ ಯಾವುದೇ ಕ್ರಮಕೈಗೊಳ್ಳುವುದಿಲ್ಲ. ಆದರೆ ಅವರಿಂದ ದಂಡ ವಸೂಲಿ ಮಾಡಲಾಗಿದೆ. ಹೊಸದಾಗಿ 4 ಲಕ್ಷ ಅರ್ಜಿಗಳು ಬಂದಿದ್ದು ಪರಿಶೀಲಿಸಲಾಗುತ್ತಿದೆ ಎಂದರು.

ನಂತರ ಸಚಿವರು ರಾಂಪುರ ಆನೆ ಶಿಬಿರಕ್ಕೆ ತೆರಳಿ ಪರಿಶೀಲಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮಲ್ಲೇಶಪ್ಪ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಕಾ.ರಾಮೇಶ್ವರಪ್ಪ, ಬಂಡೀಪುರ ಹುಲಿ ಸಂರಕ್ಷಿತಾರಣ್ಯದ ನಿರ್ದೇಶಕ ರಮೇಶ್ ಕುಮಾರ್, ಎಸಿಎಫ್ ಕೆ.ಪರಮೇಶ್, ಡಿಸಿಎಫ್ ಮಾಲತಿ ಪ್ರಿಯಾ ಇತರರು ಇದ್ದರು.

ಕಾಡಾನೆ ಹಾವಳಿ ತಡೆಯಲು ಸ್ಟೀಲ್ ರೋಪ್

ಗುಂಡ್ಲುಪೇಟೆ, ಏ.7(ಸೋಮ್.ಜಿ)– ಕಾಡಂಚಿನ ಗ್ರಾಮಗಳಲ್ಲಿ ಆನೆಗಳ ಹಾವಳಿ ತಡೆಗಟ್ಟಲು ರೈಲ್ವೇ ಕಂಬಿ ಅಳವಡಿಕೆ ಮುಖ್ಯವಾಗಿದೆ. ಆದರೆ ಕಂಬಿಗಳ ಲಭ್ಯತೆಯಿಲ್ಲದೆ ವಿಳಂಬವಾಗುತ್ತಿದೆ. ತಮಿಳುನಾಡು ಮಾದರಿಯಲ್ಲಿ ಸ್ಟೀಲ್ ರೋಪ್ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಅರಣ್ಯ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಉಮೇಶ್ ಕತ್ತಿ ಹೇಳಿದರು.

ಸಂರಕ್ಷಿತಾರಣ್ಯಗಳ ವ್ಯಾಪ್ತಿಯಲ್ಲಿ 600ಕಿ.ಮೀ. ರೈಲ್ವೆ ಕಂಬಿಗಳ ತಡೆಗೋಡೆ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಈಗಾಗಲೇ 180 ಕಿ.ಮೀ. ನಿರ್ಮಾಣವಾಗಿದೆ. ಕಂಬಿಗಳ ತಡೆಗೋಡೆ ಕಟ್ಟಲು ರೈಲು ಕಂಬಿಗಳು ಸಿಗುತ್ತಿಲ್ಲ. ಅಲ್ಲದೆ, ಅದು ದುಬಾರಿಯಾಗಿದೆ. 1ಕಿ.ಮೀ. ರೈಲ್ವೆ ಕಂಬಿಗಳ ತಡೆಗೋಡೆ ನಿರ್ಮಾಣಕ್ಕೆ ಒಂದೂವರೆ ಕೋಟಿ ರೂ. ವೆಚ್ಚವಾಗಲಿದೆ. ಆದರೆ, 1 ಕಿ.ಮೀ. ರೋಪ್ ವೇ ಬೇಲಿಯನ್ನು 50 ಲಕ್ಷ ವೆಚ್ಚದಲ್ಲಿ ನಿರ್ಮಿಸಬಹುದು. ಆದ್ದರಿಂದ ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿದೆ ಎಂದರು.

ಇಂದು ಶ್ರೀ ಮಂಟೇಸ್ವಾಮಿ ಕೊಂಡೋತ್ಸವ




ಚಾಮರಾಜನಗರ, ಏ.7(ಎಸ್‌ಎಸ್)– ನಗರದ ಉಪ್ಪಾರ ಸಮಾಜದಿಂದ ಏ.8 ರಂದು ಶುಕ್ರವಾರ ಶ್ರೀಮಂಟೇಸ್ವಾಮಿ ಕೊಂಡೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಂಡೋತ್ಸವ ಅಂಗವಾಗಿ ನಗರದ ಸಂತೇಮರಳ್ಳಿ ವೃತ್ತ, ಶ್ರೀಮಂಟೇಸ್ವಾಮಿ ದೇವಾಲಯ ಹಾಗೂ ಉಪ್ಪಾರ ಸಮುದಾಯದ ಬೀದಿಗಳು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿದ್ದು, ದೇವಾಲಯದ ಮುಂಭಾಗ ಮಧ್ಯಾಹ್ನ ಕೊಂಡೋತ್ಸವ ಜರುಗಲಿದೆ. ಇದಕ್ಕೂ ಮುನ್ನ ಶ್ರೀಕೊಳದ ಗಣಪತಿ ದೇವಸ್ಥಾನದ ಮುಂಭಾಗದಿಂದ ಕೊಂಡೋತ್ಸವದವರೆಗೆ ಕಂಡಾಯಗಳು, ಸತ್ತಿಗೆ–ಸೂರಪಾನಿಯ ಮೆರವಣಿಗೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ನಡೆಯಲಿದೆ.


ಕೋವಿಡ್ ಹಾಗೂ ಇತರೆ ಕಾರಣಗಳಿಂದ ಕಳೆದ 4 ವರ್ಷಗಳಿಂದ ಕೊಂಡೋತ್ಸವ ನಡೆ ದಿರಲಿಲ್ಲ. ಈ ಬಾರಿ ಅದ್ಧೂರಿಯಾಗಿ ನಡೆಸಲು ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಮಹದೇವಮ್ಮ ನಿಧನ



ಚಾಮರಾಜನಗರ, ಏ.7– ನಗರದ ಸ್ವಾಮಿ ಲೇಔಟ್ ನಿವಾಸಿ ಹಾಗೂ ನಿವೃತ್ತ ರೇಷ್ಮೆ ಅಧಿಕಾರಿ ರಾಜು ಅವರ ಧರ್ಮಪತ್ನಿ ಮಹದೇವಮ್ಮ(60) ಗುರುವಾರ ನಿಧನರಾದರು. ಮೃತರು ಪುತ್ರ ಅರಿಕೊಠಾರ ಪತ್ರಿಕೆ ಸಂಪಾದಕ ಸತೀಶ್, ಇಬ್ಬರು ಪುತ್ರಿ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕರಿಯನ ಕಟ್ಟೆಯಲ್ಲಿ ಶುಕ್ರವಾರ ನೆರವೇರಿಸಲಾಗುವುದು ಎಂದು ಕುಟುಂಬ ಮೂಲ ತಿಳಿಸಿದೆ.

ನಾಗಮ್ಮ ನಿಧನ



ಚಾಮರಾಜನಗರ, ಏ.7– ಕರವೇ ಪ್ರವೀಣ್‌ಶೆಟ್ಟಿ ಬಣ ಜಿಲ್ಲಾ ಘಟಕದ ಉಪಾಧ್ಯಕ್ಷ ವಿ.ರಮೇಶ್ ಅವರ ತಾಯಿ ನಾಗಮ್ಮ(55) ಗುರುವಾರ ನಿಧನರಾದರು. ಮೃತರು ಪತಿ ವೆಂಕಟಯ್ಯ, ಮಗ ರಮೇಶ್ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಗುಂಡ್ಲುಪೇಟೆ ತಾಲೂಕಿನ ಮಲ್ಲಯ್ಯನಪುರ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಚೆಂಡುಮಲ್ಲಿಗೆ ಸಂಸ್ಕರಣಾ ಘಟಕ ತೆರವಿಗೆ ಮನವಿ



ಗುಂಡ್ಲುಪೇಟೆ, ಏ.7(ಸೋಮ್.ಜಿ)– ಬಂಡೀಪುರ ಹುಲಿ ಯೋಜನೆಯ ಬಫರ್ ವಲಯದಲ್ಲಿರುವ ಚೆಂಡುಮಲ್ಲಿಗೆ ಸಂಸ್ಕರಣಾ ಘಟಕದಿಂದ ದುರ್ವಾಸನೆ ಬರುತ್ತಿದ್ದು ಜನತೆ ಹಾಗೂ ವನ್ಯಜೀವಿಗಳಿಗೆ ತೊಂದರೆಯಾಗುತ್ತಿದೆ. ಹಾಗಾಗಿ, ಇದನ್ನು ತೆರವುಗೊಳಿಸಬೇಕು ಎಂದು ಸಚಿವರಿಗೆ ರೈತರು ಮನವಿ ಮಾಡಿದರು.

ರೈತ ಮುಖಂಡ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಸಚಿವರನ್ನು ಭೇಟಿ ಮಾಡಿದ ರೈತರು, ಚೆಂಡುಮಲ್ಲಿಗೆ ಸಂಸ್ಕರಣಾ ಘಟಕದಿಂದ ರೈತರಿಗೆ ಅನಾನುಕೂಲವಾಗುತ್ತಿದೆ. ಈ ಭಾಗದ ರೈತರಿಗೆ ಅನುಕೂಲವಾಗುವ ಅರಿಶಿನ ಸಂಸ್ಕರಣೆಗೆ ಅವಕಾಶವಿದ್ದರೂ ಮಾಡದೆ ಪರಿಸರಕ್ಕೆ ಹಾನಿಯುಂಟು ಮಾಡುತ್ತಿದ್ದಾರೆ. ಆದ್ದರಿಂದ ಇದನ್ನು ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ಈ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮಕೈಗೊಳ್ಳುವಂತೆ ಹುಲಿಯೋಜನೆಯ ನಿರ್ದೇಶಕ ರಮೇಶ್ ಕುಮಾರ್ ಅವರಿಗೆ ಸಚಿವರು ಸೂಚಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಡಾ.ಗುರುಪ್ರಸಾದ್, ಕಡಬೂರು ಮಂಜುನಾಥ್, ಕುಂದಕೆರೆ ಸಂಪತ್ತು, ಮಾಡ್ರಹಳ್ಳಿ ಮಹದೇವಪ್ಪ, ಹಾಲಹಳ್ಳಿ ಮಹೇಶ್, ಎಸಿಎಫ್ ನವೀನ್ ಕುಮಾರ್, ಮಲ್ಲೇಶಪ್ಪ ಇತರರು ಇದ್ದರು.

ಒಂದನೇ ಪುಟದಿಂದ

ಶಂಕುಸ್ಥಾಪನೆ; 5 ಕೋಟಿ ನೆರವು



'ಶಕ್ತಿಧಾಮ' ಸಂಸ್ಥೆಯ ಮಕ್ಕಳು ನಾಡಗೀತೆ ಹಾಗೂ ಪುನೀತ್ ರಾಜ್‌ಕುಮಾರ್ ಅಭಿನಯದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

ರೂಗಳನ್ನು ಮೀಸಲಿಟ್ಟು, ವಿವಿಧ ಕಾರ್ಯಕ್ರಮಗಳ ರೂಪಿಸಲಾಗಿದೆ. ಇದಕ್ಕೆ ಪೂರಕವಾಗಿ ಮಾನವ ಸಂಪನ್ಮೂಲ ಅಭಿವೃದ್ಧಿಗೆ 'ಶಕ್ತಿಧಾಮ' ಒತ್ತಾಸೆಯಾಗಿದೆ. ಈ ಸಂಸ್ಥೆಯ ಯಶಸ್ಸಿನೊಂದಿಗೆ ಇಂತಹ ಹಲವು ಸಂಸ್ಥೆಗಳು ಹುಟ್ಟಲಿ ಎಂದು ಆಶಿಸಿದರು.

ಸ್ತ್ರೀ ಶೋಷಣೆಗೆ ವಿಷಾದ: ಈ ಕೇಂದ್ರಕ್ಕೆ 'ಶಕ್ತಿಧಾಮ' ಎಂಬ ಹೆಸರು ಸೂಕ್ತವಾಗಿದೆ. ಸ್ತ್ರೀ ಎಂದರೆ ಶಕ್ತಿ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷನೇ ಹೆಚ್ಚು ಶಕ್ತಿಶಾಲಿ ಎನ್ನುವ ಧಿದಿ. ಆದರೆ 9 ತಿಂಗಳು ಮಗುವನ್ನು ಹೊರುವ ಶಕ್ತಿ ಮಹಿಳೆಗಷ್ಟೇ ಇದೆ. ತಾಯಿಯದ್ದು ಮಾತ್ರ ಜನ್ಮಪೂರ್ವ ಸಂಬಂಧ. ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿ, ಸಂಬಂಧಿ, ಗುರು ಹೀಗೆ ಉಳಿದೆಲ್ಲಾ ಸಂಬಂಧಗಳು ಬೆಸೆದುಕೊಳ್ಳುವುದು ಜನ್ಮದ ನಂತರವೇ. ಆದರೆ ನಾವು ಭೂಮಿಗೆ ಬರಲು ಕಾರಣವಾದ ಸ್ತ್ರೀಶಕ್ತಿಯನ್ನೇ ಶೋಷಿಸುತ್ತಿರುವುದು ದುರ್ದೈವ ಹಾಗೂ ವಿಪರ್ಯಾಸ. ಅನಾದಿ ಕಾಲದಿಂದಲೂ ಸ್ತ್ರೀ ಶೋಷಣೆ ನಡೆದು ಬಂದಿದೆ. ಬದುಕಿನಲ್ಲಿ ಅಂತಃಕರಣವನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆ ಮೂಡುತ್ತದೆ. ಹೀಗೆ ಅಂತಃಕರಣದ ಕರುಳಬಳ್ಳಿ ಕಳೆದುಕೊಂಡ ಬಹಳಷ್ಟು ಮಕ್ಕಳು ಅನಾಥರಾಗಿ ಶೋಷಣೆಗೊಳಗಾಗಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ತಾಯಿ ಕರುಳಿನ ಫಲ: ಒಂದು ಕಡೆ ಎಲ್ಲವೂ ಸೃಷ್ಟಿಕರ್ತನ ಪರೀಕ್ಷೆ ಅನ್ನಿಸುತ್ತದೆ. ಈ ಪರೀಕ್ಷೆಯಲ್ಲಿ ಐಎಎಸ್ ಅಧಿಕಾರಿಯಾಗಿದ್ದ ಕೆಂಪಯ್ಯ ಹಾಗೂ ಸಮಾನ ಮನಸ್ಕರು ಯಶಸ್ವಿಯಾಗಿದ್ದಾರೆ. ವೃತ್ತಿಯಲ್ಲಿನ ಸನ್ನಿವೇಶಗಳಿಂದ ಪೊಲೀಸರು ಕಠಿಣ ಹೃದಯಿಗಳಾಗುವುದು ಸಹಜ. ಆದರೆ ಅವರಿಗೂ ಭಾವನೆಗಳಿರುತ್ತವೆ. ಹೀಗೆ ತಾಯಿ ಕರುಳಿನ ಕೆಂಪಯ್ಯ ನೊಂದ ಹೆಣ್ಣುಮಕ್ಕಳ ಕಂಡು ಮರುಗಿ ಸುಮ್ಮನಾಗಲಿಲ್ಲ. ಶೋಷಿತ, ಅನಾಥ ಹೆಣ್ಣು ಮಕ್ಕಳಿಗೆ ಆಶ್ರಯ ಕಲ್ಪಿಸುವ ಚಿಂತನೆಯನ್ನು ಡಾ.ರಾಜ್‌ಕುಮಾರ್ ಎಂಬ ಶಕ್ತಿ ಎದುರು ನಿವೇದಿಸಿಕೊಂಡರು. ಜೊತೆಯಲ್ಲಿದ್ದ ಮಾತೃ ಪಾರ್ವತಮ್ಮ ರಾಜ್‌ಕುಮಾರ್ ಮನಸ್ಸು ಮಿಡಿಯಿತು. ಆ ಎರಡೂ ಶಕ್ತಿಗಳೂ ಕೆಂಪಯ್ಯ ಅವರ ಅಂತಃಕರಣಕ್ಕೆ ಒತ್ತಾಸೆಯಾಗಿದ್ದರಿಂದ 'ಶಕ್ತಿಧಾಮ' ಸಂಸ್ಥೆ ಹುಟ್ಟಿ, ಬೆಳೆದಿದೆ. ಸದ್ಯ ಗೀತಾ ಹಾಗೂ ಶಿವರಾಜ್‌ಕುಮಾರ್ ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ ಎಂದು ಬಣ್ಣಿಸಿದರು.

ಅನಾಥಪ್ರಜ್ಞೆಯಿಂದ: ಸುತ್ತೂರು ಶ್ರೀಗಳ ಆಶೀರ್ವಾದದೊಂದಿಗೆ ಆರಂಭವಾದ 'ಶಕ್ತಿಧಾಮ' ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುತ್ತಿದೆ. ನೊಂದ ಮಕ್ಕಳಿಗೆ ಆತ್ಮ ವಿಶ್ವಾಸ ತುಂಬುತ್ತಿರುವುದು ಬಹಳ ದೊಡ್ಡ ಸೇವೆ. ದೇವರನ್ನು ಎಲ್ಲೋ ಹುಡುಕಬೇಕಿಲ್ಲ. ಮಕ್ಕಳೇ ದೇವರು. ಅನೇಕ ಕಾರಣಗಳಿಂದ ಪೋಷಕರಿಂದ ದೂರವಾಗಿರುವ ಮಕ್ಕಳನ್ನು ಅನಾಥರೆನ್ನಬೇಡಿ. ಇವರನ್ನು ದೇವರ ಮಕ್ಕಳೆಂದು ಕರೆಯಿರಿ. ಹಿಂದೆ ಡಾ.ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್, ಈಗ ಶಿವರಾಜ್‌ಕುಮಾರ್ ಹಾಗೂ ಗೀತಾ ಶಿವರಾಜ್‌ಕುಮಾರ್ ತಂದೆ-ತಾಯಿಯಾಗಿ ಸಿಕ್ಕಿರುವುದು ಈ ಮಕ್ಕಳ ಪುಣ್ಯ. ಇಂತಹ ಹಲವು ಮಕ್ಕಳಿಗೆ ಸಹಾಯ ಮಾಡಿದ್ದ ನಮ್ಮ ಅಪ್ಪು, ಪುನೀತ್, 'ಶಕ್ತಿಧಾಮ'ಕ್ಕೆ ಸದಾ ಶಕ್ತಿ ತುಂಬುತ್ತಾರೆ ಎಂದರು.

ಬದುಕಿನ ಬ್ಯಾಲೆನ್ಸ್: ಸರ್ಕಾರ ಹಾಗೂ ಸಮಾಜ ಶೋಷಿತರು, ದುರ್ಬಲರನ್ನು ಮೇಲೆತ್ತಿ ಮುನ್ನಡೆಸಬೇಕು. ಸಾಮಾಜಿಕ ನ್ಯಾಯ ಎನ್ನುವುದು ರಾಜಕಾರಣ ಹಾಗೂ ಮಾತಿಗಷ್ಟೇ ಸೀಮಿತವಾಗಬಾರದು. ತಾಯಿ-ತಂದೆ, ಬಂಧುಗಳು, ಗುರುಗಳು ಹೀಗೆ ಹಲವರ ಸಹಾಯ, ಸಹಕಾರ, ಮಾರ್ಗದರ್ಶನದಿಂದ ಉತ್ತಮ ಜೀವನ ಕಟ್ಟಿಕೊಳ್ಳುವ ನಾವು, ಅದೆಲ್ಲವನ್ನೂ ಪ್ರೀತಿ, ವಿಶ್ವಾಸ, ವಾತ್ಸಲ್ಯ ಸಹಿತವಾಗಿ ಸಮಾಜಕ್ಕೆ ಹಿಮ್ಮರಳಿಸಿದಾಗ ಮಾತ್ರ ಬದುಕಿನ ಬ್ಯಾಲೆನ್ಸ್ ಶೀಟ್ ಸರಿಯಾಗುತ್ತದೆ. ಅಪ್ಪು ಇದಕ್ಕೆ ಉದಾಹರಣೆ. ನಾನು ಕಲಿತ ಶಿಕ್ಷಣ ಸಂಸ್ಥೆಯ ಮೊದಲ ಮಹಿಳಾ ಇಂಜಿನಿಯರ್ ಸುಧಾಮೂರ್ತಿಯವರೂ ಹಲವು ಸಂಸ್ಥೆಗಳಿಗೆ ನೆರವಾಗಿದ್ದಾರೆ. ಅವರ ಪತಿ ನಾರಾಯಣಮೂರ್ತಿ ಮೈಸೂರಿನವರಾಗಿ ರುವ ಕಾರಣ ಈ ಊರಿನ ಬಗ್ಗೆ ವಿಶೇಷ ಪ್ರೀತಿ ಇದೆ ಎಂದು ಅವರ ಸೇವೆಯನ್ನು ಶ್ಲಾಘಿಸಿದರು.

ಅಂತಃಕರಣದ ಬಜೆಟ್: ನಮ್ಮ ಸರ್ಕಾರ ಅಂತಃಕರಣದ ಸೂಕ್ಷ್ಮತೆಯ ಬಜೆಟ್ ನೀಡಿದೆ. ದೊಡ್ಡ ಯೋಜನೆಗಳು ಮಾತ್ರವಲ್ಲ, ವೃದ್ಧರ ಆರೋಗ್ಯ ಸೇವೆ, ಕಣ್ಣಿನ ಶಸ್ತ್ರಚಿಕಿತ್ಸೆ, ಕ್ಯಾನ್ಸರ್ ರೋಗಿಗಳಿಗೆ, ಕಿಡ್ನಿ ವೈಫಲ್ಯಕ್ಕೆ ಡಯಾಲಿಸಿಸ್, ಆಸಿಡ್ ದಾಳಿಗೊಳಗಾದ ಹೆಣ್ಣುಮಕ್ಕಳ ಮಾಸಾಶನ 3ರಿಂದ 10 ಸಾವಿರಕ್ಕೆ ಹೆಚ್ಚಳ, ತೃತೀಯ ಲಿಂಗಿಗಳಿಗೆ ಆಶ್ರಯ ಮನೆ ಯೋಜನೆಯಲ್ಲಿ ಮೀಸಲಾತಿ, ಮಕ್ಕಳ ಆರೋಗ್ಯಕ್ಕೆ ಆದ್ಯತೆ, ಹೀಗೆ ಅಂತಃಕರಣದ ನೆಲೆಗಟ್ಟಿನಲ್ಲಿ ಹಲವು ಕಾರ್ಯಕ್ರಮ ರೂಪಿಸಲಾಗಿದೆ. ಮೈಸೂರಿನ ಕೆ.ಆರ್. ಆಸ್ಪತ್ರೆ ನವೀಕರಣಕ್ಕೆ 85 ಕೋಟಿ ರೂ., ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆಗೆ ಭೂಸ್ವಾಧೀನಕ್ಕೆ 185 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ ಎಂದು ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಎಸ್.ಎ.ರಾಮದಾಸ್ ಮಾತನಾಡಿ, ಸಂಸ್ಥೆಯ ಸೇವೆಯನ್ನು ಬಣ್ಣಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ ಸಿಂಹ, ಎಲ್.ನಾಗೇಂದ್ರ, ಸಿ.ಎಸ್.ನಿರಂಜನಕುಮಾರ್, ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಇನ್ಫೋಸಿಸ್ ಕಾರ್ಯನಿರ್ವಾಹಕ ಉಪಾಧ್ಯಕ್ಷ ಷಾಜಿ ಮ್ಯಾಥ್ಯೂ, ಶಕ್ತಿಧಾಮದ ಅಧ್ಯಕ್ಷೆ ಗೀತಾ ಶಿವರಾಜ್ ಕುಮಾರ್, ಉಪಾಧ್ಯಕ್ಷ ಕೆಂಪಯ್ಯ, ಟ್ರಸ್ಟಿ ಜಿ.ಎಸ್.ಜಯದೇವ, ನಟ ಶಿವರಾಜ್‌ಕುಮಾರ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಕಾಡಾ ಅಧ್ಯಕ್ಷ ಎನ್.ಶಿವಲಿಂಗಯ್ಯ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಅಧ್ಯಕ್ಷ ಕೃಷ್ಣಪ್ಪಗೌಡ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತಕುಮಾರ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಡಿಸಿ ಡಾ.ಬಗಾದಿ ಗೌತಮ್, ನಟ ಸಾಧು ಕೋಕಿಲಾ ಸೇರಿದಂತೆ ಹಲವು ಗಣ್ಯರು, ಡಾ.ರಾಜ್ ಕುಟುಂಬದವರು, ಕಲಾವಿದರು ಸಮಾರಂಭದಲ್ಲಿದ್ದರು.

ಮುಂದಿನ ಶೈಕ್ಷಣಿಕ ವರ್ಷದಲ್ಲೇ ಶಕ್ತಿಧಾಮ ವಿದ್ಯಾಶಾಲಾ ಆರಂಭ

ಮೈಸೂರು: ಮುಂಬರುವ ಶೈಕ್ಷಣಿಕ ವರ್ಷದಿಂದಲೇ ಶಕ್ತಿಧಾಮ ವಿದ್ಯಾಶಾಲಾ ಕಾರ್ಯಾರಂಭಿಸಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಗೀತಾ ಶಿವರಾಜ್‌ಕುಮಾರ್ ತಿಳಿಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಶಕ್ತಿಧಾಮಕ್ಕೆ ನೀಡಿದ್ದ 5 ಕೋಟಿ ರೂ. ಅನುದಾನ ಬಳಸಿಕೊಂಡು ಕೌಶಲ್ಯ ಭವನವನ್ನು ನಿರ್ಮಾಣ ಮಾಡಲಾಗಿದೆ. ಸದ್ಯ ಈ ಕಟ್ಟಡದಲ್ಲೇ ಪ್ರಸಕ್ತ ವರ್ಷದ ಜೂನ್ ತಿಂಗಳಿಂದಲೇ ಶಾಲೆ ಆರಂಭಿಸಿ, ಹೊಸ ಕಟ್ಟಡ ನಿರ್ಮಾಣವಾದ ಬಳಿಕ ಅಲ್ಲಿಗೆ ಸ್ಥಳಾಂತರಿಸಲಾಗುವುದು ಎಂದರು.

ಪಾರ್ವತಮ್ಮ ರಾಜ್‌ಕುಮಾರ್ ಅವರು ಕಾಲವಾದ ನಂತರ ನನ್ನನ್ನು ಶಕ್ತಿಧಾಮದ ಟ್ರಸ್ಟಿ ಮಾಡಿಕೊಂಡರು. ನಂತರ ನಿಜವಾಗಿ ಕೆಂಪಯ್ಯ ಅವರು ಅಧ್ಯಕ್ಷರಾಗಬೇಕಿತ್ತು. ಆದರೆ ಅವರು ನನ್ನನ್ನೇ ಅಧ್ಯಕ್ಷೆಯಾಗುವಂತೆ ತಿಳಿಸಿದರು. ಈ ಸ್ಥಾನಕ್ಕೆ ನಾನೆಷ್ಟು ಅರ್ಹಳೆಂದು ಗೊತ್ತಿಲ್ಲ. ಆದರೆ ಸಂಸ್ಥೆಯ ಎಲ್ಲರ ಮಾರ್ಗದರ್ಶನ ಹಾಗೂ ಸಹಕಾರದಿಂದ ಮುಂದುವರೆಯುತ್ತಿದ್ದೇನೆ ಎಂದು ತಿಳಿಸಿದರು. ಸಂಕೋಚದಿಂದಲೇ ಮಾತನಾಡಿದ ಗೀತಾ ಶಿವರಾಜ್‌ಕುಮಾರ್, ಸಂಸ್ಥೆಗೆ ನೆರವಾದವರನ್ನು ಸ್ಮರಿಸಿಕೊಂಡರು. ಆದರೆ ಈ ವೇಳೆ ಇನ್‌ಫೋಸಿಸ್ ಫೌಂಡೇಷನ್‌ನ ಸುಧಾಮೂರ್ತಿ ಅವರ ಹೆಸರೇಳುವುದನ್ನು ಮರೆತರು. ಈ ಬಗ್ಗೆ ಸುತ್ತೂರು ಶ್ರೀಗಳು ಪಕ್ಕದಲ್ಲಿದ್ದ ಶಿವರಾಜ್‌ಕುಮಾರ್ ಅವರಿಗೆ ತಿಳಿಸಿದರು. ಅವರು ಗೀತಾ ಅವರಿಗೆ ತಿಳಿಸಿದಾಗ ಗಾಬರಿಯಿಂದ ಮತ್ತೆ ಮೈಕ್ ಬಳಿ ತೆರಳಿ ಸುಧಾಮೂರ್ತಿಯವರ ನೆರವನ್ನು ಸ್ಮರಿಸಿಕೊಂಡು, ಧನ್ಯವಾದ ತಿಳಿಸಿದರು.

> 'ಅಪ್ಪು ಅಗಲಿದ ನಂತರ ನಾನು ಇಲ್ಲಿಗೆ ಹೆಚ್ಚಾಗಿ ಬರುತ್ತಿದ್ದೇನೆ. ಅಪ್ಪು ನೆನಪಾದಾಗಲೆಲ್ಲಾ ಇಲ್ಲಿಗೆ ಬರುತ್ತೇನೆ. ಈ ಮಕ್ಕಳ ಹಾಗೂ ಅಭಿಮಾನಿಗಳ ಮುಖದಲ್ಲಿ ನನ್ನ ತಮ್ಮನನ್ನು ಕಾಣುತ್ತೇನೆ. ಈ ಮಕ್ಕಳು ನನ್ನನ್ನು ಅಣ್ಣ, ಡ್ಯಾಡಿ ಎಂದು ಕರೆಯುತ್ತಾರೆ. ಅಪ್ಪು ಹಾಡು ಹೇಳುತ್ತಾರೆ. ನನ್ನಿಂದಲೂ ಹಾಡಿಸುತ್ತಾರೆ. ಇಲ್ಲಿಗೆ ಬಂದರೆ ನನಗೆ ಏನೋ ಸಮಾಧಾನ. ನನ್ನ ಉಸಿರು ಇರುವವರೆಗೂ ನಾನು ನಿಮ್ಮ ಜೊತೆಗಿರುತ್ತೇನೆ. ಗೀತಾ ಏನೇ ಮಾಡಿದರೂ ಅವಳಿಗೆ ಶಕ್ತಿ ತುಂಬುತ್ತೇನೆ. ಬಸವರಾಜ್ ಬೊಮ್ಮಾಯಿ ಅವರು ಎಂದೂ ಮುಖ್ಯಮಂತ್ರಿ ರೀತಿ ವರ್ತಿಸಲಿಲ್ಲ. ಇವರೊಬ್ಬ ಕಾಮನ್ ಮ್ಯಾನ್. ಹಾಗಂತ ನಾನು ಬೇರೆ ಸಿಎಂಗಳನ್ನು ದೂಷಣೆ ಮಾಡುತ್ತಿಲ್ಲ. ಬಸವರಾಜ ಬೊಮ್ಮಾಯಿ ಅವರು ಅತ್ಯಂತ ಸರಳ. ನಮ್ಮ ಕುಟುಂಬದ ಮೇಲಿಟ್ಟಿರುವ ವಿಶ್ವಾಸವನ್ನು ಮರೆಯೋದಿಲ್ಲ. ಪ್ರೀತಿ, ಭಾವನೆಯನ್ನು ನಾಟಕೀಯವಾಗಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ನಿಜವಾದ ಪ್ರೀತಿಯನ್ನು ಕಂಡಿದ್ದೇನೆ. ಸುತ್ತೂರು ಶ್ರೀಗಳ ಆಶೀರ್ವಾದ, ಸಹಕಾರವನ್ನು ಮರೆಯಲಾಗದು. ಸಂಸ್ಥೆಗೆ ಶಕ್ತಿ ತುಂಬಿದ ಸುಧಾಮೂರ್ತಿಯವರಿಗೆ ಅನಂತ ಧನ್ಯವಾದ. **–ಶಿವರಾಜ್‌ಕುಮಾರ್**

> ಮೈಸೂರು ವಿವಿ ಡಾ.ರಾಜ್‌ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ನೀಡುವಾಗ ಅಭಿಮಾನಿಗಳು ಭಾರೀ ಸಂಖ್ಯೆಯಲ್ಲಿ ಜಮಾಯಿಸುತ್ತಾರೆ ಎಂಬ ಕಾರಣಕ್ಕೆ ಬಯಲು ರಂಗಮಂದಿರದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ನಿರೀಕ್ಷೆಯಂತೆ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲೇ ಆಗಮಿಸಿದ್ದರು. ರಾಜ್ಯಪಾಲರು ರಾಜ್‌ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರಾದರೂ ವೇದಿಕೆಯಲ್ಲಿ ಕೂರುವುದಕ್ಕೂ ಅವಕಾಶವಿರಲಿಲ್ಲ. ಆದರೂ ರಾಜ್‌ಕುಮಾರ್ ಅವರು ಅತ್ಯಂತ ತಾಳ್ಮೆಯಿಂದ ಮುಗ್ಧತೆಯಿಂದಲೇ ಜನರತ್ತ ನೋಡಿ 'ಇದು ನನ್ನದಲ್ಲ. ಇದು ನಿಮ್ಮದು' ಎಂದರು. ಅವರ ಮೌನದ ಸಂದೇಶ ನೂರು ಮಾತುಗಳಿಗೆ ಸಮಾನವಾಗಿತ್ತು. ಹಾಗೆಯೇ ಅಪ್ಪು ನಿಧನರಾದಾಗ ಜನ ತಮ್ಮ ಮನೆಯವರನ್ನು ಕಳೆದುಕೊಂಡಂತೆ ಕಣ್ಣೀರಿಟ್ಟರು. **–ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ**

ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದಲ್ಲಿ ಬೃಹತ್ ಉದ್ಯೋಗ ಮೇಳ: 92 ಕಂಪನಿಗಳು ಭಾಗಿ; 1,171 ಮಂದಿಗೆ ಉದ್ಯೋಗ ಭಾಗ್ಯ

ವರ್ಷದಲ್ಲಿ 2.50 ಲಕ್ಷ ಜನರಿಗೆ ಕೌಶಲ್ಯ ತರಬೇತಿ: ಡಾ. ಅಶ್ವತ್ಥ ನಾರಾಯಣ





ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಗುರುವಾರ ಬೃಹತ್ ಉದ್ಯೋಗ ಮೇಳಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್‌ನಾರಾಯಣ್ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಲ್.ನಾಗೇಂದ್ರ, ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಮೇಯರ್ ಸುನಂದಾ ಪಾಲನೇತ್ರ, ಕರಾಮುವಿ ಕುಲಪತಿ ಡಾ.ವಿದ್ಯಾಶಂಕರ್ ಇನ್ನಿತರರು ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಉದ್ಯೋಗಾಕಾಂಕ್ಷಿಗಳನ್ನು ಕಾಣಬಹುದು.

ಮೈಸೂರು, ಏ.7(ಆರ್‌ಕೆಬಿ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಕೆಎಸ್‌ಒಯು) ಆವರಣದಲ್ಲಿ ಗುರುವಾರ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ 92ಕ್ಕೂ ಹೆಚ್ಚು ವಿವಿಧ ಕಂಪನಿಗಳು ಪಾಲ್ಗೊಂಡಿದ್ದು, 5036 ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ಈ ಪೈಕಿ 1,171 ಮಂದಿಗೆ ಸ್ಥಳದಲ್ಲೇ ಉದ್ಯೋಗ ಪತ್ರ ವಿತರಿಸಲಾಯಿತು.

ಮುಕ್ತ ವಿವಿ ಆವರಣ ಇಂದು ಪೂರ್ಣ ಉದ್ಯೋಗಾಕಾಂಕ್ಷಿಗಳಿಂದಲೇ ತುಂಬಿ ತುಳುಕಿತ್ತು. ಉದ್ಯೋಗ ಅರಸಿ ಬಂದಿದ್ದ ಅಭ್ಯರ್ಥಿಗಳು ತಮಗಿಷ್ಟವಾದ ಕಂಪನಿಗಳಲ್ಲಿ ಹೆಸರು ನೋಂದಾಯಿಸಿಕೊಂಡು ಸ್ಥಳದಲ್ಲಿಯೇ ಸಂದರ್ಶನವನ್ನು ಎದುರಿಸಿದರು. ಈ ಪೈಕಿ 1,171 ಮಂದಿ ಉದ್ಯೋಗ ಪತ್ರದೊಂದಿಗೆ ಹಿಂತಿರುಗಿದರು.

ಇಂಡಿಯನ್ ಆರ್ಮಿ, ಪ್ಯಾಲೇಸ್ ಹೋಂಡಾ, ಅಪೊಲೊ ಹೋಮ್ ಹೆಲ್ತ್‌ಕೇರ್, ಟಿವಿಎಸ್ ಮೋಟಾರ್ಸ್, ಟೊಯೊಟಾ ಕಿರ್ಲೋಸ್ಕರ್, ಎಲ್‌ಐಸಿ, ವಿಪ್ರೋ ಜಿಇ, ಕೋಟಾಕ್ ಮಹೀಂದ್ರಾ, ಇಂಡಿಯಾ ಮಾರ್ಟ್, ಸಹಾರಾ, ಎಚ್‌ಡಿಎಫ್‌ಸಿ ಬ್ಯಾಂಕ್, ಏರ್‌ಟೆಲ್, ಸ್ಟಾರ್ ಹೆಲ್ತ್ ಇನ್ಶೂರೆನ್ಸ್, ರಾಣಿ ಮದ್ರಾಸ್, ಜೆ.ಕೆ.ಟೈರ್ಸ್, ಎಜುಕೇಟ್ ಐಟಿಇಎಸ್, ಇನ್‌ಸ್ಪೈರ್ ಹೋಂಡಾ ಇತ್ಯಾದಿ ಕಂಪನಿಗಳು ಅಭ್ಯರ್ಥಿಗಳನ್ನು ಅರಸಿ ಕೌಂಟರ್‌ಗಳನ್ನು ಇಟ್ಟಿದ್ದವು. ಈ ಎಲ್ಲಾ ಕೌಂಟರ್‌ಗಳಲ್ಲೂ ಉದ್ಯೋಗಾಕಾಂಕ್ಷಿಗಳು ಸರತಿಯ ಸಾಲಿನಲ್ಲಿ ನಿಂತು ತಮ್ಮ ಬಯೋಡೇಟಾ ನೀಡಿದರು.

ಸೂಕ್ತ ಉದ್ಯೋಗಾಕಾಂಕ್ಷಿಗಳನ್ನು ಆಯ್ಕೆ ಮಾಡಲು ಕಂಪನಿಗಳು ಅನೇಕ ಕೌಂಟರ್‌ಗಳನ್ನು ತೆರೆದಿದ್ದವು. ಅವರೆಲ್ಲರೂ ಅರ್ಹತೆ, ಕೌಶಲ್ಯ ಮತ್ತು ನಿರೀಕ್ಷಿತ ಉದ್ಯೋಗಿಗಳು ಸಂಪಾದಿಸಿದ ಜ್ಞಾನದ ಆಧಾರದ ಮೇಲೆ ಸ್ಥಳದಲ್ಲೇ ನೋಂದಣಿ ಮಾಡಿಕೊಂಡರು. ಇದನ್ನು ಹೊರತುಪಡಿಸಿ, ಎಲ್ಲಾ ಕಂಪನಿಗಳು ಆನ್‌ಲೈನ್ ನೋಂದಣಿಯನ್ನೂ ನಡೆಸಿದವು.

ಮೈಸೂರು ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (SDEL), ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಜಂಟಿ ಆಶ್ರಯದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು.

ಕೌಶಲ್ಯ ಕೊರತೆ ಗುರ್ತಿಸಿ ಸೂಕ್ತ ತರಬೇತಿ –ಸಚಿವ ಅಶ್ವತ್ಥನಾರಾಯಣ: ಇದಕ್ಕೂ ಮುನ್ನ ಕರಾಮುವಿ ಘಟಿಕೋತ್ಸವ ಸಭಾಂಗಣದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್‌ನಾರಾಯಣ್ ಉದ್ಯೋಗ ಮೇಳವನ್ನು ಉದ್ಘಾಟಿಸಿದರು. ಇದೇ ವೇಳೆ ಅವರು, ಆನ್‌ಲೈನ್ ಆಧಾರಿತ ಕರಾಮುವಿ ರೇಡಿಯೋ ಮತ್ತು ಆಡಿಯೋ– ವೀಡಿಯೋ ಸ್ಟುಡಿಯೋ, ಮುಕ್ತ ವಿವಿ ಆವರಣದಲ್ಲಿ ನವೀಕೃತ ಕಟ್ಟಡವನ್ನು ಸಹ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಉದ್ಯೋಗ ಮಾರುಕಟ್ಟೆಯು ನುರಿತ ಕೆಲಸಗಾರರನ್ನು ಬಯಸುತ್ತದೆ. ವಿದೇಶಿ ನೆಲದಲ್ಲಿಯೂ ಕೌಶಲ್ಯ ಸಂಪನ್ಮೂಲಗಳಿಗೆ ಬೇಡಿಕೆಯಿದೆ. ಕರ್ನಾಟಕದಲ್ಲಿ ಪ್ರತಿ ವರ್ಷ 75,000 ಯುವಕರಿಗೆ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಈ ಸಂಖ್ಯೆಯನ್ನು ಮುಂದೆ 2.5 ಲಕ್ಷಕ್ಕೆ ಹೆಚ್ಚಿಸಲಾಗುವುದು ಎಂದರು.

ಉದ್ಯೋಗ ಮೇಳದಲ್ಲಿ ಆಯ್ಕೆಯಾಗದ ಅಭ್ಯರ್ಥಿಗಳ ಕುರಿತು ಅವರನ್ನು ಏಕೆ ನಿರಾಕರಿಸಲಾಯಿತು ಎಂಬ ಬಗ್ಗೆ ಕಂಪನಿಗಳಿಂದ ಮಾಹಿತಿ ಪಡೆದು ಅವರಿಗೆ ಕೌಶಲ್ಯಗಳ ಕೊರತೆ ಇದ್ದರೆ, ಅಗತ್ಯ ಕೌಶಲ್ಯ ತರಬೇತಿ ನೀಡಿ, ಭವಿಷ್ಯದಲ್ಲಿ ಅವರಿಗೂ ಉದ್ಯೋಗ ಪಡೆಯಲು ಸಹಾಯ ಮಾಡಲಾಗುತ್ತದೆ ಎಂದು ಹೇಳಿದರು. ಕರ್ನಾಟಕವೊಂದರಲ್ಲೇ 1.5 ಲಕ್ಷ ಐಟಿಐ ಸೀಟುಗಳಿದ್ದು, 75 ಸಾವಿರ ಪಾಲಿಟೆಕ್ನಿಕ್ ಸೀಟುಗಳಿವೆ. ಐಟಿಐ, ಪಾಲಿಟೆಕ್ನಿಕ್‌ಗಳಿಗೆ ಉದ್ಯೋಗ ಖಾತ್ರಿ ನೀಡುತ್ತಿದ್ದರೂ ನಿರೀಕ್ಷಿತ ರೀತಿಯಲ್ಲಿ ವಿದ್ಯಾರ್ಥಿಗಳು ಸೇರುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕಕ್ಕೆ ಉಜ್ವಲ ಭವಿಷ್ಯ ಸೃಷ್ಟಿಸಲು ಸರ್ಕಾರವು ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಹೊಸ ಶಿಕ್ಷಣ ನೀತಿಯು ವಿದ್ಯಾರ್ಥಿಗಳಿಗೆ ಗುಣಮಟ್ಟದ ಮತ್ತು ಹೊಂದಿಕೊಳ್ಳುವ ಕಲಿಕೆಯ ಅವಕಾಶಗಳನ್ನು ನೀಡುತ್ತದೆ. ಈ ಮೂಲಕ ಕರ್ನಾಟಕದಲ್ಲಿ ತರಬೇತಿ ಪಡೆದವರಿಗೆ ಉದ್ಯೋಗ ಖಾತ್ರಿ ಇದೆ ಎಂಬಂತೆ ಮಾಡಲಾಗುವುದು. ಒಂದು ವೇಳೆ ಉದ್ಯೋಗ ದೊರಕದಿರುವವರಿಗೆ ನುರಿತ ಉದ್ಯಮಿಗಳಾಗಲು ಅವಕಾಶವಿದೆ ಎಂಬ ಬಗ್ಗೆಯೂ ತರಬೇತಿ ನೀಡಲಾಗುವುದು. ಮುಂದೆ ಅವರು ಉದ್ಯಮಿಗಳಾಗಿ ಒಂದಷ್ಟು ಜನರಿಗೆ ಉದ್ಯೋಗ ನೀಡುವಂತಾಗಲು ಅವಕಾಶವಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಡಾ.ಸುಧಾಕರ ಹೊಸಳ್ಳಿ ಬರೆದ ಪುಸ್ತಕವನ್ನು ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್‌ನಾರಾಯಣ್ ಬಿಡುಗಡೆ ಮಾಡಿದರು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಕರಾಮುವಿ ಕುಲಪತಿ ಡಾ.ವಿದ್ಯಾಶಂಕರ್, ಕಾಡಾ ಅಧ್ಯಕ್ಷ ಎನ್.ಶಿವಲಿಂಗಯ್ಯ, ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಕೃಷ್ಣಪ್ಪ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಮೇಯರ್ ಸುನಂದಾ ಪಾಲನೇತ್ರ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

> ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜಿನ 2ನೇ ಹಂತದ ಕಾಮಗಾರಿ ಆರಂಭಕ್ಕೆ ಸಚಿವರು ಮನಸ್ಸು ಮಾಡಬೇಕು. ಜೊತೆಗೆ ಶತಮಾನದ ಮಹಾರಾಣಿ ಕಾಲೇಜಿಗೆ ಕಾಂಪೌಂಡ್ ನಿರ್ಮಾಣಕ್ಕೆ ನೆರವಾಗಬೇಕು.
> - ಎಲ್.ನಾಗೇಂದ್ರ, ಶಾಸಕ

> ಉದ್ಯೋಗ ಮೇಳದಿಂದ ಯಾರೂ ನಿರಾಶರಾಗಿ ಹೋಗಬಾರದು. ಯಾವ ಕೆಲಸವಾದರೂ ಸಿಗಲಿ ಎಂಬ ಮನೋಭಾವ ಹೊಂದಿರಬೇಕು. ಐದು ಯೋಜನೆಗಳನ್ನು ಪ್ರಧಾನಿ ಮೋದಿ ನೀಡಿದ್ದಾರೆ. ಅದರ ಸದುಪಯೋಗ ಮಾಡಿಕೊಳ್ಳಬೇಕು. ಇಲ್ಲಿ ಕೆಲಸ ಸಿಗದಿದ್ದವರು ಮುಂದೆ ವಾಣಿಜ್ಯೋದ್ಯಮಿಯಾಗಲು ಅವಕಾಶವಿದೆ. ಅದಕ್ಕಾಗಿ ನೋಂದಣಿ ಮಾಡಿಸಿ ತರಬೇತಿ ಪಡೆದುಕೊಳ್ಳಿ. ಎಲ್ಲಾ ಬ್ಯಾಂಕ್‌ನವರ ಸೇರಿಸಿ ಬೃಹತ್ ಸಾಲ ಮೇಳ ಆಯೋಜಿಸುವ ಚಿಂತನೆ ಇದೆ. ನೀವಿರುವಲ್ಲೇ ಸಾಲ ಕೊಡಿಸುವ ಯತ್ನ ಮಾಡಲಾಗುವುದು.
> - ಎಸ್.ಎ.ರಾಮದಾಸ್, ಶಾಸಕ

ಮೈಸೂರು ತಹಸೀಲ್ದಾರ್ ಕೆ.ಆರ್.ರಕ್ಷಿತ್ ವರ್ಗಾವಣೆ

ಬಿ.ಎನ್.ಗಿರೀಶ್ ನೂತನ ತಹಸೀಲ್ದಾರ್




ಕೆ.ಆರ್.ರಕ್ಷಿತ್

ಮೈಸೂರು, ಏ.7(ಆರ್‌ಕೆ)–ಮೈಸೂರು ತಾಲೂಕು ತಹಸೀಲ್ದಾರ್ ಕೆ.ಆರ್.ರಕ್ಷಿತ್ ಅವರನ್ನು ವರ್ಗಾವಣೆ ಮಾಡಲಾಗಿದೆ. ನೂತನ ತಹಸೀಲ್ದಾರ್ ಆಗಿ ಬಿ.ಎನ್.ಗಿರೀಶ್ ಅವರನ್ನು ನಿಯೋಜಿಸಿ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಎಸ್.ರಶ್ಮಿ ಇಂದು ಆದೇಶ ಹೊರಡಿಸಿದ್ದಾರೆ. ರಕ್ಷಿತ್ ಅವರಿಗೆ ಸ್ಥಳ ನಿಯೋಜಿಸದೆ, ಕಂದಾಯ ಇಲಾಖೆ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ಸೂಚಿಸಲಾಗಿದೆ. ದಾವಣಗೆರೆ ತಹಸೀಲ್ದಾರ್ ಆಗಿದ್ದ ಗಿರೀಶ್ ವರ್ಗಾವಣೆಗೊಂಡು ಸ್ಥಳ ನಿರೀಕ್ಷೆಯಲ್ಲಿದ್ದರು. ಇದೀಗ ಸರ್ಕಾರ ಆದೇಶ ಹೊರಡಿಸಿರುವುದರಿಂದ ಅವರು ನಾಳೆ (ಏ.8) ಮೈಸೂರು ತಹಸೀಲ್ದಾರ್ ಆಗಿ ಅಧಿಕಾರ ವಹಿಸಿಕೊಳ್ಳುವರು ಎಂದು ಮೂಲಗಳು ತಿಳಿಸಿವೆ.

ಚಾಮುಂಡಿಬೆಟ್ಟಕ್ಕೆ ರೋಪ್ ವೇ ಪರ-ವಿರೋಧ ಹೇಳಿಕೆ ವಿಚಾರ

ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ: ಸಚಿವ ಎಸ್.ಟಿ.ಸೋಮಶೇಖರ್




ಮೈಸೂರು, ಏ.7(ಆರ್‌ಕೆಬಿ)– ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ವಿಚಾರವಾಗಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಾಗೂ ಇತರರ ಹೇಳಿಕೆಗಳನ್ನು ಗಮನಿಸಿದ್ದೇವೆ ಎಲ್ಲವನ್ನೂ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದಲ್ಲಿ ನಡೆದ ಉದ್ಯೋಗಮೇಳ ಉದ್ಘಾಟನೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಾಮಾನ್ಯವಾಗಿ ಹೊಸ ಅಭಿವೃದ್ಧಿ ಯೋಜನೆಗಳನ್ನು ಘೋಷಣೆ ಮಾಡಿದಾಗ ಪರ–ವಿರೋಧ ಹೇಳಿಕೆ ಸಹಜ. ಅದೇ ರೀತಿ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ವಿಚಾರದಲ್ಲಿಯೂ ಪರ–ವಿರೋಧ ಹೇಳಿಕೆಗಳಿವೆ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನಕ್ಕೆ ತರುವುದಾಗಿ ಹೇಳಿದರು.

ದೇವರಾಜ ಮಾರ್ಕೆಟ್ ವಿಚಾರವನ್ನು ಶಾಸಕ ಎಲ್.ನಾಗೇಂದ್ರ ಅವರು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಸಚಿವ ಸಂಪುಟದ ಬಗ್ಗೆ ಮುಖ್ಯಮಂತ್ರಿ ಉತ್ತರಿಸಲಿದ್ದಾರೆ. ಕೇಂದ್ರ ಸಚಿವ ಅಮಿತ್ ಶಾ ಅವರು ಸಹಕಾರ ಸಚಿವರಾದ ಬಳಿಕ ದೆಹಲಿಯಲ್ಲಿ ಒಂದು ಕಾರ್ಯಕ್ರಮ ನಡೆಸಿದ್ದರು. ನಂತರ ರಾಜ್ಯದಲ್ಲಿ ಮೊದಲ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಹಕಾರ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಿರುವ ರಾಜ್ಯಗಳಲ್ಲಿ ಕರ್ನಾಟಕ 'ಎ' ಗ್ರೇಡ್‌ನಲ್ಲಿದೆ ಎಂದು ಹೇಳಿದ್ದಾರೆ. ಸಹಕಾರ ಇಲಾಖೆಯಿಂದ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಕುರಿತು ಅಧಿಕಾರಿಗಳ ಸಭೆ ನಡೆಸಿ, ನ್ಯೂನತೆಗಳಿದ್ದರೆ ಅದನ್ನು ಸರಿಪಡಿಸಿ ಇನ್ನೂ ಹೆಚ್ಚಿನ ಅನುಕೂಲ ಕಲ್ಪಿಸಲಾಗುವುದು ಎಂದು ತಿಳಿಸಿದರು. ಮೈಸೂರು ಉಸ್ತುವಾರಿ ಸಚಿವರಾಗಿ ನಾವೇ ಇರಬೇಕು ಎಂದೇನೂ ಇಲ್ಲ. ಬಿ.ಎಸ್.ಯಡಿಯೂರಪ್ಪ ಅವರು ಉಸ್ತುವಾರಿ ನೀಡಿದ್ದರು. ನಂತರ ಬಸವರಾಜ್ ಬೊಮ್ಮಾಯಿ ಅವರು ಮುಂದುವರಿಸಿದರು. ಬೇರೆಯವರು ಆದರೆ ಆಗಲಿ, ಸಂತೋಷ. ನಾನೇ ಉಸ್ತುವಾರಿ ಆಗಿರಬೇಕೆಂಬ ಹಠ, ಛಲ ನನಗಿಲ್ಲ ಎಂದು ಸ್ಪಷ್ಟಪಡಿಸಿದರು. ನಗರ ಪಾಲಿಕೆಯ ಬಜೆಟ್ ಕುರಿತು ಪರಾಮರ್ಶಿಸಲಾಗುವುದು. ಮೇಯರ್, ಕಮಿಷನರ್ ಜೊತೆ ಮಾತುಕತೆ ನಡೆಸಿ ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು.

ಮೈಸೂರಲ್ಲಿ ಐದು ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ಭಾಗ್ಯ

- ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ ಅವರಿಂದ ಉದ್ಘಾಟನೆ
- ವಸಂತನಗರದಲ್ಲಿ 4, ಗಂಗೋತ್ರಿ ಬಡಾವಣೆಯಲ್ಲಿ ಒಂದು ಕಟ್ಟಡ ನಿರ್ಮಾಣ
- 17.19 ಕೋಟಿ ರೂ. ವೆಚ್ಚದಲ್ಲಿ 550 ವಿದ್ಯಾರ್ಥಿಗಳಿಗೆ ನೆಲೆ
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಾಸ್ಟೆಲ್‌ಗಳ ನಿರ್ಮಾಣ



ಎರಡೇ ವರ್ಷದಲ್ಲಿ ನಿರ್ಮಾಣ



> ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಿನ ವಸಂತನಗರದಲ್ಲಿ 4 ಹಾಗೂ ಗಂಗೋತ್ರಿ ಬಡಾವಣೆಯಲ್ಲಿ ಒಂದು ಕಟ್ಟಡ ನಿರ್ಮಿಸಲಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಾಗರಿಕ ಸೌಕರ್ಯ ನಿವೇಶನವನ್ನು ಪಡೆದು ಎರಡು ವರ್ಷದಲ್ಲಿ ಈ ಕಟ್ಟಡ ನಿರ್ಮಾಣ ಮಾಡಲಾಗಿದೆ. ಈ 5 ಕಟ್ಟಡಗಳನ್ನು 17.19 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಶುಕ್ರವಾರ(ಏ.8) ಬೆಳಗ್ಗೆ 10 ಗಂಟೆಗೆ ಗಂಗೋತ್ರಿ ಬಡಾವಣೆಯಲ್ಲಿ ನಿರ್ಮಿಸಿರುವ ನೂತನ ಕಟ್ಟಡಗಳನ್ನು ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ ಉದ್ಘಾಟಿಸಲಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಇತರ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ವಸಂತನಗರದಲ್ಲಿ ನಿರ್ಮಾಣವಾಗಿರುವ ವಿದ್ಯಾರ್ಥಿನಿಲಯಗಳ ನಾಲ್ಕು ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಸಚಿವರು ಉದ್ಘಾಟಿಸಲಿದ್ದಾರೆ.
> - ಹೆಚ್.ಎಸ್.ಬಿಂದ್ಯಾ, ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಏ.7– ಮೈಸೂರು ಜಿಲ್ಲೆ ಶೈಕ್ಷಣಿಕ ಹಬ್ ಆಗಿದ್ದು, ನೆರೆ–ಹೊರೆಯ ಜಿಲ್ಲೆ ಮತ್ತು ತಾಲೂಕುಗಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವುದಕ್ಕಾಗಿ ಮೈಸೂರನ್ನೇ ಅವಲಂಬಿಸಿದ್ದಾರೆ. ಶಿಕ್ಷಣಕ್ಕಾಗಿ ಮೈಸೂರಿಗೆ ಬರುವ ವಿದ್ಯಾರ್ಥಿಗಳಿಗಾಗಿ ವಿವಿಧ ಇಲಾಖೆ ವತಿಯಿಂದ ವಿದ್ಯಾರ್ಥಿನಿಲಯಗಳ ವ್ಯವಸ್ಥೆ ಮಾಡಲಾಗುತ್ತಿದ್ದು, ಹಲವು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಂತೂ ಸ್ವಂತ ಕಟ್ಟಡ ಹೊಂದುವ ಕಾಲ ಕೂಡಿ ಬಂದಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 5 ಹೊಸ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲಾಗಿದ್ದು, ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 550 ವಿದ್ಯಾರ್ಥಿಗಳಿಗೆ ವಾಸ್ತವ್ಯಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಣೆಯಾಗುವ 30 ವಿದ್ಯಾರ್ಥಿನಿಲಯಗಳಿವೆ ಅದರಲ್ಲಿ 12ಕ್ಕೆ ಮಾತ್ರ ಸ್ವಂತ ಕಟ್ಟಡವಿದ್ದರೆ, ಉಳಿದ 18 ಬಾಡಿಗೆ ಕಟ್ಟಡದಲ್ಲಿವೆ. ಇದೀಗ ಐದು ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಿದ್ದು, ಸ್ವಂತ ಕಟ್ಟಡ ಹೊಂದಿದ ವಿದ್ಯಾರ್ಥಿನಿಲಯಗಳ ಸಂಖ್ಯೆ 17ಕ್ಕೇರಿದೆ.

ಎಲ್ಲೆಲ್ಲಿ ಹೊಸ ಹಾಸ್ಟೆಲ್: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರಿನ ವಸಂತನಗರದಲ್ಲಿ ಒಂದೇ ಕ್ಯಾಂಪಸ್‌ನಲ್ಲಿ ನಾಲ್ಕು ಕಟ್ಟಡ ನಿರ್ಮಿಸಿದೆ. ಮುಡಾ ಸಿಎ ನಿವೇಶನದಲ್ಲಿ 5414.16 ಚ.ಮೀಟರ್‌ನಲ್ಲಿ ಎ–ಬ್ಲಾಕ್‌ನಲ್ಲಿ 3.39 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಸ್ಥಳಾಂತರಿಸುತ್ತಿದ್ದು, ಇಲ್ಲಿ 110 ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಬಿ–ಬ್ಲಾಕ್‌ನಲ್ಲಿ 3.48 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ ಸಿ–ಬ್ಲಾಕ್‌ನಲ್ಲಿ ಡಿ.ದೇವರಾಜ ಅರಸು ಎಂಜಿನಿಯರಿಂಗ್ ಮತ್ತು ವೈದ್ಯಕೀಯ (ಪುರುಷ) ವಿದ್ಯಾರ್ಥಿಗಳಿಗಾಗಿ 3.58 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಇಲ್ಲಿ 130ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ. ಡಿ–ಬ್ಲಾಕ್‌ನಲ್ಲಿ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಹಾಗೂ ವೃತ್ತಿಪರ ವಿದ್ಯಾರ್ಥಿಗಳಿಗಾಗಿ 3.58 ಕೋಟಿ ರೂ.ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಿಸಲಾಗಿದೆ.

ಗಂಗೋತ್ರಿ ಬಡಾವಣೆಯಲ್ಲಿ 3.26 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ಸ್ನಾತಕೋತ್ತರ 110 ರಿಂದ 140 ವಿದ್ಯಾರ್ಥಿಗಳಿಗೆ ವಾಸ್ತವ್ಯ ಕಲ್ಪಿಸಬಹುದಾಗಿದೆ.

ಈ 5 ವಿದ್ಯಾರ್ಥಿನಿಲಯಗಳ ಕಟ್ಟಡದಿಂದ 14 ಡಾರ್ಮೆಟರಿಗಳಿದ್ದು, ವಿಶೇಷ ಚೇತನರಿಗಾಗಿ ಪ್ರತ್ಯೇಕ ಕೊಠಡಿ, ಡೈನಿಂಗ್ ಹಾಲ್, ಶೌಚಾಲಯ, ಅಡುಗೆ ಮನೆ, ಆರೈಕೆ ಕೊಠಡಿ, ಕಂಪ್ಯೂಟರ್ ಲ್ಯಾಬ್ ಸೇರಿದಂತೆ ವಿದ್ಯಾರ್ಥಿಗಳ ಕಲಿಕೆಗೆ ಬೇಕಾದ ಪೂರಕ ವ್ಯವಸ್ಥೆ ಕಲ್ಪಿಸಲಾಗಿದೆ. ಕರ್ನಾಟಕ ಗೃಹಮಂಡಳಿ ವತಿಯಿಂದ 17.19 ಕೋಟಿ ರೂ. ವೆಚ್ಚದಲ್ಲಿ 5 ಕಟ್ಟಡ ನಿರ್ಮಿಸಲಾಗಿದ್ದು, ಪ್ರಸಕ್ತ ಸಾಲಿನಿಂದಲೇ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

ಮೈಸೂರು ಮಿತ್ರ
ಶುಕ್ರವಾರ
8-4-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ವೆಡ್ಡಿಂಗ್‌ಗಿಫ್ಟ್ ಹಾಡುಗಳ ಅನಾವರಣ

ಹಿರಿಯನಟಿ ಪ್ರೇಮಾ ಅವರು ಬಹಳ ದಿನಗಳ ನಂತರ ಅಮಾಯಕ ಪುರುಷನ ಪರವಾಗಿ ನಿಂತು ಹೋರಾಡುವ ನ್ಯಾಯವಾದಿಯಾಗಿ ಕಾಣಿಸಿಕೊಂಡಿರುವ ಚಿತ್ರ 'ವೆಡ್ಡಿಂಗ್‌ಗಿಫ್ಟ್'. ವಿಕ್ರಂ ಪ್ರಭು ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಹಾಡುಗಳ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಿರ್ಮಾಪಕ ಭಾ.ಮ.ಹರೀಶ್ ಹಾಗೂ ಸುನೀಲ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಹಿರಿಯನಟಿ ಪ್ರೇಮ, ಸಂಗೀತ ನಿರ್ದೇಶಕ ಬಾಲಚಂದ್ರ ಪ್ರಭು, ಸಂಕಲನಕಾರ ವಿಜೇತ್‌ಚಂದ್ರ ಹಾಗೂ ಛಾಯಾಗ್ರಾಹಕ ಉದಯಲೀಲ ಈ ಸುಂದರ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

ನಾನು 19 ವರ್ಷಗಳ ಹಿಂದೆ ರಾಜೇಂದ್ರಸಿಂಗ್‌ಬಾಬು ಅವರ ಜೊತೆ ಲವ್ ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೆ. ಆನಂತರ ಪುಣೆಯಲ್ಲಿದ್ದು, ಈಗ ಮತ್ತೆ ಚಿತ್ರರಂಗಕ್ಕೆ ಬಂದಿದ್ದೇನೆ. ವೆಡ್ಡಿಂಗ್‌ಗಿಫ್ಟ್ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದು ನಿರ್ದೇಶಿಸಿದ್ದೇನೆ ಜೊತೆಗೆ ಚಿತ್ರದ ನಿರ್ಮಾಣ ವನ್ನೂ ಸಹ ಮಾಡಿದ್ದೇನೆ. ಸಮಾಜದಲ್ಲಿ ಕೆಲ ಹೆಣ್ಣುಮಕ್ಕಳು ತಮ್ಮ ಪರವಾಗಿರುವ ಕಾನೂನನ್ನು ಹೇಗೆ ಸ್ವಾರ್ಥಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ಹಿರಿಯನಟಿ ಪ್ರೇಮಾ ಅವರು ಪುರುಷನಿಗೆ ನ್ಯಾಯ ಕೊಡಿಸುವ ಲಾಯರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಶಾಂತ್, ಸೋನುಗೌಡ, ಅಚ್ಯುತಕುಮಾರ್, ಪವಿತ್ರಲೋಕೇಶ್ ಮುಂತಾದವರು ವೆಡ್ಡಿಂಗ್ ಗಿಫ್ಟ್ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಈಗ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡಿದ್ದು, ಜೂನ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದು ನಿರ್ದೇಶಕ ವಿಕ್ರಂ ಪ್ರಭು ಹೇಳಿದರು.

ಹಿರಿಯನಟಿ ಪ್ರೇಮಾ ಮಾತನಾಡುತ್ತ ನಾನು ಹಣಕ್ಕಾಗಿ ಸಿನಿಮಾ ಮಾಡುವವಳಲ್ಲ. ಉತ್ತಮವಾದ ಕಥೆ ಬಂದರೆ ಮಾತ್ರವೇ ಅಭಿನಯಿಸುತ್ತೇನೆ. ವಿಕ್ರಂಪ್ರಭು ಅವರು ಈ ಚಿತ್ರದ ಕಥೆ ಹೇಳಿದ ತಕ್ಷಣ ಮಾಡಬೇಕೆನಿಸಿತು. ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಾಯಕನ ಪರ ವಕಾಲತ್ತು ವಹಿಸುವ ವಕೀಲೆಯಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು.





'ಓ ಮೈ ಲವ್'ಗೆ ಉಪೇಂದ್ರ ಸಾಥ್!

ವಿಭಿನ್ನ ಪ್ರೇಮಕಥಾಹಂದರ ಇರುವ 'ಓ ಮೈ ಲವ್' ಚಿತ್ರದ 'ಏನಾಯ್ತೋ ನಾ ಕಾಣೆ' ಲಿರಿಕಲ್ ಹಾಡನ್ನು ನಟ ಉಪೇಂದ್ರ ಅವರು ಬಿಡುಗಡೆಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಸ್ಮೈಲ್‌ಶ್ರೀನು ಚಿತ್ರೀಕರಣ ನಡೆಯುತ್ತಿರುವ ಸಂದರ್ಭದಲ್ಲಿ ಸಂಗೀತ ನಿರ್ದೇಶಕರು ಹಾಡಿನ ಟ್ಯೂನ್ ಕಳುಹಿಸಿಕೊಟ್ಟರು. ಅದನ್ನು ಕೇಳುತ್ತಿದ್ದ ಹಾಗೆ ರೋಮಾಂಚನವಾಯಿತು. ಪಲ್ಲವಿ ಚೆನ್ನಾಗಿದೆ. ಚರಣ ಬದಲಾವಣೆ ಮಾಡೋಣವೆಂದು ಹೇಳಿದೆವು. ನಂತರ ಎರಡೇ ದಿನದಲ್ಲಿ ನಾಗೇಂದ್ರಪ್ರಸಾದ್ ಅವರು ಚರಣ ಕೊಟ್ಟರು. ಈ ಹಾಡಿಗೆ ಎಲ್ಲಾ ಕಡೆಯಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಹಾಡಿನ ಪ್ರೋಮೋ ನೋಡಿದ ಎಲ್ಲರೂ ಖುಷಿಯಾಗಿದ್ದಾರೆ. ಈಗ ಪೂರ್ತಿ ಹಾಡನ್ನು ಬಿಡುಗಡೆ ಮಾಡಿಲ್ಲ. ಉಳಿದ ಭಾಗವನ್ನು ಚಿತ್ರಮಂದಿರದಲ್ಲಿ ನೋಡಿದರೆ ಅದರ ಮಜಾನೇ ಬೇರೆ ಇರುತ್ತದೆ. ಅಕ್ಷಿತ್ ಹಾಗೂ ಕೀರ್ತಿ ಈ ಚಿತ್ರದಲ್ಲಿ ಸೊಗಸಾಗಿ ಅಭಿನಯಿಸಿದ್ದಾರೆ ಎಂದು ಹೇಳಿದರು.

ನನಗೆ ಚಿಕ್ಕಂದಿನಿಂದಲೂ ಚಿತ್ರ ನಿರ್ಮಾಣ ಮಾಡಬೇಕೆಂಬ ಬಯಕೆ ಇತ್ತು. ಅದು ಈಗ ಈಡೇರಿದೆ ಎಂದು ಕಥೆ ಬರೆದು ಬಂಡವಾಳ ಹೂಡಿರುವ ನಿರ್ಮಾಪಕ ಜಿ.ರಾಮಾಂಜಿನಿ ಹೇಳಿದರು. ನಾನು ಉಪ್ಪಿ ಅವರ ಅಭಿಮಾನಿಯಾಗಿ ಅವರಿಂದಲೇ ನನ್ನ ಹಾಡನ್ನು ಬಿಡುಗಡೆ ಮಾಡಿಸಬೇಕೆಂಬ ಆಸೆಯಿತ್ತು. ನಾವು ಕೇಳಿದ ತಕ್ಷಣ ಅವರು ಕಬ್ಜಾ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದರೂ ಬಿಡುವು ಮಾಡಿಕೊಂಡು ಹಾಡನ್ನು ವೀಕ್ಷಿಸಿ ಶುಭ ಹಾರೈಸಿದರು ಎಂದು ನಾಯಕ ಅಕ್ಷಿತ್ ಶಶಿಕುಮಾರ್ ಹೇಳಿಕೊಂಡರು.

ನಾಯಕಿ ಕೀರ್ತಿಕಲ್ಕರೆ, ಕಿರುತೆರೆ ನಟ ಪೃಥ್ವಿರಾಜ್ ತಮ್ಮ ಪಾತ್ರಗಳ ಬಗ್ಗೆ ಹೇಳಿಕೊಂಡರು. ಚಿತ್ರದ ಪ್ರಮುಖ ತಾರಾಗಣದಲ್ಲಿ ತೆಲುಗು ನಟ ದೇವಗಿಲ್, ಕಲಾಸಾಮ್ರಾಟ್ ಎಸ್.ನಾರಾಯಣ್, ಸಾಧುಕೋಕಿಲ, ಪವಿತ್ರ ಲೋಕೇಶ್, ಪೃಥ್ವಿ, ಲಿಂಗರಾಜ್, ಸುವೇದ, ಅಕ್ಷತ, ಟೆನ್ನಿಸ್‌ಕೃಷ್ಣ ಮುಂತಾದವರು ಅಭಿನಯಿಸಿದ್ದಾರೆ. ಚರಣ್‌ಅರ್ಜುನ್ ಅವರ ಸಂಗೀತ ಹಾಲೇಶ್.ಎಸ್, ಅವರ ಛಾಯಾಗ್ರಹಣ ಚಿತ್ರಕ್ಕಿದೆ, ಬೆಂಗಳೂರು, ಭೂಪಾಲ್ ಸೇರಿದಂತೆ ಅನೇಕ ಸುಂದರ ತಾಣಗಳಲ್ಲಿ ಓ ಮೈ ಲವ್ ಚಿತ್ರಕ್ಕೆ ಚಿತ್ರೀಕರಣ ನಡೆಸಲಾಗಿದೆ.

ಪ್ರೀತ್ಸುವವರ ಹಾಡುಗಳ ಸಡಗರ

ಸಂಗೀತ ಕ್ಷೇತ್ರದ ಮೇರು ಪ್ರತಿಭೆ ಇಳಯರಾಜ ಅವರು ಸಂಗೀತ ನೀಡಿರುವ ಹಾಗೂ ಕೆ.ಗಣೇಶನ್ ನಿರ್ದೇಶಿಸಿರುವ "ಪ್ರೀತ್ಸು" ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಭಾ.ಮ.ಹರೀಶ್, ಟೇ.ಶಿ.ವೆಂಕಟೇಶ್ ಹಾಗೂ ರವಿ ವಿಠಲ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.




ನಿರ್ದೇಶಕ ಕೆ.ಗಣೇಶನ್ ಮಾತನಾಡುತ್ತ, ಮೂವತ್ತು ದಶಕಗಳಿಂದ ಕನ್ನಡದಲ್ಲಿ ಸಾಕಷ್ಟು ಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಈಗ ವಿಭಿನ್ನ ಕಥೆಯುಳ್ಳ "ಪ್ರೀತ್ಸು" ಚಿತ್ರವನ್ನು ನಿರ್ದೇಶನ ಮಾಡಿದ್ದೇನೆ. ನನಗೆ ನಿರ್ಮಾಣದಲ್ಲಿ ಮಲೇಷಿಯಾದ ಗಾನ ವಿನೋದನ್ ಸಾಥ್ ನೀಡಿದ್ದಾರೆ. ಸಂಗೀತ ನಿರ್ದೇಶಕ ಇಳಯರಾಜ ಅವರು ಚಿತ್ರದಲ್ಲಿ ಮ್ಯೂಸಿಕಲ್ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. ನನಗೆ ಇಳಯರಾಜ ಅವರು ಬಹುದಿನಗಳ ಪರಿಚಯ. ಅವರು ಈ ಕಾರ್ಯಕ್ರಮಕ್ಕೆ ಬರಬೇಕಿತ್ತು. ಆದರೆ ವೈದ್ಯರ ಸಲಹೆ ಮೇರೆಗೆ ಕೊನೆಯಲ್ಲಿ ಅವರು ಬರುವುದು ರದ್ದಾಯಿತು. ವಿಡಿಯೋ ಮೂಲಕ ಅವರು ಸಂದೇಶ ಕಳುಹಿಸಿದ್ದಾರೆ. ಚಿತ್ರ ಸದ್ಯದಲ್ಲೇ ಬಿಡುಗಡೆಯಾಗಲಿದೆ ಎಂದರು.

ಮಲೇಷಿಯಾಗೆ ಬಂದಾಗ ಗಣೇಶನ್ ನನಗೆ ಈ ಕಥೆ ಹೇಳಿದ್ದರು. ಕಂಟೆಂಟ್ ತುಂಬಾ ಇಷ್ಟವಾಯಿತು. ನಿರ್ಮಾಣಕ್ಕೆ ಮುಂದಾದೆವು ಎಂದರು ನಿರ್ಮಾಪಕ ಗಾನ ವಿನೋದನ್.

ನಾಯಕ ಸುಭಾಷ್ ಸಹ ತಮ್ಮ ಪಾತ್ರ ಪರಿಚಯ ಮಾಡಿಕೊಂಡರು. ಸುಭಾಷ್ ಅವರಿಗೆ ನಾಯಕಿಯಾಗಿ ನೇಹ ಅಭಿನಯಿಸಿದ್ದಾರೆ. ಗಣೇಶನ್, ಮನೋಬಲ, ಸ್ವಾಮಿನಾಥ, ಮನೋಹರ್ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಎ.ಸಿ.ಮಹೇಂದ್ರನ್ ಅವರ ಛಾಯಾಗ್ರಹಣ, ಸಂಜೀವ ಅವರ ಸಂಕಲನ ಹಾಗೂ ಜಾನ್ ಪೀಟರ್ ಅವರ ಕಲಾ ನಿರ್ದೇಶನ "ಪ್ರೀತ್ಸು" ಚಿತ್ರಕ್ಕಿದೆ.

ಸಿನಿಪದಬಂಧ-002

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಶಂಕರ್‌ನಾಗ್ ತನ್ನ ಕಥೆ ಆರಂಭಿಸಿದ್ದು ಹೀಗೆ 8
4. ಸ್ವರ್ಣಕಮಲ ಪ್ರಶಸ್ತಿ ಗಿಟ್ಟಿಸಿದ ಸೌಂದರ್ಯ ನಟಿಸಿದ ಚಿತ್ರ 2
6. ಉಪೇಂದ್ರ ಹಿಡಿದ ಹಸುವಿನ ಕಿವಿ 3
8. ದುನಿಯಾ ವಿಜಿ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ 2
9. ಎಲ್ಲಾ ಕನ್ನಡ ಚಿತ್ರಗಳ ಅಂತ್ಯ ತಿರುಗಿದೆ 2
10. ದೇವರಾಜ್ ಮನುಷ್ಯ 3
13. ಕನ್ನಡ ಸಿನಿಮಾದಲ್ಲಿ ಮೊದಲ ಸ್ಲೋಮೋಶನ್ ಸಾಂಗ್ 4
15. – ನಾಣಿ, ಈತ ಹಾಸ್ಯನಟ 3
17. ಪ್ರೇಮಲೋಕದ ನಂತರದ ರವಿಚಂದ್ರನ್ ಚಿತ್ರ 4
19. _ ಮಗಳು, ಜಯಲಲಿತಾ-ಕಲ್ಯಾಣ್ ಕುಮಾರ್ ನಟಿಸಿದ ಚಿತ್ರ 3
21. ಶಿವಣ್ಣ ಜೊತೆ ಆರತಿ ಛಾಬ್ರಿಯ, ಶ್ರೀದೇವಿಕಾ ನಟಿಸಿದ ಚಿತ್ರ 3
22. ಪೈಲ್ವಾನ್ ಚಿತ್ರದಲ್ಲಿ ಸುದೀಪ್ ಮಾಡಿದ್ದು 2
23. ಕನ್ನಡ ಚಿತ್ರದ ಹೀರೋ 3
26. ಡೈರೆಕ್ಟರ್ ಗುರುಪ್ರಸಾದ್ ನಿರ್ದೇಶನದ ಚಿತ್ರ 2
27. ಪಿ.ಲಂಕೇಶ್ ಸಂಭಾಷಣೆ-ನಿರ್ದೇಶನದಲ್ಲಿ ಲೋಕೇಶ್ 8

ಮೇಲಿನಿಂದ ಕೆಳಕ್ಕೆ

1. ಮತ್ತೆ ರವಿಚಂದ್ರನ್-ಹಂಸಲೇಖ ಜೊತೆಯಾಗಿದ್ದು ಹೀಗೆ 5
2. ಮಾಲಾಶ್ರೀ ಸಿ.ಬಿ.ಐ ಸೇರಿದಾಗ 2
3. 1993ರಲ್ಲಿ ಕಾಶಿನಾಥ್ ಈ ಟ್ರೈನಿಂಗ್ ನೀಡಿದರು 2
5. ಡಾ.ರಾಜ್‌ರ ಈ ಸಿನಿಮಾದಲ್ಲಿ ಬಾಲನಟನಾಗಿ ಅಪ್ಪು ಕೊನೆಯ ಚಿತ್ರ 5
7. ಯಶ್-ಅಂಬರೀಶ್ ನಟಿಸಿದ ಯೋಗರಾಜ್ ಭಟ್ ಸಿನಿಮಾ 2
8. _ರತ್ನ, ಪುನೀತ್ ಸಿನಿಮಾ 2
11. ಗೌರಿ ಮುಂಜಲ್ ನವನಟಿಯಾಗಿರುವ ಪುನೀತ್ ಸಿನಿಮಾ 5
12. ಇಂದಿನ_, 84ರ ವಿಷ್ಣುವರ್ಧನ್ ಚಿತ್ರ 4
14. 1987ರಲ್ಲಿ ಶ್ರೀನಿವಾಸಮೂರ್ತಿ-ರೂಪಾದೇವಿ ನಟಿಸಿದ ಚಿತ್ರ 4
16. ಪುಟ್ಟಣ್ಣ ಕಣಗಾಲ್ ನಿರ್ದೇಶನದಲ್ಲಿ ರಜನಿಕಾಂತ್ ನಟಿಸಿದ ಚಿತ್ರ 5
18. ಕುಷ್ಠರೋಗಿಯಾಗಿ ಉಪೇಂದ್ರ ಹರಿಸಿದ ಕಣ್ಣೀರು 5
19. _ಗುಡಿ, ದುನಿಯಾ ವಿಜಿ ಚಿತ್ರ 2
20. ಪ್ರಿಯತಮನಾಗಿ ಸಂಗೀತಾರೊಂದಿಗೆ ಸುದೀಪ್ ನಟಿಸಿದ ಚಿತ್ರ 2
24. ಲೂಸ್-- ಖ್ಯಾತಿಯ ನಾಯಕ ಯೋಗೇಶ್ 2
25. ಶ್ರಾವಣ __ ಇಲ್ಲಿ ತಿರುಗಿದೆ 2

ಸಿನಿ ಪದಬಂಧ 001ರ ಸರಿ ಉತ್ತರ

ಕಿ	ರ	ಗೂ	ರಿ	ನ	ಗ	ಯ್ಯಾ	ಳಿ	ಗ	ಳು	■
ಲಾ	■	ಗ್ಲಿ	■	ವ	■	ಅ	■	ಜೇಂ	■	ಒಂ
ಡಿ	■	■	■	ಗ್ರ	■	■		ದ್ರ	■	ದೇ
ಜೋ	ಗಿ	■	ಸಂ	ಹಾ	ರ	■	■	■	■	ಗು
ಡಿ	■	ಮ	ಗ	■	ಸಾ	■	ರಾ	ಮಾ	ಚಾ	ರಿ
■	■	ಯೂ	■	ಪ್ರ	ಸಂ	ಗ	■	ಧ	■	■
ಯು	ವ	ರ	ತ್ನ	■	ಖಿ	■	ಮೂ	ವಿ	■	ಮು
ದ್ಧ	■	■	■	■	ಸು	ಮ	ನ್	■	ಸಾ	ಗು
ಕಾಂ	■	ಕಿ	ಜಾ	■	■	ಹಾ	■	■	■	ಳು
ಡ	■	ಲಾ	■	ಏ	■	ಕ	■	ಚಂ	■	ನ
■	ನೋ	ಡಿ	ಸ್ವಾ	ಮಿ	ನಾ	ಏ	ರೋ	ದು	ಹೀ	ಗೆ

ವಿಜೇತರು: ಕೆ.ಆಶಾಲತಾ
363, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತಿಪುರಂ, ಮೈಸೂರು

ಸಸ್ಪೆನ್ಸ್, ಮರ್ಡರ್ ಮಿಸ್ಟ್ರಿಯಲ್ಲಿ ಕಾಲಚಕ್ರ

ಸುಮಂತ್‌ಕ್ರಾಂತಿ ಅವರ ನಿರ್ಮಾಣ ಹಾಗೂ ನಿರ್ದೇಶನದ ಕಾಲಚಕ್ರ ಚಿತ್ರದಲ್ಲಿ ನಾಯಕ ವಸಿಷ್ಠಸಿಂಹ 25ರಿಂದ 60ರ ವಯೋಮಾನದ ನಾಲ್ಕು ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಸ್ಪೆನ್ಸ್, ಥ್ರಿಲ್ಲರ್ ಮರ್ಡರ್‌ಮಿಸ್ಟ್ರಿ ಕಥಾಹಂದರ ಇರುವ ಈ ಚಿತ್ರದ ನೀನೇ ಬೇಕು ಎಂಬ ರೊಮ್ಯಾಂಟಿಕ್ ಲಿರಿಕಲ್ ಹಾಡಿನ ಬಿಡುಗಡೆ ನಡೆಯಿತು. ಡಾಲಿ ಧನಂಜಯ ಹಾಡನ್ನು ರಿಲೀಸ್ ಮಾಡಿದರು. ಇದರ ಜೊತೆಗೇ ವಸಿಷ್ಠಸಿಂಹ ಅವರ ಸಿಂಹ ಆಡಿಯೋ ಕಂಪನಿಯ ಲೋಗೋವನ್ನು ಸಂಗೀತ ನಿರ್ದೇಶಕ ಹಂಸಲೇಖಾ ರಿಲೀಸ್ ಮಾಡಿದರು.



ನಿರ್ದೇಶಕ ಸುಮಂತ್‌ಕ್ರಾಂತಿ ಮಾತನಾಡಿ, ನಾನೊಮ್ಮೆ ಪೊಲೀಸ್ ಕಮೀಷನರ್ ಆಫೀಸಿನಲ್ಲಿದ್ದಾಗ ಕಂಡ ಪ್ರಕರಣವೊಂದರ ಬೆನ್ನು ಹತ್ತಿದಾಗ ಸಿಕ್ಕ ಕಥೆಯಿದು. ತುಂಬಾ ಇಂಟರೆಸ್ಟಿಂಗ್ ಆಗಿ ಚಿತ್ರ ಬಂದಿದೆ, ಸದ್ಯದಲ್ಲೇ ರಿಲೀಸ್ ಮಾಡುತ್ತಿದ್ದೇನೆ ಎಂದು ಹೇಳಿದರು. ನಂತರ ಧನಂಜಯ ಮಾತನಾಡಿ ನಾನು ವಸಿಷ್ಟ ಇಬ್ಬರೂ ಇಂಜಿನಿಯರ್‌ಗಳು, ಟಗರು ಚಿತ್ರದಲ್ಲಿ ವಿಲನ್ ಆಗಿ ನಟಿಸಿದ್ದೆವೆ, ನಮ್ಮನ್ನು ಹೀರೋ ಮಾಡಲು ಸಾಕಷ್ಟುಸಲ ಯೋಚನೆ ಮಾಡುತ್ತಾರೆ. ನಾವು ಕನ್ನಡದ ಒಳ್ಳೇ ಗ್ಯಾಂಗ್‌ಸ್ಟರ್ಸ್. ಇನ್ನೂ ತುಂಬಾ ಒಳ್ಳೊಳ್ಳೇ ಕಲಾವಿದರು ಕನ್ನಡದಲ್ಲಿ ಬರುತ್ತಿದ್ದಾರೆ ಎಂದರು.


ಸಿಂಗರ್ ಆಗಬೇಕೆಂದು ಮೈಸೂರಿನಿಂದ ಬೆಂಗಳೂರಿಗೆ ಬಂದ ವಸಿಷ್ಠಸಿಂಹ ಕಲಾವಿದನಾಗಿ ಬೆಳೆದಿದ್ದಾರೆ. ಅವರಿಗಿರುವ ಬೇಸ್‌ವಾಯ್ಸ್ ವಿಶೇಷವಾಗಿದೆ. ನಾವು ಹೀರೋ ಆಗ್ತೇವೆಂದಾಗ ಮೂಗು ಮುರಿಯುವವರೇ ಜಾಸ್ತಿ. ಆ ಮಾತುಗಳೇ ನಮಗೆ ಶ್ರೀರಕ್ಷೆ ಒಂದೊಳ್ಳೇ ಸಿನಿಮಾ ಮೂಲಕ ನಿಮ್ಮ ಮುಂದೆ ಬರುತ್ತಿದ್ದೇನೆ ಎಂದರು.

ಸುಮಂತ್‌ಕ್ರಾಂತಿ ಅವರ ನಿರ್ಮಾಣ ಹಾಗೂ ನಿರ್ದೇಶನದ ಈ ಚಿತ್ರ ಸಾಕಷ್ಟು ಚಲನಚಿತ್ರೋತ್ಸವಗಳಲ್ಲಿ ಪಾಲ್ಗೊಂಡು ಮೆಚ್ಚುಗೆಯನ್ನೂ ಗಳಿಸಿದೆ. ವಿಶಿಷ್ಠವಾದ ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಒಳಗೊಂಡಿರುವ ಈ ಚಿತ್ರಕ್ಕೆ ಬೆಂಗಳೂರು, ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಗುರುಕಿರಣ್ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಹಾಡುಗಳನ್ನು ಚೇತನ್‌ಕುಮಾರ್, ಕವಿರಾಜ್, ಸಂತೋಷ್‌ನಾಯಕ್ ಅವರು ಬರೆದಿದ್ದಾರೆ. ಸಂಚಿತ್‌ಹೆಗ್ಡೆ, ಕೈಲಾಸ್‌ಖೇರ, ಪಂಚಮ್ ಜೀವ ಹಾಡಿಗೆ ದನಿಯಾಗಿದ್ದಾರೆ.

ಎಲ್.ಎಂ.ಸೂರಿ ಅವರ ಛಾಯಾಗ್ರಹಣ, ಸೌಂದರರಾಜ್ ಸಂಕಲನ, ಡಿಫರೆಂಟ್ ಡ್ಯಾನಿ ಅವರ ಸಾಹಸ ನಿರ್ದೇಶನ ಹಾಗೂ ಮುರಳಿ ನೃತ್ಯ ನಿರ್ದೇಶನವಿರುವ ಈ ಚಿತ್ರದಲ್ಲಿ ನಾಯಕನಾಗಿ ವಸಿಷ್ಠ ಎನ್.ಸಿಂಹ ಅಲ್ಲದೆ ರಕ್ಷ, ದೀಪಕ್‌ಶೆಟ್ಟಿ, ಸುಚೇಂದ್ರಪ್ರಸಾದ್ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಕಾಕ್‌ಟೈಲ್ ಥೀಮ್ ಪೋಸ್ಟರ್ ಬಿಡುಗಡೆ

ಸಸ್ಪೆನ್ಸ್, ಥ್ರಿಲ್ಲರ್ ಹಾಗೂ ಮರ್ಡರ್ ಮಿಸ್ಟರಿ ಕಥೆ ಹೊಂದಿರುವ ಕಾಕ್‌ಟೈಲ್ ಚಿತ್ರದ ಥೀಮ್ ಪೋಸ್ಟರ್ ಮತ್ತು ಮೋಷನ್ ಪೋಸ್ಟರನ್ನು ಶೋಮ್ಯಾನ್ ಎಂದೇ ಹೆಸರಾದ ಜೋಗಿ ಪ್ರೇಮ್ ಬಿಡುಗಡೆ ಮಾಡಿ ಚಿತ್ರ ತಂಡಕ್ಕೆ ಶುಭ ಹಾರೈಸಿದ್ದಾರೆ. ಡಾ.ಶಿವಪ್ಪ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ಶ್ರೀರಾಮ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಒಂದೇ ಹೆಸರಿನ ಮತ್ತು ಒಂದೇ ವಯಸ್ಸಿನ ಹಲವಾರು ಹುಡುಗಿಯರ ಸರಣಿ ಕೊಲೆ ನಡೆದಾಗ ಅದರ ತನಿಖೆಯ ಸುತ್ತ ಸಾಗುವ ಕಥೆಯೇ 'ಕಾಕ್‌ಟೈಲ್' ಚಿತ್ರದ ಕಥಾಹಂದರ. ಚಿತ್ರದ ಕ್ಲೈಮಾಕ್ಸ್‌ನಲ್ಲಿ ಯಾರೂ ಊಹಿಸದಂಥ ಟ್ವಿಸ್ಟ್ ಚಿತ್ರದಲ್ಲಿದೆ. ಅನೇಕ ಅಂಶಗಳನ್ನು ಬೆರೆಸಿದ ಕಾಕ್‌ಟೈಲ್ ಪಾನೀಯದ ರೀತಿಯಲ್ಲಿ ಪ್ರೇಕ್ಷಕರಿಗೆ ಈ ಚಿತ್ರ ಹೊಸ ಅನುಭವ ನೀಡಲಿದೆ ಎಂದು ಚಿತ್ರತಂಡ ಹೇಳಿದೆ. ಈಗಾಗಲೇ ಕಾಕ್‌ಟೈಲ್ ಸಿನಿಮಾದ ಚಿತ್ರೀಕರಣ ಮುಗಿದಿದ್ದು, ಸದ್ಯ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ಮೇ ತಿಂಗಳಲ್ಲಿ



ಚಿತ್ರವನ್ನು ತೆರೆಗೆ ತರಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಹೊಸ ಪ್ರತಿಭೆಗಳಾದ ವೀರೇನ್‌ಕೇಶವ್ ಹಾಗೂ ಚರಿಷ್ಮಾ ಈ ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಇವರೊಂದಿಗೆ ಶೋಭರಾಜ್, ಮಹಾಂತೇಶ್, ಶಿವಮಣಿ, ಚಂದ್ರಕಲಾ ಮೋಹನ್, ಕರಿಸುಬ್ಬು, ರಮೇಶ್ ಪಂಡಿತ್ ಮುಂತಾದವರ ತಾರಾಗಣ ಈ ಚಿತ್ರಕ್ಕಿದೆ.

ಹೃದಯಶಿವ-ಸಿರಾಜ್‌ಮಿರ್ಜಾ ಅವರ ಸಾಹಿತ್ಯದ ಗೀತೆಗಳಿಗೆ ಅರ್ಮಾನ್ ಮಲಿಕ್, ಅನುರಾಧಾ ಭಟ್ ಧ್ವನಿಯಾಗಿದ್ದು, ಲೋಕಿ ತವಸ್ಯ ಸಂಗೀತ ಸಂಯೋಜಿಸಿದ್ದಾರೆ. ರವಿವರ್ಮ(ಗಂಗು) ಅವರ ಛಾಯಾಗ್ರಹಣ, ಸುನಿಲ್ ನೃತ್ಯ ನಿರ್ದೇಶನವಿದೆ. ಸದ್ಯದಲ್ಲೇ ಚಿತ್ರದ ಟ್ರೇಲರನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ರೂಪಿಸಿಕೊಂಡಿದೆ.

ಬಂಡೀಪುರವನ್ನು ಬೆಂಕಿಯಿಂದ ರಕ್ಷಿಸಲು ಮುನ್ನೆಚ್ಚರಿಕಾ ಕ್ರಮ ವಹಿಸಿ

ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸಚಿವ ಉಮೇಶ್ ಕತ್ತಿ ಸೂಚನೆ



ಸರಗೂರು, ಏ.7(ನಾಗೇಶ್)– ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಯಾವುದೇ ಬೆಂಕಿ ಅವಘಡ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿ ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅರಣ್ಯ ಮತ್ತು ಪರಿಸರ ಇಲಾಖೆ ಸಚಿವ ಉಮೇಶ್ ಕತ್ತಿ ತಿಳಿಸಿದರು.

ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಕಾಡನ್ನು ಬೆಂಕಿಯಿಂದ ರಕ್ಷಿಸಲು ಕೈಗೊಂಡಿರುವ ಕ್ರಮಗಳ ಪ್ರಗತಿ ಪರಿಶೀಲನೆಗೆ ಆಗಮಿಸಿದ್ದ ಅವರು ನುಗು ವನ್ಯಜೀವಿ ವಲಯ ಮತ್ತು ರಾಮಪುರ ಆನೆ ಶಿಬಿರಕ್ಕೆ ಭೇಟಿ ನೀಡಿ ಪರಿಶೀಲಿಸಿ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ಕಳೆದ ವರ್ಷ ಬಂಡೀಪುರ ಅರಣ್ಯದಲ್ಲಿ ಭಾರೀ ಬೆಂಕಿ ಅವಘಡ ಸಂಭವಿಸಿತ್ತು. ಹೀಗಾಗಿ ಈ ಬಾರಿ ಮುನ್ನೆಚ್ಚರಿಕೆ ವಹಿಸಿ, ಬೆಂಕಿ ಅವಘಡ ತಡೆಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಲ್ಲದೇ ಕಾಡನ್ನು ಸಂರಕ್ಷಿಸಲು ಹೆಚ್ಚಾಗಿ ಶ್ರಮಿಸುವ ವಲಯದ ಸಿಬ್ಬಂದಿಗೆ ಬಹುಮಾನ ನೀಡುವ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಬಂಡೀಪುರ ಅರಣ್ಯ ರಕ್ಷಿಸುವ ದೃಷ್ಟಿಯಿಂದ ಈಗಾಗಲೇ 176 ಕಿಮೀ ನಷ್ಟು ಬ್ಯಾರಿಕೇಡ್ ನಿರ್ಮಿಸಲು ಯೋಜನೆ ರೂಪಿಸಿದ್ದು, ಶೇ.50 ರಷ್ಟು ಕಾಮಗಾರಿ ಮುಗಿದಿದೆ. ಅಲ್ಲದೇ ಕಾಡನ್ನು ಬೆಂಕಿಯಿಂದ ರಕ್ಷಿಸಲು ಕೈಗೊಂಡಿರುವ ಕ್ರಮಗಳ ಪ್ರಗತಿ ಪರಿಶೀಲಿಸಲಾಗಿದ್ದು, ಅರಣ್ಯ ರಕ್ಷಣೆಗೆ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದೆ ಎಂದರು.

ನುಗು ವನ್ಯಜೀವಿ ವಲಯದಲ್ಲೂ 15 ಕಿಮೀ ನಷ್ಟು ಬ್ಯಾರಿಕೇಡ್ ನಿರ್ಮಾಣವಾಗಬೇಕು ಎಂಬ ಮನವಿ ಇದ್ದು, ಈಗಾಗಲೇ 5 ಕಿಮೀ ಬ್ಯಾರಿಕೇಡ್ ನಿರ್ಮಿಸವಾಗಿದೆ. ಉಳಿದ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು ಎಂದರು.

ಇದೇ ವೇಳೆ ನುಗು ಭಾಗದ ಕಾಡಂಚಿನ ರೈತರು ಸಚಿವರನ್ನು ಭೇಟಿ ಮಾಡಿ, ಕಾಡಂಚಿನ ಭಾಗಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ರೈತರ ಬೆಳೆ ನಾಶ ಮಾಡುತ್ತಿವೆ. ಈ ಸಂಬಂಧ ನಮಗೆ ನೀಡುತ್ತಿರುವ ಪರಿಹಾರ ಸಾಕಾಗುತ್ತಿಲ್ಲ. ಅಲ್ಲದೇ ಪರಿಹಾರವು ತಡವಾಗಿ ಬರುತ್ತಿದೆ. ಆದ್ದರಿಂದ ಬೆಳೆ ನಷ್ಟವಾದರೆ ಪ್ರಸ್ತುತ ಮಾರುಕಟ್ಟೆ ಬೆಲೆಯಂತೆ ನಮಗೆ ನಷ್ಟ ಕಟ್ಟಿಕೊಡಬೇಕು. ಅಲ್ಲದೇ ನುಗು ಭಾಗದಲ್ಲಿ ಕಾಡಾನೆ ಹಾವಳಿ ತಪ್ಪಿಸಲು ಹೆಚ್ಚುವರಿಯಾಗಿ ಬ್ಯಾರಿಕೇಟ್ ನಿರ್ಮಾಣ ಮಾಡಬೇಕು ಎಂದು ಮನವಿ ಮಾಡಿದರು.

ನುಗು ವ್ಯಾಪ್ತಿಯಲ್ಲಿ ಸಫಾರಿ ಆರಂಭಿಸಲು ಮನವಿ: ನುಗು ಭಾಗದಲ್ಲೂ ಸಫಾರಿ ಆರಂಭಿಸುವಂತೆ ಈಗಾಗಲೇ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಭಾಗದಲ್ಲಿ ಸಫಾರಿ ಆರಂಭವಾದರೆ ಸುತ್ತಲಿನ ಗ್ರಾಮಗಳು ಆರ್ಥಿಕವಾಗಿ ಸುಧಾರಣೆ ಕಾಣಲು ಸಾಧ್ಯವಾಗುತ್ತದೆ ಎಂದು ಗ್ರಾಮಸ್ಥರಾದ ಮಹೇಶ್ ಮನವಿ ಸಲ್ಲಿಸಿದರು.

ಅರಣ್ಯದೊಳಗಿನ ಕಟ್ಟಡ ತೆರವುಗೊಳಿಸಿ: ಅರಣ್ಯದೊಳಗೆ ಅಕ್ರಮವೋ, ಸಕ್ರಮವೋ ಗೊತ್ತಿಲ್ಲ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ಇಲ್ಲಿರುವ ಕಟ್ಟಡಗಳ ಪೈಕಿ ಮಾಜಿ ಸಚಿವರ ಕಟ್ಟಡವೂ ಇದೆ ಎಂಬ ಮಾಹಿತಿ ಇದೆ. ನಿತ್ಯ 10–15 ವಾಹನಗಳು ಅರಣ್ಯದೊಳಗೆ ಹೋಗುತ್ತಿವೆ. ಇದರಿಂದ ಪ್ರಾಣಿಗಳಿಗೂ ತೊಂದರೆ ಉಂಟಾಗುತ್ತಿದ್ದು, ಈ ಬಗ್ಗೆ ಕ್ರಮವಹಿಸಿ ಅಕ್ರಮ ಕಟ್ಟಡ ತೆರವು ಮಾಡುವಂತೆ ಸಚಿವರಲ್ಲಿ ಸ್ಥಳೀಯರು ಮನವಿ ಮಾಡಿದರು.

ಮನವಿ ಆಲಿಸಿ ಮಾತನಾಡಿದ ಸಚಿವರು, ಸಫಾರಿ ಆರಂಭಿಸುವ ಬಗ್ಗೆ ಯೋಜನೆ ರೂಪಿಸುತ್ತೇವೆ. ಇನ್ನೂ ಅಕ್ರಮ ಕಟ್ಟಡಗಳ ಬಗ್ಗೆ ದಾಖಲೆ ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

ಸ್ಥಳದಲ್ಲಿ ಮೈಸೂರು ವಲಯ ಸಿಸಿಎಫ್ ಮಾಲತಿ ಪ್ರಿಯಾ, ಬಂಡೀ ಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ರಮೇಶ್ ಕುಮಾರ್, ಎಸಿಎಫ್‌ಗಳಾದ ರವಿಕುಮಾರ್, ನವೀನ್, ವಲಯ ಅರಣ್ಯಾಧಿಕಾರಿಗಳಾದ ಗೀತಾ ನಾಯಕ್, ಮಂಜುನಾಥ್, ಎಸ್‌ಐ ಶ್ರವಣದಾಸ್ ರೆಡ್ಡಿ, ಸರಗೂರು ಹೋರಾಟ ಸಮಿತಿ ಸಮಚಾಲಕ ಕೃಷ್ಣ, ಮುಳ್ಳೂರು ಗ್ರಾಪಂ ಅಧ್ಯಕ್ಷ, ಸದಸ್ಯರು ಸೇರಿದಂತೆ ಸ್ಥಳೀಯರು ಇದ್ದರು.

ಹಿಂದೂ–ಮುಸ್ಲಿಂ ಸಂಪ್ರದಾಯದಂತೆ ಪೂಜೆ ಸಲ್ಲಿಸಿ ನಗರಸಭೆ ಅಧ್ಯಕ್ಷೆ ಅಧಿಕಾರ ಸ್ವೀಕಾರ

ಹುಣಸೂರು, ಏ.7(ಕೆಕೆ)–ನಗರಸಭೆ ನೂತನ ಅಧ್ಯಕ್ಷೆ ಸಮಿನಾ ಪರ್ವಿನ್ ಹಿಂದಿನ ಅಧ್ಯಕ್ಷೆ ಸೌರಭ ಸಿದ್ದ ರಾಜು ಅವರಿಂದ ಪೆನ್ನು ಪಡೆಯುವ ಮೂಲಕ ಅಧಿಕಾರ ಸ್ವೀಕರಿಸಿದರು.



ಸಮಿನಾ ಪರ್ವಿನ್ ಮತ್ತು ಅವರ ಪತಿ ನಗರ ಸಭೆ ಮಾಜಿ ಸದಸ್ಯ ಜಾಕಿರ್ ಹುಸೇನ್ ಇಬ್ಬರೂ ಪುರೋಹಿತರು ನೀಡುವ ಸೂಚನೆ ಅನ್ವಯದಂತೆ ಪೂಜೆ ಕೈಂಕರ್ಯ ಸಲ್ಲಿಸಿ ಆಸನಕ್ಕೆ ಮಂಗಳಾರತಿ ಮಾಡಿದರು. ಬಳಿಕ ಮೌಲ್ವಿ ಕುರಾನ್ ಪಠಣ ಮಾಡಿ ಸಾಮಾಜಿಕ ಸೇವೆಯಲ್ಲಿ ಯಶಸ್ವಿಯಾಗುವಂತೆ ದೇವರಲ್ಲಿ ಪ್ರಾರ್ಥಿಸಿದ್ದಾಗಿ ತಿಳಿಸಿದರು.

ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ನಗರ ವ್ಯಾಪ್ತಿಯ ಕೊಳಚೆ ಪ್ರದೇಶಗಳ ನಾಗರಿಕರಿಗೆ ಮೂಲಸೌಲಭ್ಯ ಕಲ್ಪಿಸುವ ಉದ್ದೇಶ ವಿದೆ. ಇದಲ್ಲದೆ ನಗರ ಶುಚಿತ್ವಕ್ಕೆ ಶ್ರಮಿಸುವ ಪೌರಕಾರ್ಮಿಕರಿಗೆ ಮೂಲ ಸವಲತ್ತು ಒದಗಿಸಿ, ಆರೋಗ್ಯ ಕಾಪಾಡು ನಿಟ್ಟಿನಲ್ಲಿ ಯೋಜನೆ ಕೈಗೊಳ್ಳಲಾಗುವುದು. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ವ್ಯವಸ್ಥಿತವಾಗಿ ನಿರ್ವಹಣೆ ಮಾಡುವ ದಿಕ್ಕಿನಲ್ಲಿ ಈಗಾಗಲೇ ಒಂದು ಸುತ್ತಿನ ಸಭೆ ಪೌರಾಯುಕ್ತರ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಹೊಸ ವರ್ಷ ಮತ್ತು ಆರ್ಥಿಕ ವರ್ಷ ಆರಂಭವಾಗಿದ್ದು, ನಗರಸಭೆಗೆ ಆದಾಯ ಸಂಗ್ರಹಿಸಲು ಒತ್ತು ನೀಡಲು ಕಂದಾಯ ವಿಭಾಗದ ಸಿಬ್ಬಂದಿಗೆ ಕಂದಾಯ ವಸೂಲಾತಿಗೆ ಸೂಚಿಸಲಾಗಿದೆ ಎಂದರು.

ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಗೆ ಅರ್ಜಿ ಆಹ್ವಾನ

ಮೈಸೂರು, ಏ.7– ಕಂದಾಯ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳ ಶಾಖೆಯಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಟೆಂಡರ್ ದಾಸ್ತಾವೇಜನ್ನು 2022ರ ಏಪ್ರಿಲ್ 28 ರೊಳಗಾಗಿ ಅಪ್ಲೋಡ್ ಮಾಡಲು ತಿಳಿಸಲಾಗಿದೆ.


ಆಸಕ್ತಿಯುಳ್ಳ ಏಜೆನ್ಸಿಯವರು ಕರ್ನಾಟಕ ಸರ್ಕಾರದ ಅಧಿಕೃತ ಟೆಂಡರ್ ಪೋರ್ಟಲ್ http://eporoc.karnataka.gov.in.website ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ಶಾಖೆಯನ್ನು ಸಂಪರ್ಕಿಸಬಹುದು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾತನಹಳ್ಳಿ ಸೊಸೈಟಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೆಚ್.ಡಿ.ಕೋಟೆ, ಏ.7(ಮಂಜು)– ತಾಲೂಕಿನ ಕ್ಯಾತನಹಳ್ಳಿ ವ್ಯವಸಾಯೋತ್ಪನ್ನ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿ. ಗೋವಿಂದರಾಜು ಮತ್ತು ಉಪಾಧ್ಯಕ್ಷರಾಗಿ ಜೆ.ಜಗನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಜಿ.ಗೋವಿಂದರಾಜು ಮಾತನಾಡಿ, ಕಳೆದ 5 ವರ್ಷದ ಅವಧಿಯಲ್ಲಿ 184 ರೈತರಿಗೆ 1.86 ಲಕ್ಷ ಸಾಲ ಸೌಲಭ್ಯ ನೀಡಲಾಗಿದೆ. ಈ ಸಾಲಿನಲ್ಲಿ ಇನ್ನೂ ಹೆಚ್ಚಿನ ರೈತರಿಗೆ ಸಾಲ ಸೌಲಭ್ಯ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ನಿರ್ದೇಶಕರಾದ ಕಲ್ಯಾಣ್ ಕುಮಾರ್, ಡಿ.ಶಿವಣ್ಣ, ಮಹದೇವಪ್ಪ, ರವಿಕುಮಾರ್, ಮಮತಾ, ಹೆಚ್.ನಾಗರಾಜು, ನಿತ್ಯಾನಂದ ಮೂರ್ತಿ, ತುಳಸಮ್ಮ, ಕರೀಗೌಡ, ಮುಖಂಡರಾದ ಕೆಪಿಸಿಸಿ ಪರಿಶಿಷ್ಟ ಪಂಗಡ ರಾಜ್ಯ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ನಾಗರಾಜು, ಶಿಂಡೇನಹಳ್ಳಿ ಎಂ.ಗಿರೀಶ್, ನಾಗೇಗೌಡ, ಲಿಂಗಣ್ಣಸ್ವಾಮಿ, ಮರಿಗೌಡ, ಮಲ್ಲಣ್ಣ, ಗುರುಸ್ವಾಮಿ, ಸಿದ್ದರಾಜು, ನಂಜುಂಡ, ನಾರಾಯಣಮೂರ್ತಿ, ಕೆಂಡಗಣ್ಣ, ಚುನಾವಣಾಧಿಕಾರಿ ಹೆಚ್.ಕೆ.ಸತೀಶ್, ಕಾರ್ಯ ನಿರ್ವಹಣಾಧಿಕಾರಿ ಬಸವರಾಜು, ಗ್ರಾಮಸ್ಥರು ಉಪಸ್ಥಿತರಿದ್ದರು.



ಶಾಸಕ ಜಿ.ಟಿ.ದೇವೇಗೌಡ ಅವರನ್ನು ಮೈಮುಲ್ ಅಧ್ಯಕ್ಷ ಪ್ರಸನ್ನ, ಪಿರಿಯಾಪಟ್ಟಣ ತಾಲೂಕಿನ ಚೌತಿ ಗ್ರಾಪಂ ಉಪಾಧ್ಯಕ್ಷ ರವಿಚಂದ್ರ ಅವರು ಸನ್ಮಾನಿಸಿದರು. ಈ ವೇಳೆ ಹುಣಸೂರು ಎಪಿಎಂಸಿ ಅಧ್ಯಕ್ಷ ಸುಭಾಷ್, ಕೆಂಪೇಗೌಡ, ದಿವಾಕರ್, ರಫೀಕ್, ಪ್ರಕಾಶ್ ಮತ್ತಿತರರಿದ್ದರು.

ಅನುಶ್ರೀ ಕುಟುಂಬಕ್ಕೆ ಪುರಸಭಾ ಸದಸ್ಯ ಅರ್ಜುನ್ ಸಾಂತ್ವನ

ತಿ.ನರಸೀಪುರ, ಏ.7(ಎಸ್‌ಕೆ)– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ತೆರಳಿ ಸಾವನ್ನಪ್ಪಿದ ತಾಲೂಕಿನ ಅಕ್ಕೂರು ಗ್ರಾಮದ ವಿದ್ಯಾರ್ಥಿನಿ ಅನುಶ್ರೀ ಮನೆಗೆ ಪುರಸಭಾ ಸದಸ್ಯ ಆರ್.ಅರ್ಜುನ್ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಧನಸಹಾಯ ನೀಡಿದರು. ನಂತರ ಮಾತನಾಡಿದ ಅವರು, ಅನುಶ್ರೀ ಸಾವಿನಿಂದ ಆಕೆಯ ಕುಟುಂಬಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಕಡು ಬಡತನದಲ್ಲಿ ಮಗಳಿಗೆ ಕಷ್ಟಪಟ್ಟು ಶಿಕ್ಷಣ ಕೊಡಿಸುತ್ತಿದ್ದ ತಂದೆ–ತಾಯಿ ಆಕೆಯ ಅಗಲಿಕೆಯಿಂದ ಕಂಗಾಲಾಗಿದ್ದಾರೆ. ಅನುಶ್ರೀ ತಂದೆ ಕೆಂಪರಾಜು ಮಗಳ ಸಾವಿನ ದುಃಖದಿಂದ ಹೊರಬಂದು ತಮ್ಮ ಮಗನಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕಿದೆ ಎಂದರು.

ಸರ್ಕಾರದಿಂದ ಲಕ್ಷ ರೂ. ಪರಿಹಾರ ನೀಡಿರುವುದು ಸ್ವಾಗತಾರ್ಹವಾದರೂ, ಅದು ಸಾಲದು. ಹಾಗಾಗಿ ಸರ್ಕಾರ



ಮೃತಪಟ್ಟ ಅನುಶ್ರೀ ಕುಟುಂಬಕ್ಕೆ ಹೆಚ್ಚಿನ ಪರಿಹಾರ ನೀಡುವಂತೆ ಹಾಗೂ ಮತ್ತಿತರ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿದರು. ಈ ವೇಳೆ ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಶಂಕರ್, ಖಜಾಂಚಿ ಬಿ.ಎಲ್.ಮಾದೇವ್ ಮತ್ತಿತರಿದ್ದರು.

ದೇವಮ್ಮ ನಿಧನ

ಹುಣಸೂರು, ಏ.7(ಕೆಕೆ)– ತಾಲೂಕಿನ ಮೂಕನಹಳ್ಳಿ ಗ್ರಾಮದ ನಿವಾಸಿ ಲೇ. ವೈರಮುಡಯ್ಯ ಅವರ ಪತ್ನಿ ಹಾಗೂ ದೇವರಾಜ ಒಡೆಯರ್ ಜನಸೇವಾ ಬಳಗದ ಸದಸ್ಯ ಎಂ.ಸಿ. ಅಭಿಲಾಷ್ ಅವರ ತಾಯಿ ದೇವಮ್ಮ(80) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಮಲ್ಕುಂಡಿ, ಏ.7(ಚನ್ನಪ್ಪ)– ಗ್ರಾಮೀಣ ರಸ್ತೆಗಳು ಹದಗೆಟ್ಟಿರುವುದನ್ನು ಕಂಡ ನಾನು ಶಾಸಕನಾದ ಮೇಲೆ ಸರ್ಕಾರದಿಂದ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಕಡಬೂರು ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಹಾಗೂ ಮೊತ್ತ ಗ್ರಾಮದಲ್ಲಿ 12 ಲಕ್ಷ ರೂ. ವೆಚ್ಚದ ರಸ್ತೆ ನಿರ್ಮಾಣ, ಯಾಲ್ಲಹಳ್ಳಿಯಲ್ಲಿ 10 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ ಹುಲ್ಲಹಳ್ಳಿ ಗ್ರಾಮದಲ್ಲಿ 70 ಲಕ್ಷ ರೂ. ವೆಚ್ಚದಲ್ಲಿ ಪ್ರಥಮ ದರ್ಜೆ ಕಾಲೇಜಿನ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಚುನಾವಣೆ ವೇಳೆ ಗ್ರಾಮಗಳಿಗೆ ಮತ ಕೇಳಲು ಬಂದಾಗ ರಸ್ತೆಗಳು ಸಂಪೂರ್ಣ ಹದಗೆಟ್ಟಿರುವುದನ್ನು ಕಂಡ ನಾನು ಶಾಸಕನಾದ ಬಳಿಕ ಕ್ಷೇತ್ರದ ಪ್ರತಿ ಗ್ರಾಮದ ಎಲ್ಲಾ ಜನಾಂಗದ ಬೀದಿಗಳ ಅಭಿವೃದ್ಧಿಗೆ ಎಲ್ಲಾ ಇಲಾಖೆಯಿಂದ ಅನುದಾನ ತಂದು ಶ್ರಮಿಸುತ್ತಿದ್ದೇನೆ. ವಿರೋಧ ಪಕ್ಷದವರು ಶಾಸಕರು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡುತ್ತಿಲ್ಲವೆಂದು ಅಪಪ್ರಚಾರ ನಡೆಸುತ್ತಿದ್ದಾರೆ. ಆದರೆ ನಾನು ಇಲ್ಲಿ ಯಾವುದೇ ಆಸ್ತಿ ಮಾಡಲು ಬಂದಿಲ್ಲ. ಕ್ಷೇತ್ರ ಅಭಿವೃದ್ಧಿ ಪಡಿಸುವುದೇ ನನ್ನ ಗುರಿ. ಅಪಪ್ರಚಾರ ಮಾಡಿದವರಿಗೆ ಮುಂದಿನ ದಿನಗಳಲ್ಲಿ ಕ್ಷೇತ್ರದ ಜನತೆಯೇ ಉತ್ತರ ನೀಡುತ್ತಾರೆ ಎಂದರು.



ಈ ವೇಳೆ ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷ ಚಿಕ್ಕರಂಗನಾಯಕ, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಮಹೇಶ್, ತಾಲೂಕು ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಅಬ್ದುಲ್ ರಜಾಕ್, ಗ್ರಾಪಂ ಉಪಾಧ್ಯಕ್ಷ ವೃಷಬೇಂದ್ರಪ್ಪ, ಗ್ರಾಪಂ ಸದಸ್ಯರಾದ ಮಲ್ಲಿಕಾರ್ಜುನ, ಬಸಪ್ಪ, ಗುರುಪ್ರಸಾದ್, ನಾಗೇಂದ್ರ, ಗಂಗಾಧರ್ ಮುಖಂಡರಾದ ಎಂ.ಪುಟ್ಟಸ್ವಾಮಿ, ಮಂಜು ಪಾಟೀಲ್, ಸಿದ್ದರಾಜು, ಬಸವರಾಜ್, ಮಹೇಶ್, ಚಂದ್ರು, ನೀರಾವರಿ ಇಲಾಖೆ ಸಹಾಯಕ ಕಾರ್ಯಪಾಲಕ ಕುಮಾರ ಸ್ವಾಮಿ ಸೇರಿದಂತೆ ಇತರರಿದ್ದರು.

ಮಹಿಳಾ ಶಿಕ್ಷಣಕ್ಕಾಗಿ ಹೋರಾಡಿದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ

ಮಹಿಳಾ ದಿನಾಚರಣೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಎನ್.ನಂದಿನಿ



ಹೆಚ್.ಡಿ.ಕೋಟೆ, ಏ.7(ಮಂಜು)– ಕಷ್ಟ ಕಾರ್ಪಣ್ಯದ ನಡುವೆ ಮಹಿಳೆಯರಿಗೆ ಶಿಕ್ಷಣ ನೀಡಬೇಕೆಂದು ಅಚಲವಾಗಿ ಹೋರಾಡಿದ ಸಾವಿತ್ರಿಬಾಯಿ ಫುಲೆ ದೇಶದ ಮೊದಲ ಶಿಕ್ಷಕಿ ಹಾಗೂ ಸ್ತ್ರೀವಾದಿ ಕೂಡ ಆಗಿದ್ದರು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಎನ್.ನಂದಿನಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರುವಾರ ತಾಲೂಕು ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ, ತಾಲೂಕು ಆಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

18ನೇ ಶತಮಾನದಲ್ಲಿ ಮಹಿಳೆಯರಿಗೆ ಶಿಕ್ಷಣ ಪಡೆಯುವ ಅವಕಾಶ ಸಿಗದ ಸಂದರ್ಭ ಸಾವಿತ್ರಿಬಾಯಿ ಫುಲೆ ಅವರು ಸ್ವತಃ ನೋವು ಅನುಭವಿಸಿ ಮಹಿಳೆಯರಿಗೆ ಶಿಕ್ಷಣ ನೀಡಿದ ದಿಟ್ಟ ಮಹಿಳೆ ಎಂದು ಪ್ರಶಂಸಿದರು.

ಸಂವಿಧಾನಬದ್ಧವಾಗಿ ಮಹಿಳೆಯರಿಗೆ ಹಕ್ಕುಗಳಿದ್ದರೂ, ಇಂದಿಗೂ ಆ ಹಕ್ಕುಗಳಿಗೆ ಹೋರಾಡಬೇಕಿದೆ. ಪ್ರಸ್ತುತ ಕಾನೂನಿನ ಅರಿವು ಮೂಡಿಸಿದರೂ, ರಾಜ್ಯದಲ್ಲಿ ಬಾಲ್ಯ ವಿವಾಹಗಳು ನಡೆಯುತ್ತಿವೆ. ಇದನ್ನು ಹೋಗಲಾಡಿಸಿ ಹೆಣ್ಣು ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ಕೊಡಿಸಲು ಪಾಲಕರು ಮುಂದಾಗಬೇಕು. ಮಹಿಳೆಯರ ಮೇಲಿನ ಶೋಷಣೆ, ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ ತಡೆಗಟ್ಟಲು ದೇಶದಲ್ಲಿ ಕಠಿಣ ಪೋಕ್ಸೋ ಕಾಯ್ದೆ ಜಾರಿಯಲ್ಲಿದೆ. ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ದೌರ್ಜನ್ಯ ತಡೆಗಟ್ಟಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಯುವ ಜನತೆ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣವನ್ನು ಅವಶ್ಯಕತೆಗೆ ತಕ್ಕಂತೆ ಬಳಸಬೇಕು. ಮಿತಿಮೀರಿ ಬಳಸಿದಲ್ಲಿ ತಮ್ಮ ಭವಿಷ್ಯಕ್ಕೆ ಕಂಟಕವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಮಹಿಳೆ ಹುಟ್ಟಿನಿಂದಲೇ ತ್ಯಾಗ ಮನೋಭಾವ ಹೊಂದಿದ್ದು, ಕುಟುಂಬದ ಜವಾಬ್ದಾರಿ ನಿಭಾಯಿಸುವ ಗುಣ ಹೊಂದಿರುತ್ತಾಳೆ. ನಮ್ಮ ಕುಟುಂಬದಲ್ಲಿ ಇಬ್ಬರು ತಾಯಿಂದರು, ಇಬ್ಬರು ಸಹೋದರಿಯರ ಜೊತೆ ಬೆಳೆದ ನಾನು ಮಹಿಳೆಯರ ಬಗ್ಗೆ ಗೌರವ ಹೊಂದಿದ್ದೇನೆ. ಹಾಗಾಗಿ ನನ್ನ ಅಧಿಕಾರಾವಧಿಯಲ್ಲಿ ನಡೆದ ಸಭೆ ಸಮಾರಂಭಗಳಲ್ಲಿ ಮಹಿಳಾ ಅಧಿಕಾರಿಗಳನ್ನು ಗೌರವಯುತವಾಗಿ ನಡೆಸಿಕೊಂಡಿದ್ದೇನೆ ಎಂದರು.

ಪ್ರಸ್ತುತ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದು, ರಾಜಕೀಯ ಕ್ಷೇತ್ರದಲ್ಲಿ ಇಂದಿರಾ ಗಾಂಧಿ, ಪ್ರತಿಭಾ ಪಾಟೀಲ್, ಕ್ರೀಡಾ ಕ್ಷೇತ್ರದಲ್ಲಿ ಪಿ.ವಿ. ಸಿಂಧೂ, ಬಾಹ್ಯಾಕಾಶ ಕ್ಷೇತ್ರದಲ್ಲಿ ಕಲ್ಪನಾ ಚಾವ್ಲಾ ಸೇರಿದಂತೆ ಅನೇಕ ಮಹಿಳೆಯರು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ ಎಂದರು.

ಪ್ರಧಾನ ಕಾರ್ಯದರ್ಶಿ ರೂಪ ಮಾತನಾಡಿ, ಸಾವಿತ್ರಿ ಬಾಯಿ ಫುಲೆ ಹೆಸರಿನಲ್ಲಿ ಸರ್ಕಾರ ಶಿಕ್ಷಕಿಯರ ಜಯಂತಿ ನಡೆಸಬೇಕು. ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿ ಶಿಕ್ಷಕಿಯರ ನಿರೀಕ್ಷಣಾ ಕೊಠಡಿಯನ್ನು ಶಾಸಕರ ಅನುದಾನದಲ್ಲಿ ನಿರ್ಮಿಸಿ ಕೊಡುವಂತೆ ಮನವಿ ಮಾಡಿದರು.

ಇದೇ ವೇಳೆ ಉದ್ಯೋಗಸ್ಥ ಮಹಿಳೆಯರ ಒತ್ತಡ ನಿವಾರಣೆ ಬಗ್ಗೆ ಮನಶಾಸ್ತ್ರಜ್ಞ ಡಾ.ವಸುಧಾರಾವ್ ಕಾರ್ಯಾಗಾರ ನಡೆಸಿಕೊಟ್ಟರು. ಸಾಮಾಜಿಕ ಜಾಲತಾಣದ ಜಯಪ್ಪ ಗ್ರಾಮೀಣ ಭಾಷೆ ಸೊಗಡಿನಲ್ಲಿ ಕೌಟುಂಬಿಕ ಹಾಸ್ಯ ಘಟನೆಗಳನ್ನು ಹೇಳುವ ಮೂಲಕ ರಂಜಿಸಿದರು.

ಸೇವಾ ಹಿರಿತನದ ಉತ್ತಮ ಶಿಕ್ಷಕಿಯರಿಗೆ, ಮಹಿಳಾ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಿಗೆ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಮತ್ತು ಅಂಗನವಾಡಿ ಸಹಾಯಕಿರಿಗೆ, ವಿವಿಧ ಇಲಾಖೆ ಮಹಿಳಾ ಅಧಿಕಾರಿಗಳನ್ನು, ಅಕ್ಷರ ದಾಸೋಹ ಸಿಬ್ಬಂದಿಗಳ ಮಕ್ಕಳನ್ನು ಇದೇ ಸಂದರ್ಭ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷೆ ಪಿ.ಪ್ರತಿಭಾ, ತಹಸೀಲ್ದಾರ್ ರತ್ನಾಂಬಿಕೆ, ಸಿಡಿಪಿಓ ಆಶಾ, ಅಬಕಾರಿ ನಿರೀಕ್ಷಕಿ ಗೀತಾ, ಪುರಸಭಾ ಉಪಾಧ್ಯಕ್ಷೆ ಗೀತಾ, ಸದಸ್ಯರಾದ ಶಾಂತಮ್ಮ, ಸುಹಾಸಿನಿ, ಕವಿತಾ, ರಾಜು ವಿಶ್ವಕರ್ಮ, ವೆಂಕಟೇಶ್, ಮಧುಕುಮಾರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಎಸ್.ಮಹದೇವು, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ, ಶಿಕ್ಷಕರಾದ ಮಂಜುನಾಥ್, ಸೋಮ ಸುಂದರ್, ಬಬಿತರಾಣಿ, ಭವಾನಿ, ಸ್ಮಿತಾಗ್ರೇಸ್, ರೂಪ, ಶಶಿಕಲಾ, ಪ್ರಭಾವತಿ, ಅನಿತಾ, ಮಂಜುಳ, ಸುಮಾ, ಪದ್ಮಾ ಇದ್ದರು.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಎಲ್‌ಎಸ್‌ಜಿಗೆ ಭರ್ಜರಿ ಜಯ

ಮುಂಬೈ, ಏ.7– ಕ್ವಿಂಟನ್ ಡಿಕಾಕ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ.



ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ನೀಡಿದ 150 ರನ್‌ಗಳ ಸಾಧಾರಣ ಮೊತ್ತ ಬೆನ್ನತ್ತಿದ ಲಖನೌ ಸೂಪರ್ ಜೈಂಟ್ಸ್‌ಗೆ ನಾಯಕ ಕೆ.ಎಲ್. ರಾಹುಲ್ ಹಾಗೂ ಕ್ವಿಂಟನ್ ಡಿಕಾಕ್ ಮೊದಲ ವಿಕೆಟ್‌ಗೆ 73 ರನ್‌ಗಳ ಜೊತೆಯಾಟ ವಾಡುವ ಮೂಲಕ ಭರ್ಜರಿ ಆರಂಭ ಒದಗಿಸಿದರು. ಈ ವೇಳೆ 24 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ರಾಹುಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಇವಿನ್ ಲೂಯಿಸ್ 5, ದೀಪಕ್ ಹೂಡಾ 11 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿ ಸಂಭ್ರಮಿಸಿದ ಡಿಕಾಕ್ 52 ಎಸೆತಗಳಲ್ಲಿ 9 ಬೌಂಡರಿ, 2 ಸಿಕ್ಸರ್ ಒಳಗೊಂಡ 80 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಒಂದಾದ ಕ್ರುನಾಲ್ ಪಾಂಡ್ಯ 19, ಆಯುಷ್ ಬದೋನಿ 10 ರನ್ ಗಳಿಸುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ಅಂತಿಮವಾಗಿ ಲಖನೌ 19.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿ ಜಯ ಸಾಧಿಸಿತು. ಡೆಲ್ಲಿ ಪರ ಕುಲದೀಪ್ ಯಾದವ್ 2, ಶಾರ್ದೂಲ್ ಠಾಕೂರ್ ಹಾಗೂ ಲಲಿತ್ ಯಾದವ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 149 ರನ್ ಗಳಿಸಿತು. ತಂಡದ ಪರ ಆರಂಭಿಕ ಆಟಗಾರ ಪೃಥ್ವಿ ಷಾ ಬಿರುಸಿನ 61 ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ ಡೇವಿಡ್ ವಾರ್ನರ್ 4, ರೋವ್ಮನ್ ಪೋವೆಲ್ 3 ರನ್ ಗಳಿಸಿ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ನಂತರ ಬಂದ ನಾಯಕ ರಿಷಬ್ ಪಂತ್ 39 ರನ್ ಹಾಗೂ ಸರ್ಫರಾಜ್ ಖಾನ್ 36 ರನ್ ಗಳಿಸಿದರು. ಅಲ್ಲದೇ ಮುರಿಯದ ನಾಲ್ಕನೇ ವಿಕೆಟ್‌ಗೆ 75 ರನ್ ಜೊತೆಯಾಟವಾಡಿದರು. ಲಖನೌ ಪರ ರವಿ ಬಿಷ್ಣೋಯಿ 2, ಕೆ.ಗೌತಮ್ 1 ವಿಕೆಟ್ ಉರುಳಿಸಿದರು. ಕ್ವಿಂಟನ್ ಡಿಕಾಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ದಾರಿದೀಪ ಚಾರಿಟೇಬಲ್ ಟ್ರಸ್ಟ್ (ರಿ), ಮೈಸೂರು
ಎಲ್ಲರಿಗೂ ಹೊಸ ಸಂವತ್ಸರದ
ಯುಗಾದಿ ಹಬ್ಬದ ಶುಭಾಶಯಗಳು
ದಾರಿದೀಪ ಜನ ಸೇವಾ ಕೇಂದ್ರ, ಮೈಸೂರು
ಉದ್ಘಾಟನಾ ಸಮಾರಂಭ
ದಿನಾಂಕ:
08.04.2022 ಶುಕ್ರವಾರ,
ಸಂಜೆ 5 ಗಂಟೆಗೆ
ಸ್ಥಳ:
ಆದಿಚುಂಚನಗಿರಿ ರಸ್ತೆ, ಅರವಿಂದ ಆಸ್ಪತ್ರೆ
ಮುಂಭಾಗ, ಅರವಿಂದನಗರ, ಮೈಸೂರು
ಸರ್ವರಿಗೂ ಆತ್ಮೀಯ ಆಮಂತ್ರಣ
ಎಂ. ಪ್ರದೀಪ್ ಕುಮಾರ್.ಎಂ.ಬಿ.ಎ, ಮಾಜಿ ನಗರಪಾಲಿಕೆ ಸದಸ್ಯರು,
ಕಾಂಗ್ರೆಸ್ ಮುಖಂಡರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ಅಧ್ಯಕ್ಷರು: ದಾರಿ ದೀಪ ಚಾರಿಟೇಬಲ್ ಟ್ರಸ್ಟ್(ರಿ), ಮೊ: 9886041227


ದಾರಿದೀಪ
ಚಾರಿಟೇಬಲ್ ಟ್ರಸ್ಟ್ (ರಿ.)
ನಮ್ಮ ಆತ್ಮೀಯ ಸ್ನೇಹಿತರು ಹಾಗೂ ನಗರಪಾಲಿಕೆ ಮಾಜಿ ಸದಸ್ಯರಾದ
ಎಂ. ಪ್ರದೀಪ್‌ಕುಮಾರ್ ರವರು
ದಾರಿದೀಪ ಚಾರಿಟೇಬಲ್ ಟ್ರಸ್ಟ್ (ರಿ.) ದಿನಾಂಕ 08.04.2022 ರಂದು
ಪ್ರಾರಂಭಿಸುತ್ತಿದ್ದು, ತಾಯಿ ಚಾಮುಂಡೇಶ್ವರಿ ಇವರಿಗೆ ಮುಂದಿನ ದಿನಗಳಲ್ಲಿ ಇನ್ನೂ
ಹೆಚ್ಚಿನ ಜನಸೇವೆ ಮಾಡಲು ಶಕ್ತಿ ಮತ್ತು ಅಧಿಕಾರ ನೀಡಲೆಂದು ಕೇಳಿಕೊಳ್ಳುತ್ತೇವೆ.
ಶುಭಕೋರುವವರು
ಶ್ರೀ ಗುರು ಸ್ಟೋನ್ ಕ್ರಷರ್ ಗ್ರೂಪ್, ಮೈಸೂರು
ಲಯನ್ ಎಲ್. ಕೆ. ಜಯರಾಮ್
ಅಧ್ಯಕ್ಷರು
ರೈತಬಂಧು ಕ್ಷೇಮಾಭಿವೃದ್ಧಿ ಮತ್ತು
ಉತ್ಪಾದಕರ ಸಂಘ ಹಾಗೂ
ಸಮಾಜ ಸೇವಕರು
ಪಿ. ಎಸ್. ಜಗದೀಶ್ ಪಶುಪತಿ
ಉಪಾಧ್ಯಕ್ಷರು, ಗ್ರಾಮ ಪಂಚಾಯಿತಿ,
ಹೊನ್ನೇನಹಳ್ಳಿ, ಕೆ.ಆರ್.ನಗರ ತಾಲ್ಲೂಕು
ಎಂ.ಪಿ.ಮಧು
ಪ್ರೊಪ್ರೈಟರ್- ಸ್ಫೂರ್ತಿ ಡೆವಲಪರ್ಸ್ &
ಇನ್ಫ್ರಾಸ್ಟ್ರಕ್ಚರ್ ಹಾಗೂ ಸಮಾಜ ಸೇವಕರು
ಸಿ.ಎ.ಮಹೇಶ್
ಮಾಲೀಕರು, ಆಶೀರ್ವಾದ್ ರೆಡಿ ಮಿಕ್ಸ್ ಕಾಂಕ್ರಿಟ್, ಮೈಸೂರು
ಎಂ.ಎಸ್.ಜಗದೀಶ
ಭರಣಿ ಹಾರ್ಡ್‌ವೇರ್ ಮಾಲೀಕರು,
ವಿಜಯನಗರ 4ನೇ ಹಂತ, ಮೈಸೂರು